ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೩

**ಪಟ್ಟಿ – ೧೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೇಯ ಮುಂದುವರೆದ ಅಧಿವೇಶನ**

**ಬುಧವಾರ, ದಿನಾಂಕ : ೧೮ನೇ ಮಾರ್ಚ್ , ೨೦೨೬**

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ನಗರ ಆಶ್ರಯ ಯೋಜನೆಯಡಿ ನಿವೇಶನ ಮಂಜೂರಾತಿ ಕುರಿತು

**ಡಾ॥ ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) :–**

೧೩೯೬ (೧೭೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿವಂಗತ ಅಪ್ಪುರಾವ್ ಗುಲ್ವಾಡಿಯ ರವರ ಮನವಿಯ ಮೇರೆಗೆ ಬೆಂಗಳೂರಿನ ಜಯನಗರ ಹಾಗೂ ಇತರೆ ಸ್ಥಳಗಳಲ್ಲಿ ವಾಸಿಸುತ್ತಿದ್ದು ದಲಿತ ಕ್ರಿಯಾ ಸಮಿತಿಯ ಸದಸ್ಯರಿಗೆ ಆಶ್ರಯ ಯೋಜನೆಯಡಿ ನಿವೇಶನ ನೀಡಲು ಬೆಂಗಳೂರು ದಕ್ಷಿಣ, ಉತ್ತರ ಹಾಗೂ ಪೂರ್ವ (ಅಪರ) ತಾಲ್ಲೂಕಿನ ತಹಶೀಲ್ದಾರರಿಂದ ವರದಿ ಪಡೆದು, ನಿವೇಶನ ಹಂಚಿಕೆ ಮಾಡುವ ಸಲುವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಪತ್ರ ಬರೆಯಲಾಗಿದೆಯೇ ; ಸಂಖ್ಯೆ ಆಶ್ರಂಯು/ಸಿಆರ್–೧೨೬/೨೦೦೨–೦೩, ದಿನಾಂಕ: ೨೦.೦೯.೨೦೨೪ರಂದು ಹಾಗಿದ್ದಲ್ಲಿ, ಅರ್ಹ ೧೩೦೦ ಫಲಾನುಭವಿಗಳ ಪೈಕಿ ಎಷ್ಟು ಜನರಿಗೆ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ ; (ವಿವರಗಳನ್ನು ಒದಗಿಸುವುದು)

(ಆ) ಸದರಿ ವಿಷಯಕ್ಕೆ ಸಂಬಂಧಿಸಿದಂತೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ದಿನಾಂಕ : ೨೬–೦೨–೨೦೦೮ (ಪತ್ರ ಸಂಖ್ಯೆ RGRHCL 12 MIS 440 2000-3164) ದಿನಾಂಕ; ೧೩–೦೯–೨೦೧೨ (ಪತ್ರ ಸಂಖ್ಯೆ RGRHCL 12 MIS 890 2000) ಹಾಗೂ ದಿನಾಂಕ : ೦೬.೦೩.೨೦೧೩ ರಂದು (ಪತ್ರ ಸಂಖ್ಯೆ RGRHCL 12 MIS 954 2000) ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರಗಳ ಮೇಲೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕೈಗೊಂಡ ಕ್ರಮಗಳೇನು ; (ವಿವರ ಮಾಹಿತಿ ಒದಗಿಸುವುದು)

(ಇ) ಸದರಿ ದಲಿತ ಕ್ರಿಯಾ ಸಮಿತಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿಯು ತಲುಪಿದೆಯೇ ; ತಲುಪಿದ್ದಲ್ಲಿ ಪತ್ರದ ಮೇಲೆ ಕೈಗೊಳ್ಳಲಾದ ಕ್ರಮಗಳೇನು ? (ವಿವರ ಒದಗಿಸುವುದು)

## ಮಂಡ್ಯ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪಿಸುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೩೯೭ (೧೬೮೨) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಪಶು ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ; ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ ; (ವಿವರ ನೀಡುವುದು)

(ಆ) ಕೃಷಿ ಪ್ರಧಾನ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ರೈತರು ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ ಹಾಗಾಗಿ ಮಂಡ್ಯ ಜಿಲ್ಲೆಯಲ್ಲೂ ಪಶು ವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಸರ್ಕಾರದ ನಿಲುವೇನು ; (ಸಂಪೂರ್ಣ ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು; ಜಾನುವಾರು ಗಣತಿಯನ್ನು ಕೊನೆಯದಾಗಿ ಯಾವಾಗ ಕೈಗೊಳ್ಳಲಾಗಿತ್ತು ; (ಜಾನುವಾರು ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು)

(ಈ) ಮಂಡ್ಯ ಜಿಲ್ಲೆಗೆ ಮಂಜೂರಾದ ಪಶು ವೈದ್ಯರ ಸಂಖ್ಯೆ ಎಷ್ಟು; ಪ್ರಸ್ತುತ ಎಷ್ಟು ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ;

(ಉ) ಜಾನುವಾರುಗಳ ಒಟ್ಟು ಸಂಖ್ಯೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯರ ಅನುಪಾತವನ್ನು ಲೆಕ್ಕಹಾಕಿದಾಗ ಎಷ್ಟು ಸಂಖ್ಯೆಯ ಜಾನುವಾರುಗಳಿಗೆ ಒಬ್ಬ ವೈದ್ಯರ ಸೇವೆ ದೊರೆಯಲಿದೆ ; (ವಿವರ ನೀಡುವುದು)

(ಊ) ಜಿಲ್ಲೆಯಲ್ಲಿ ಪಶು ವೈದ್ಯರ ಸಂಖ್ಯೆ ಕಡಿಮೆಯಿದ್ದು, ಹುದ್ದೆಗಳ ಭರ್ತಿಗೆ ಸರ್ಕಾರದ ಕ್ರಮವೇನು ?

## ಮುಜರಾಯಿ ಇಲಾಖೆಯ ದೇವಸ್ಥಾನಗಳ ಆಡಳಿತ ಮತ್ತು ಪಾರದರ್ಶಕತೆ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೭೮ (೧೬೭೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ದೇವಸ್ಥಾನಗಳ ವರ್ಗೀಕರಣ (A, B, C ವರ್ಗ) ಯಾವ ಮಾನದಂಡದ ಆಧಾರದ ಮೇಲೆ ಮಾಡಲಾಗಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ನಡೆದ ಆಡಿಟ್ ವರದಿಗಳಲ್ಲಿ ಕಂಡುಬಂದ ಅಕ್ರಮಗಳು ಯಾವುವು ; ಸರ್ಕಾರ ತೆಗೆದುಕೊಂಡ ಕ್ರಮಗಳು ಏನು ;

(ಈ) ಮುಜರಾಯಿ ದೇವಸ್ಥಾನಗಳ ವಾರ್ಷಿಕ ಆದಾಯ ಎಷ್ಟು ; ಅದರಲ್ಲಿ ಸರ್ಕಾರದ ಪಾಲು ಎಷ್ಟು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಪಶು ಆರೋಗ್ಯ ಮತ್ತು ಪಶು ವೈದ್ಯಕೀಯ ಸೇವೆಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೩೯೯ (೧೬೯೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಪಶು ವೈದ್ಯಕೀಯ ಆಸ್ಪತ್ರೆಗಳು ಹಾಗೂ ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಖಾಲಿ ಇರುವ ಪಶು ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ; ಅವುಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು ; (ಪೂರ್ಣ ಮಾಹಿತಿ ಒದಗಿಸುವುದು)

(ಇ) ಲಂಪಿ ಸ್ಕಿನ್ ರೋಗ, ಕಾಲು–ಬಾಯಿ ರೋಗ ಮುಂತಾದ ಸಾಂಕ್ರಾಮಿಕ ರೋಗಗಳ ತಡೆಗಾಗಿ ಸರ್ಕಾರ ಕೈಗೊಂಡ ಕ್ರಮಗಳು ಯಾವುವು ;

(ಈ) ಉಚಿತ ಲಸಿಕೆ ಕಾರ್ಯಕ್ರಮಗಳು ಯಾವುವು ;

(ಉ) ಕಳೆದ ಮೂರು ವರ್ಷಗಳಲ್ಲಿ ಕೈಗೊಂಡ ಲಸಿಕೆ ಕಾರ್ಯಕ್ರಮಗಳು ಯಾವುವು ?

## ರೇಷ್ಮೆ ಇಲಾಖೆಯಿಂದ ಫಲಾನುಭವಿಗಳಿಗೆ ನೀಡುತ್ತಿರುವ ಸಲಕರಣೆಗಳ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೦೦ (೧೬೩೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೇಷ್ಮೆ ಇಲಾಖೆಯಿಂದ ಸಲಕರಣೆಗಳನ್ನು ಮತ್ತು ಸೋಂಕು ನಿವಾರಕವನ್ನು ಯಾವ ರೀತಿಯಲ್ಲಿ ರೈತರಿಗೆ ನೀಡಲಾಗುತ್ತಿದೆ ;

ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ನೀಡುತ್ತಿರುವ ಹಾಗೆ ರೇಷ್ಮೆ ಇಲಾಖೆಯಲ್ಲಿಯೂ ಸಹ ನೀಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು ;

(ಆ) ಕೃಷಿ ಇಲಾಖೆ ಮತ್ತು ತೋಟಗಾರಿಕಾ ಬೆಳೆಗಳಿಗೆ ವಿಮಾ ಪದ್ಧತಿ ಜಾರಿಯಲ್ಲಿರುವುದರಿಂದ ಸದರಿ ಬೆಳೆಗಳು ಹವಾಮಾನ ವೈಪರೀತ್ಯಗಳಿಂದ ನಷ್ಟಕ್ಕೆ ಒಳಗಾದಲ್ಲಿ ಬೆಳೆ ವಿಮಾ ಪದ್ಧತಿ ಸಹಾಯಕ್ಕೆ ಬರುವಂತೆ ರೇಷ್ಮೆ ಕೃಷಿಗೂ ಸಹ ಬೆಳೆ ವಿಮಾ ಪದ್ಧತಿಯನ್ನು ಜಾರಿಗೊಳಿಸಲು ಸರ್ಕಾರ ಚಿಂತಿಸಿದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಈ ಪದ್ಧತಿಯನ್ನು ಜಾರಿಗೊಳಿಸಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಪ್ರಸ್ತುತ ರೇಷ್ಮೆಗೂಡಿಗೆ ವೈಜ್ಞಾನಿಕವಾಗಿ ಕನಿಷ್ಠ ಬೆಂಬಲ ಬೆಲೆಯನ್ನು ಹಾಗೂ ರೇಷ್ಮೆ ಗೂಡಿಗೆ ಪ್ರೋತ್ಸಾಹಧನವನ್ನು ಎಷ್ಟು ನೀಡಲಾಗುತ್ತಿದೆ ; ಸದರಿ ಬೆಲೆಯನ್ನು ಹೆಚ್ಚಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ರೇಷ್ಮೆ ಇಲಾಖೆಯಲ್ಲಿ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳು ಎಷ್ಟಿವೆ ; ಬಾಕಿಯಿರುವ ಹುದ್ದೆಗಳು ಎಷ್ಟು ; ಬಾಕಿಯಿರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ತುಂಬಲಾಗುವುದು ; (ಪ್ರತಿ ಜಿಲ್ಲಾ ವೃಂದವಾರು/ಹುದ್ದೆವಾರು ಸಂಪೂರ್ಣವಾದ ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ರೇಷ್ಮೆ ಕೃಷಿಯ ಉಳಿವಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ; ಸದರಿ ಸಂಸ್ಥೆಯಲ್ಲಿ ಹಾಲಿ ನಿರ್ದೇಶಕರ ಹುದ್ದೆಗೆ ಐಎಎಸ್ ಅಧಿಕಾರಿಗಳನ್ನು ನೇಮಿಸುವ ಪದ್ಧತಿಯನ್ನು ಕೈಬಿಟ್ಟು ಅದೇ ಅಭಿವೃದ್ಧಿ ಸಂಸ್ಥೆಯಲ್ಲಿ ಸುಧೀರ್ಘವಾಗಿ ಸೇವೆ ಸಲ್ಲಿಸುತ್ತಿರುವ

ಹಿರಿಯ ವಿಜ್ಞಾನಿಗಳನ್ನು ನಿರ್ದೇಶಕರಾಗಿ ನೇಮಿಸುವುದರಿಂದ ರೇಷ್ಮೆ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಹಾಯವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲ್ಲದಿದ್ದಲ್ಲಿ, ನಿರ್ದೇಶಕರ ನೇಮಕ ಕುರಿತು ಯಾವ ಕ್ರಮ ಕೈಗೊಳ್ಳಲಾಗುವುದು ? (ಸಂಪೂರ್ಣವಾದ ಮಾಹಿತಿ ನೀಡುವುದು)

## ಭೂ ಸಕ್ರಮೀಕರಣದ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೧ (೧೫೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ನಮೂನೆ ೫೦, ೫೩, ೫೭ ರಲ್ಲಿ ಭೂ ಸಕ್ರಮೀಕರಣಕ್ಕೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು ; ಇದರಲ್ಲಿ ಈವರೆಗೂ ಮಂಜೂರಾತಿಯಾದ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಮಂಜೂರಾತಿಯಾದ ಬಾಕಿ ಉಳಿದ ಅರ್ಜಿಗಳು ಯಾವ ಕಾರಣಕ್ಕೆ ಮಂಜೂರಾತಿ ಮಾಡಲು ವಿಳಂಬವಾಗುತ್ತಿದೆ ; ಇದರ ಬಗ್ಗೆ ಸಂಕ್ಷಿಪ್ತವಾದ ಮಾಹಿತಿ ನೀಡುವುದು ;

(ಇ) ಭೂ ಮಂಜೂರಾತಿ ವಿಚಾರಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ನಮೂನೆ ೫೭ ರಲ್ಲಿ ಸಲ್ಲಿಕೆಯಾದ ಅರ್ಜಿಗಳ ಪೈಕಿ ಈವರೆಗೂ ಮಂಜೂರಾತಿಯಾಗಿರುವ ಹಕ್ಕುಪತ್ರಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಅಲ್ಪಸಂಖ್ಯಾತರ ವಸತಿ ನಿಲಯಗಳ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೨ (೧೫೮೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿರುವ ಒಟ್ಟು ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಹಾಗೂ ವಸತಿ ಶಾಲೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ಎರಡು ವರ್ಷಗಳಲ್ಲಿ ಸದರಿ ವಸತಿ ನಿಲಯಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಮಂಜೂರಾದ ಅನುದಾನ ಎಷ್ಟು ; ಸದರಿ ಅನುದಾನದಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಆಹಾರ ಸರಬರಾಜು ಅನುದಾನದಲ್ಲಿ ವಸತಿ ನಿಲಯ, ವಸತಿ ಶಾಲೆಗಳ ನಿರ್ವಹಣೆಗೆ ಹಾಗೂ ಇತರೆ ಕಾಮಗಾರಿಗಳಿಗೆ ಅನುದಾನ ಉಪಯೋಗಿಸಲು ಅವಕಾಶವಿದೆಯೇ ;

(ಈ) ಅವಕಾಶವಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಸದರಿ ಮಂಜೂರಾದ ಅನುದಾನದಲ್ಲಿ ವಸತಿ ಶಾಲೆ ಹಾಗೂ ವಸತಿ ನಿಲಯಗಳ ನಿರ್ವಹಣೆಗೆ ಮತ್ತು ಇತರೆ ಕಾಮಗಾರಿಗಳಿಗೆ ಉಪಯೋಗಿಸಿದ ಅನುದಾನ ಎಷ್ಟು ? (ಜಿಲ್ಲಾವಾರು ಸಂಪೂರ್ಣವಾದ ಮಾಹಿತಿ ನೀಡುವುದು)

## ಅಲ್ಪಸಂಖ್ಯಾತ ಮಹಿಳಾ ಪ್ರಥಮ ದರ್ಜೆ ಕಾಲೇಜು ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೩ (೧೭೧೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫-೨೬ನೇ ಸಾಲಿನಲ್ಲಿ ಮಂಜೂರಾದ ಅಲ್ಪಸಂಖ್ಯಾತ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ಇದಕ್ಕಾಗಿ ಸರ್ಕಾರ ಮೀಸಲಿಟ್ಟ ಅನುದಾನ ಎಷ್ಟು ;

(ಆ) ಮಂಜೂರಾದ ಕಾಲೇಜುಗಳ ಪೈಕಿ ಎಷ್ಟು ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ ; ಎಷ್ಟು ಕಾಲೇಜುಗಳು ನಿರ್ಮಾಣ ಹಂತದಲ್ಲಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಮಹಿಳಾ ಪ್ರಥಮ ದರ್ಜೆ ಕಾಲೇಜು ಕಟ್ಟಡಗಳು ಯಾರ ಸುಪರ್ದಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ?

## ಕಾಮಧೇನು ಸಮುದಾಯ ಬೇಸಾಯ ಸಹಕಾರಿ ಸಂಘದ ಶೇರುದಾರರಿಗೆ ಅಧಿಕೃತವಾಗಿ ಸರ್ಕಾರದಿಂದ ಜಮೀನು ಮಂಜೂರು ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೪ (೧೬೫೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ 'ಕಾಮಧೇನು ಸಮುದಾಯ ಬೇಸಾಯ ಸಹಕಾರಿ ಸಂಘ'(ರಿ) ಇವರ ಜವಳಗೇರಾ ಹೋಬಳಿಯ ತುರಕಟ್ಟಿ, ಸುಲ್ತಾನ್‌ಪುರ ಗ್ರಾಮ ಮತ್ತು ವಲ್ಕಂದಿನ್ನಿ ಹೋಬಳಿಯ ಬನ್ನಿಗನೂರು ಗ್ರಾಮದ ಸುಮಾರು ೧೬೬ ಎಕರೆ ೧೬ ಗುಂಟೆ ಜಮೀನನ್ನು ಸದರಿ ಸಂಘದ ೮೩ ಜನ ಶೇರುದಾರರಿಗೆ ತಲಾ ೨ ಎಕರೆಯಂತೆ ಈ ಹಿಂದೆ ಹಂಚಿಕೆ ಮಾಡಿದ್ದು, ಸುಮಾರು ೫೦ ವರ್ಷಗಳಿಂದ ಸದರಿ ಶೇರುದಾರರು ಸಾಗುವಳಿ ಮಾಡುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಸಂಘವು ಸರ್ಕಾರದಿಂದ ಸಾಲ–ಸಹಾಯಧನ ಪಡೆದು ಜಮೀನನ್ನು ಖರೀದಿಸಿದ್ದು, ಸಂಘವು ಸಮಾಪನೆಗೊಂಡ ನಂತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದವರಾಗಿದ್ದ ೮೩ ಜನ ಶೇರುದಾರರು ಆರ್ಥಿಕವಾಗಿ ದುರ್ಬಲರಾಗಿದ್ದ ಕಾರಣದಿಂದಾಗಿ ಸರ್ಕಾರದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಲು ಸಾಧ್ಯವಾಗಿಲ್ಲದಿರುವುದರಿಂದ ೧೯೯೦ರಲ್ಲಿ ಪಹಣಿಯಲ್ಲಿ ಕರ್ನಾಟಕ ಸರ್ಕಾರವೆಂದು ಹೆಸರು ಬದಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಪ್ರಸ್ತುತ ಸದರಿ ೮೩ ಜನ ಶೇರುದಾರರ ಕುಟುಂಬಗಳು ಸರ್ಕಾರಕ್ಕೆ ಮರುಪಾವತಿ ಮಾಡಬೇಕಿರುವ ಸಾಲವನ್ನು ಮರುಪಾವತಿ ಮಾಡಲು ಸಿದ್ಧರಿದ್ದು, ಯಾವ ಅಧಿಕಾರಿಗಳು ಸಹ ಸದರಿ ಮೊತ್ತವನ್ನು ಅವರಿಂದ ಪಡೆಯಲು ಮುಂದಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇದೇ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಸಂಭವಿಸಿದ್ದಲ್ಲಿ, ಸರ್ಕಾರದಿಂದ ಯಾವ ಕ್ರಮವಹಿಸಲಾಗಿರುತ್ತದೆ ;

(ಉ) ಸದರಿ ಕುಟುಂಬಗಳು ಇತರೆ ಯಾವುದೇ ಪಟ್ಟಾ ಜಮೀನನ್ನು ಹೊಂದದ ಕಾರಣದಿಂದಾಗಿ ಇದೇ ಜಮೀನನ್ನು ಸಾಗುವಳಿ ಮಾಡಿ ಜೀವನ ನಡೆಸುತ್ತಿದ್ದು, ಸದರಿ ಸಾಗುವಳಿದಾರರಿಗೆ ಜಮೀನನ್ನು ಅಧಿಕೃತವಾಗಿ ಮಂಜೂರು ಮಾಡುವ ಸಂಬಂಧ ಸರ್ಕಾರದ ನಿಲುವೇನು ?

## ಎಂ.ಡಿ.ಆರ್ ರಸ್ತೆಯನ್ನು 'ರಾಜ್ಯ ಹೆದ್ದಾರಿ' ಯಾಗಿ ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೫ (೧೬೫೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ಪಿಡಬ್ಲ್ಯೂಡಿ ಕ್ಯಾಂಪ್‌ನಿಂದ ಅಲಬನೂರು–ಜವಳಗೇರಾ–ಬಳಗನೂರು ಮಾರ್ಗವಾಗಿ ಮಸ್ಕಿವರೆಗಿನ ಸುಮಾರು ೩೭ಕಿ.ಮೀ ರಸ್ತೆಯಲ್ಲಿ ಅಧಿಕ ಸಂಖ್ಯೆ ಸಾರ್ವಜನಿಕ ಮತ್ತು ಇತರೆ ಖಾಸಗಿ ವಾಹನಗಳು ದಿನನಿತ್ಯ ಚಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ರಸ್ತೆಯನ್ನು ಸುರಕ್ಷತೆ ಹಾಗೂ ಸುಗಮ ಸಂಚಾರದ ಹಿತದೃಷ್ಟಿಯಿಂದ 'ರಾಜ್ಯ ಹೆದ್ದಾರಿ'ಯಾಗಿ ಘೋಷಿಸುವ ಕುರಿತು ಸರ್ಕಾರದ ನಿಲುವೇನು ;

(ಇ) ಯಾವ ಕಾಲಮಿತಿಯೊಳಗೆ ಸದರಿ ರಸ್ತೆಯನ್ನು 'ರಾಜ್ಯ ಹೆದ್ದಾರಿ'ಯಾಗಿ ಮೇಲ್ದರ್ಜೆಗೇರಿಸಿ, ಅಭಿವೃದ್ಧಿಗೊಳಿಸಲಾಗುವುದು ?

## ಸಿಂಧನೂರು ತಾಲ್ಲೂಕಿನ ಗ್ರಾಮಗಳಲ್ಲಿ ಬಸ್ ನಿಲ್ದಾಣ ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೬ (೧೬೫೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ಜವಳಗೇರಾ, ದಡೇಸೂಗೂರು, ಬಾದರ್ಲಿ, ಗಾಂಧಿನಗರ ಹಾಗೂ ಸಾಲಗುಂದ ಗ್ರಾಮಗಳಲ್ಲಿ ಬಸ್ ನಿಲ್ದಾಣವಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣ ಅಭಿವೃದ್ಧಿಪಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಯಾವ ಕಾಲಮಿತಿಯೊಳಗೆ ಸದರಿ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುವುದು ?

## ಸಿಂಧನೂರು ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೭ (೧೬೫೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿನ ಸಿಂಧನೂರು ತಾಲ್ಲೂಕಿನ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಸದರಿ ಅನುದಾನದಲ್ಲಿ ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು ; (ವಿವರ ನೀಡುವುದು)

(ಇ) ಪೂರ್ಣಗೊಳ್ಳಲು ಬಾಕಿಯಿರುವ ಕಾಮಗಾರಿಗಳು ಎಷ್ಟು ? (ವಿವರ ನೀಡುವುದು)

## ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿರುವ ವಕ್ಫ್ ಆಸ್ತಿಗಳ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೦೮ (೧೬೫೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಎಕರೆ ವಕ್ಫ್ ಆಸ್ತಿ ಇದೆ ;

(ಆ) ಸದರಿ ಆಸ್ತಿಯಲ್ಲಿ ಖಾಸಗಿಯವರ ಅತಿಕ್ರಮಣವಾಗಿದೆಯೇ ;

(ಇ) ಸದರಿ ವಕ್ಫ್ ಆಸ್ತಿಯನ್ನು ರಕ್ಷಿಸಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು ?

## ಗುತ್ತಿಗೆಗೆ ಭೂಮಿಯನ್ನು ನೀಡಿರುವ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :–**

೧೪೯೯ (೧೬೪೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಭೂಮಿ ನೀಡಿಕೆ ನಿಯಮಗಳು ೧೯೬೯ರನ್ವಯ ಗುತ್ತಿಗೆ ಅವಧಿಯ ಮಾನದಂಡಗಳೇನು ; ಸದರಿ ಗುತ್ತಿಗೆ ಅವಧಿಯು ೧೦ ವರ್ಷಗಳು ಮೀರಿದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಮತ್ತು ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಭೂಮಿಗೆ ಪಾವತಿಸಬೇಕಾದ ಬಾಡಿಗೆಯನ್ನು ನಿಗಧಿಗೊಳಿಸಬೇಕೆಂಬುದು ಸರ್ಕಾರದ ಗಮನದಲ್ಲಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಗುಂಜೂರು ಗ್ರಾಮದಲ್ಲಿ ೬ ಎಕರೆ ಭೂಮಿಯನ್ನು ಮೆ:ಗುಂಜೂರು ಕ್ಲಬ್‌ಗೆ ೩೦ ವರ್ಷಗಳಿಗೆ ೨೨ನೇ ಮೇ ೨೦೧೩ರಿಂದ ಗುತ್ತಿಗೆ ನೀಡಲು ೨೨ನೇ ಡಿಸೆಂಬರ್ ೨೦೧೨ರಂದು ಸರ್ಕಾರವು ಅನುಮೋದಿಸಿರುವುದು ಸರ್ಕಾರದ ಗಮನದಲ್ಲಿದೆಯೇ ; ಎಕರೆ ಒಂದಕ್ಕೆ ರೂ.೬ ಲಕ್ಷದಂತೆ ಪ್ರತಿ ೨ ವರ್ಷಗಳಿಗೆ ಒಂದು ಸಲ ಶೇಕಡ ೧೦ ರಂತೆ ಹೆಚ್ಚಿಸುವ ಷರತ್ತಿನೊಂದಿಗೆ ನಿಗಧಿಪಡಿಸಿರುವುದು ಸರ್ಕಾರದ ಗಮನದಲ್ಲಿದೆಯೇ ; ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಇ) ಅವಧಿಯು ಮುಗಿದು ಹೋಗಿದ್ದ ಮೊದಲ ವರ್ಷದ ಗುತ್ತಿಗೆ ಅವಧಿಗೆ ವರ್ಷ ಒಂದಕ್ಕೆ ೨೪ ಲಕ್ಷ ಮೊತ್ತದ ರಾಜಸ್ವ ನಷ್ಟವಾಗಿದ್ದು, ಇದರಿಂದಾಗಿ ಗುತ್ತಿಗೆ ಅವಧಿಯಲ್ಲಿ ಸರ್ಕಾರಕ್ಕೆ ಪುನರಾವರ್ತಕ ನಷ್ಟ ಸಂಭವಿಸಿದ್ದು, ಮಾರ್ಗಸೂಚಿ/ಮಾರುಕಟ್ಟೆ ಬೆಲೆ ಪ್ರಕಾರ ಬಾಡಿಗೆಯನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು ; ಯಾವ ಕಾಲಮಿತಿಯೊಳಗೆ ವಸೂಲಾತಿ ಮಾಡಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಈ) ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ೧೦ ವರ್ಷಗಳ ಗುತ್ತಿಗೆ ಅವಧಿಗೆ ಕಂದಾಯ ಇಲಾಖೆಯಿಂದ ಭೂಮಿಯನ್ನು ಪಡೆದುಕೊಂಡಿರುವವರ ಮತ್ತು ಯಾವ ಉದ್ದೇಶಕ್ಕಾಗಿ ಭೂಮಿಯನ್ನು ಪಡೆಯಲಾಗಿರುವ ಮಾಹಿತಿಯನ್ನು ನೀಡುವುದು; ೧೦ ವರ್ಷಗಳ ಗುತ್ತಿಗೆ ಅವಧಿಯು ಮೀರಿದ್ದರೂ ಸಹ ಸರ್ಕಾರದ ಪೂರ್ವಾನುಮತಿ ಪಡೆಯದೇ ಭೂಮಿಯನ್ನು ಬಳಸುತ್ತಿರುವವರ ಸಂಪೂರ್ಣವಾದ ಮಾಹಿತಿ ನೀಡುವುದು ?

## ಓ.ಬಿ.ಸಿ. ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಮಾಣ ಪತ್ರ ಪಡೆಯುವ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೪೧೦ (೧೬೦೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಓ.ಬಿ.ಸಿ. ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಮಾಣ ಪತ್ರ ಪಡೆಯಲು, ಕೇಂದ್ರ ಸರ್ಕಾರದ ನಿಯಮಗಳನ್ನು ರಾಜ್ಯ ಸರ್ಕಾರ ಅನುಸರಿಸುತ್ತಿದೆಯೇ ;

(ಆ) ಸದರಿ ಪ್ರಮಾಣ ಪತ್ರ ಪಡೆಯುವಾಗ ಗ್ರೂಪ್ ಬಿ ಮಹಿಳಾ ಅಧಿಕಾರಿ ೪೦ ವರ್ಷದ ನಂತರ ಗ್ರೂಪ್ ಎ ಹುದ್ದೆಗೆ ಬಡ್ತಿ ಪಡೆದಲ್ಲಿ ಸದರಿ ಅಧಿಕಾರಿಯ ಸಂಬಳವನ್ನು ವಾರ್ಷಿಕ ಆದಾಯಕ್ಕೆ ಪರಿಗಣಿಸಲಾಗುತ್ತಿದೆಯೇ ; ಇದಕ್ಕೆ ಕಾರಣಗಳೇನು ;

(ಇ) ಸದರಿ ಮಹಿಳಾ ಅಧಿಕಾರಿಯ ಕುಟುಂಬದ ಆದಾಯವು ಕಳೆದ ಮೂರು ಆರ್ಥಿಕ ವರ್ಷದಲ್ಲಿ ಯಾವುದಾದರೂ ಒಂದು ಸಾಲಿನಲ್ಲಿ ವಾರ್ಷಿಕ ಆದಾಯವು ಎಂಟು ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಸದರಿ ಓ.ಬಿ.ಸಿ. ಪ್ರಮಾಣ ಪತ್ರ ನೀಡಲಾಗುತ್ತಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಈ) ಓ.ಬಿ.ಸಿ. ಪ್ರಮಾಣ ಪತ್ರ ಪಡೆಯಲು ಕೇಂದ್ರ ಸರ್ಕಾರವು ಯಾವ ಮಾನದಂಡಗಳನ್ನು ನಿಗದಿ ಪಡಿಸಿದೆ ; ಇದಕ್ಕೆ ತಾರ್ಕಿಕ ಕಾರಣಗಳೇನು ? (ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

## ಮದರಸಾಗಳಲ್ಲಿನ ಶಿಕ್ಷಣದ ವ್ಯವಸ್ಥೆಯ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೪೧೧ (೧೭೦೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಮದರಸಾಗಳಲ್ಲಿ ಯಾವ ರೀತಿಯ ಶಿಕ್ಷಣವನ್ನು ನೀಡಲಾಗುತ್ತಿದೆ ಸದರಿ ಪಠ್ಯ ಪುಸ್ತಕಗಳನ್ನು ಯಾರು ಮತ್ತು ಯಾವ ಆಧಾರಗಳ ಮೇಲೆ ಅಂತಿಮಗೊಳಿಸಲಾಗುತ್ತಿದೆ ; (ವಿವರ ಒದಗಿಸುವುದು)

(ಆ) ಬಾಲಕರಿಗೆ ಮತ್ತು ಬಾಲಕಿಯರಿಗೆ ನೀಡುತ್ತಿರುವ ಶಿಕ್ಷಣದಲ್ಲಿ ವ್ಯತ್ಯಾಸಗಳಿವೆಯೇ ; (ಇದ್ದಲ್ಲಿ, ಕಾರಣಗಳ ಸಹಿತ ವಿವರಿಸುವುದು)

(ಇ) ಕರ್ನಾಟಕ ಹೊರತುಪಡಿಸಿ ಹೊಂದಿಕೊಂಡಿರುವ ರಾಜ್ಯಗಳಲ್ಲಿ ನೀಡುತ್ತಿರುವ ಶಿಕ್ಷಣಕ್ಕೂ ಮತ್ತು ರಾಜ್ಯದಲ್ಲಿ ನೀಡುತ್ತಿರುವ ಶಿಕ್ಷಣಕ್ಕೂ ಇರುವ ವ್ಯತ್ಯಾಸಗಳೇನು ; (ರಾಜ್ಯವಾರು ಮಾಹಿತಿ ಒದಗಿಸುವುದು)

(ಈ) ಕೇರಳದಲ್ಲಿ ಮುಸ್ಲಿಂ ಮುಖಂಡರು ಮಹಿಳೆಯರಿಗೆ ಸರ್ಕಾರಿ ಮತ್ತು ಸರ್ಕಾರೇತರ ಕೆಲಸಗಳಲ್ಲಿ ತೊಡಗಿಸುವುದನ್ನು ಪ್ರತಿಬಂಧಿಸಬೇಕೆಂದು ನೀಡಿರುವ ಕರೆಯ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯಗಳೇನು ?

## ಸಾಗುವಳಿ ಚೀಟಿಯ ನೈಜತೆಯ ಪರಿಶೀಲನೆಯ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) :–**

೧೪೧೨ (೧೬೫೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿರಾ ತಾಲ್ಲೂಕಿನ ಚಿಕ್ಕಚೆನ್ನಯ್ಯ ಹಾಗೂ ರಾಮದಾಸ್ ತಹಸೀಲ್ದಾರ್‌ಗಳ ಕಾಲದಲ್ಲಿ ನೀಡಲಾದ ಸಾಗುವಳಿ ಜಮೀನುಗಳ ತನಿಖೆಗಾಗಿ ತಂಡ ರಚಿಸಲಾಗಿದೆಯೇ ; ರಚಿಸಲಾಗಿದ್ದರೆ ಸದರಿ ಆದೇಶವನ್ನು ನೀಡುವುದು ;

(ಆ) ಚಿಕ್ಕಚೆನ್ನಯ್ಯ ಮತ್ತು ರಾಮದಾಸ್ ಅವಧಿಯಲ್ಲಿ ನೀಡಲಾದ ಸಾಗುವಳಿ ಚೀಟಿಗಳ ಸಂಖ್ಯೆ ಎಷ್ಟು ; (ಗ್ರಾಮವಾರು ವಿವರ ನೀಡುವುದು)

(ಇ) ಸಾಗುವಳಿ ಚೀಟಿಯ ನೈಜತೆಯನ್ನು ಪರಿಶೀಲಿಸುವ ಬಗ್ಗೆ ಹೇಗೆ ಯಾವ ಆಧಾರದ ಮೇಲೆ ನಕಲಿ–ಅಸಲಿ ಸಾಗುವಳಿ ಚೀಟಿ ಎಂದು ತೀರ್ಮಾನಿಸಲಾಗುವುದು ; ಶಿರಾ ತಾಲ್ಲೂಕಿನ ಸಾಗುವಳಿ ಚೀಟಿಯ ನೈಜತೆಯ ಪರಿಶೀಲನೆಯನ್ನು ಸ್ಥಳೀಯ ಕಂದಾಯ ಇಲಾಖೆಯ ಅಧಿಕಾರಿಗಳೇ ಮಾಡಲು ಅವಕಾಶವಿರಲಿಲ್ಲವೇ ; ಇಲ್ಲದೆ ಇದ್ದರೆ ಇದಕ್ಕೆ ಕಾರಣಗಳೇನು ;

(ಈ) ಭೂ ಮಂಜೂರಾತಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯಲ್ಲಿ ನಿರ್ವಹಿಸಬೇಕಾದ ದಾಖಲೆಗಳು ಯಾವುವು ; ಕಂದಾಯ ಇಲಾಖೆಯ ಅಧಿಕಾರಿಗಳು ಸಮರ್ಪಕವಾಗಿ ದಾಖಲೆ ನಿರ್ವಹಿಸದೆ ಇದ್ದಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದಂತೆ ಆಗುವುದಿಲ್ಲವೇ ; ಇದರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಉ) ಸಾಗುವಳಿ ಚೀಟಿಯ ನೈಜತೆಯನ್ನು ಪರಿಶೀಲಿಸಲು ಸರ್ಕಾರವು ತಂಡ ರಚಿಸಿ ಎಷ್ಟು ತಿಂಗಳುಗಳು ಕಳೆದಿವೆ ; ಇಲ್ಲಿಯವರೆಗೆ

ಸದರಿ ತಂಡ ಎಷ್ಟು ಸಾಗುವಳಿ ಚೀಟಿಗಳನ್ನು ಪರಿಶೀಲನೆ ಮಾಡಿದೆ ; ಮಾಡಿದ ಸಭೆಗಳು ಎಷ್ಟು ; (ಸಂಪೂರ್ಣ ವಿವರ ನೀಡುವುದು) ಸದರಿ ತಂಡವು ತುರ್ತಾಗಿ ವರದಿ ನೀಡಲು ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಊ) ಅಧಿಕಾರಿಗಳು ಭೂ ಮಂಜೂರಾತಿಯ ದಾಖಲೆಗಳನ್ನು ಮಾತ್ರವೇ ಪರಿಶೀಲನೆ ಮಾಡದೆ ಸ್ಥಳ ಪರಿಶೀಲನೆ ಮಾಡಿ ನಂತರ ನೈಜ ರೈತರಿಗೆ ಯಾವುದೇ ರೀತಿಯಲ್ಲೂ ಅನ್ಯಾಯವಾಗದಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಶಿರಾ ತಾಲ್ಲೂಕಿನಲ್ಲಿ ಸ್ವಮಿತ್ವ ಯೋಜನೆಯಲ್ಲಿ ಆಸ್ತಿ ಕಾರ್ಡ್ ನೀಡುವ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) :–**

೧೪೧೩ (೧೬೯೬) ಮಾನ್ಯ ಕಂದಾಯ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸ್ವಮಿತ್ವ ಯೋಜನೆ ಎಂದರೇನು ; ಇದರ ಉದ್ದೇಶವೇನು ; (ಸಂಪೂರ್ಣ ವಿವರ ನೀಡುವುದು) ಗ್ರಾಮಠಾಣಾ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಸ್ವಮಿತ್ವ ಯೋಜನೆಯಿಂದ ಆಗುವ ಪ್ರಯೋಜನಗಳು ಏನು ;

(ಆ) ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯ ಗ್ರಾಮಠಾಣಾ ಪ್ರದೇಶಗಳ ಮಾಲೀಕರಿಗೆ ಆಸ್ತಿ ಕಾರ್ಡ್ ನೀಡಲು ಉದ್ದೇಶಿಸಲಾಗಿದೆಯೇ ; ಇಲ್ಲದೆ ಇದ್ದಲ್ಲಿ, ಅವರು ಅಧಿಕೃತ ದಾಖಲೆಗಳು ಇಲ್ಲದೆ ಇ–ಆಸ್ತಿ ಪಡೆಯಲು ತೊಂದರೆಯುಂಟಾಗುತ್ತಿದ್ದು, ಅವರು ಇ–ಆಸ್ತಿ ಪಡೆಯುವ ಬಗ್ಗೆ ಹೇಗೆ ;

(ಇ) ಶಿರಾ ತಾಲ್ಲೂಕಿನಹಲ್ಲಿ "ಸ್ವಮಿತ್ವ" ಯೋಜನೆಯಡಿಯಲ್ಲಿ ಎಷ್ಟು ಗ್ರಾಮಗಳಲ್ಲಿ ಮತ್ತು ಎಷ್ಟು ಆಸ್ತಿಗಳ ಸಮೀಕ್ಷೆಗಾಗಿ ಡ್ರೋಣ್

ಸರ್ವೆ ಪೂರ್ಣಗೊಳಿಸಲಾಗಿದೆ ; ಎಷ್ಟು ಆಸ್ತಿ ಮಾಲೀಕರಿಗೆ ಆಸ್ತಿ ಕಾರ್ಡ್ ನೀಡಲಾಗಿದೆ ; ಬಾಕಿಯಿರುವ ಗ್ರಾಮಗಳ ಸಂಖ್ಯೆ ಎಷ್ಟು ; ಯಾವ ಕಾಲಮಿತಿಯಲ್ಲಿ ಆಸ್ತಿ ಕಾರ್ಡ್ ನೀಡಲಾಗುವುದು ;

(ಉ) ಇತ್ತೀಚೆಗೆ ಸರ್ಕಾರ ಇ-ಖಾತಾ ವಿತರಣೆಗೆ ನೋಂದಾಯಿತ ಪತ್ರ ಕಡ್ಡಾಯ ಮಾಡಿದ್ದು ಗ್ರಾಮಗಳಲ್ಲಿರುವ ಗ್ರಾಮಠಾಣಾ ಆಸ್ತಿ ಮಾಲೀಕರು ನೋಂದಾಯಿತ ದಾಖಲೆಗಳು ಇಲ್ಲದೆ ಇ-ಖಾತಾ, ಬ್ಯಾಂಕ್ ಸಾಲ ಪಡೆಯಲು ಸ್ವತ್ತಿನ ಮಾರಾಟ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಎಲ್ಲಾ ಗ್ರಾಮಠಾಣಾ ಮಾಲೀಕರಿಗೆ ತುರ್ತಾಗಿ ಆಸ್ತಿ ಕಾರ್ಡ್ ನೀಡಲು ಸರ್ಕಾರ ಕೈಗೊಂಡ ಕ್ರಮವೇನು ?

## ಬೆಂಗಳೂರು ನಗರ ಜಿಲ್ಲೆಗಳಲ್ಲಿ ವಸತಿ ನಿರ್ಮಾಣದ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೪೧೪ (೧೬೬೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರಾಜ್ಯ ಸರ್ಕಾರ ಬಡಜನರಿಗೆ ವಸತಿ ಯೋಜನೆಯಡಿಯಲ್ಲಿ ಎಷ್ಟು ವಸತಿಗಳನ್ನು ನಿರ್ಮಾಣ ಮಾಡಲು ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ ; (ವಿವರ ನೀಡುವುದು)

(ಆ) ಆ ಪೈಕಿ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗಿದೆ ; (ವಿವರ ನೀಡುವುದು)

(ಇ) ನಿರ್ಮಾಣಕ್ಕೆ ಬಾಕಿ ಇರುವ ವಸತಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ? (ವಿವರ ನೀಡುವುದು)

## ಗ್ರಾಮಠಾಣಾ ಆಸ್ತಿಗಳ ದಾಖಲೆಗಳ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೫ (೧೬೬೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮಠಾಣಾ ಎಂದರೇನು ; ಗ್ರಾಮಠಾಣಾ ಆಸ್ತಿಗಳ ದಾಖಲೆಗಳನ್ನು ಯಾವ ವರ್ಷದವರೆಗೆ ಕಂದಾಯ ಇಲಾಖೆ ನಿರ್ವಹಿಸುತ್ತಿತ್ತು ; ನಂತರ ಯಾವ ಇಲಾಖೆಗೆ ಹಸ್ತಾಂತರ ಮಾಡಿತು ; ಯಾವ ಪ್ರಕಾರದಲ್ಲಿ ಹಿಂದೆ ದಾಖಲೆಗಳನ್ನು ನಿರ್ವಹಿಸಲಾಗುತ್ತಿತ್ತು ;

(ಆ) ರಾಜ್ಯದ ಸುಮಾರು ಎಷ್ಟು ಗ್ರಾಮಠಾಣಾಗಳಿಗೆ ತಲೆಮಾರುಗಳಿಂದ ಯಾವುದೇ ಅಧಿಕೃತ ದಾಖಲೆಗಳು ಇರುವುದಿಲ್ಲ ; (ಜಿಲ್ಲಾವಾರು ವಿವರ ನೀಡುವುದು) ಮತ್ತು ಗ್ರಾಮಠಾಣಾ ಆಸ್ತಿಗಳಿಗೆ ಕಾನೂನು ಮಾನ್ಯತೆ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ರಾಜ್ಯದ ಎಷ್ಟು ಗ್ರಾಮಗಳ ಗ್ರಾಮಠಾಣಾ ಆಸ್ತಿಗಳನ್ನು ಸರ್ವೆ ಮಾಡಲಾಗಿದೆ ; ಎಷ್ಟು ಆಸ್ತಿಗಳಿಗೆ ಆಸ್ತಿಕಾರ್ಡ್ ನೀಡಲಾಗಿದೆ ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಈ) ರಾಜ್ಯದ ಎಲ್ಲಾ ಗ್ರಾಮಗಳ ಗ್ರಾಮಠಾಣಾ ಆಸ್ತಿಗಳಿಗೆ ಶೀಘ್ರವಾಗಿ ಆಸ್ತಿ ಕಾರ್ಡ್ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಮತ್ತು ಆಸ್ತಿಕಾರ್ಡ್ ವಿತರಿಸಲು ಆಸ್ತಿ ಮಾಲೀಕರಿಂದ ಪಡೆಯುವ ದಾಖಲೆಗಳು ಯಾವುವು ; ಅನುಸರಿಸುವ ಪ್ರಕ್ರಿಯೆ ಏನು ; (ಇದಕ್ಕೆ ಸಂಬಂಧಿಸಿದ ಆದೇಶ/ಸುತ್ತೋಲೆಯ ಪ್ರತಿಯನ್ನು ನೀಡುವುದು)

(ಉ) ಬೆಂಗಳೂರು ನಗರ ಜಿಲ್ಲೆಯ ಗ್ರಾಮಗಳ ಗ್ರಾಮಠಾಣಾ ಆಸ್ತಿಯ ಮೌಲ್ಯ ಹೆಚ್ಚಾಗಿದ್ದು, ವ್ಯಾಜ್ಯಗಳು ಸಹ ಹೆಚ್ಚಾಗಿ ಕಂಡುಬರುತ್ತಿದ್ದು, ಸದರಿ ಆಸ್ತಿಗಳಿಗೆ ಆದಷ್ಟು ಶೀಘ್ರವಾಗಿ ಆಸ್ತಿ ಕಾರ್ಡ್ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಯೋಗ್ಯವಲ್ಲದ ವಾಹನಗಳು ಸಂಚರಿಸುತ್ತಿರುವ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೬ (೧೬೭೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅವಧಿ ಮೀರಿರುವ ವಾಹನಗಳ ಸಂಖ್ಯೆ ಎಷ್ಟು ಹಾಗೂ ಸಾರಿಗೆಗೆ ಯೋಗ್ಯವಲ್ಲದ ವಾಹನಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಆ) ಅವಧಿ ಮೀರಿರುವ ವಾಹನಗಳು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಬೇಕಾಗಿರುವ ಒಟ್ಟು ವಾಹನಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ವೋಲ್ವೋ ವಾಹನಗಳು ಸಂಚಾರಕ್ಕೆ ಯೋಗ್ಯವಾಗಿರಲು ಎಷ್ಟು ಕಿ.ಮೀ.ಗಳನ್ನು ನಿಗದಿಪಡಿಸಿದೆ ಹಾಗೂ ಸಂಚರಿಸುತ್ತಿರುವ ವೋಲ್ವೋ ವಾಹನಗಳ ಸಂಖ್ಯೆ ಎಷ್ಟು ;

(ಈ) ತುರ್ತಾಗಿ ಹಳೆಯ ವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ ವ್ಯವಸ್ಥೆ ಮಾಡಲು ಎಷ್ಟು ವೋಲ್ವೋ ಬಸ್ಸುಗಳ ಅವಶ್ಯಕತೆ ಇದೆ ? (ವಿವರ ನೀಡುವುದು)

## ಕಾವೇರಿ–2 ತಂತ್ರಾಂಶದ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೧೭ (೧೬೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ–2 ತಂತ್ರಾಂಶದ ಮೂಲಕ ಆಸ್ತಿ ನೋಂದಣಿ ಮಾಡಲು ನಾಗರೀಕರು ಹಲವಾರು ಸಮಸ್ಯೆಗಳನ್ನ ಎದುರಿಸುತ್ತಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ತಂತ್ರಾಂಶದ ಮೂಲಕ ಪ್ರತಿ ದಿನ ಎಷ್ಟು ಆಸ್ತಿ ನೋಂದಣಿ ಮಾಡಲಾಗುತ್ತಿದೆ ; ಇದುವರೆಗೂ ಎಷ್ಟು ಆಸ್ತಿ ನೋಂದಣಿ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಆಸ್ತಿ ನೋಂದಣಿ ಮಾಡಲು ನಾಗರೀಕರಿಗೆ ತಾಂತ್ರಿಕ ದೋಷದ ಕಾರಣ ಹೇಳಿ ವಿನಾ ಕಾರಣ ತೊಂದರೆ ಮಾಡಿರುವ ಅಧಿಕಾರಿಗಳ ಮೇಲೆ ದೂರುಗಳು ಬಂದಿದೆಯೇ ; ಎಷ್ಟು ದೂರು ಸ್ವೀಕೃತವಾಗಿದೆ ; ಈ ಬಗ್ಗೆ ಸರ್ಕಾರವು ಈ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ ?

## ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಮುಂಬಡ್ತಿ ಬಗ್ಗೆ

**ಡಾ|| ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೧೮ (೧೬೪೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ವಿವಿಧ ಹುದ್ದೆಗಳು ಎಷ್ಟು ; (ಹುದ್ದೆವಾರು ಮುಂಬಡ್ತಿ ಹಾಗೂ ನೇರ ನೇಮಕಾತಿ ಹುದ್ದೆ ಇವುಗಳ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಮೇಲ್ಕಂಡ ವಿವಿಧ ಹುದ್ದೆಗಳು ಯಾವ ಅವಧಿಯಿಂದ ಖಾಲಿ ಇರುತ್ತವೆ ; (ಕಾರಣ ಸಹಿತ ಹುದ್ದೆವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಇ) ಕಳೆದ ಯಾವ ಅವಧಿಯಲ್ಲಿ ವಿವಿಧ ಶ್ರೇಣಿಯಲ್ಲಿನ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತವೆ ; ಮುಂಬಡ್ತಿ ನೀಡಿಕೆಯಲ್ಲಿ ಇರುವ

ಕಾರಣಗಳು ಏನು ; ಈ ನಿಟ್ಟಿನಲ್ಲಿ ಕೈಗೊಂಡ ಕ್ರಮ ಏನು ; (ಪ್ರತ್ಯೇಕವಾಗಿ ಸಂಪೂರ್ಣ ಮಾಹಿತಿ ನೀಡುವುದು)

(ಈ) ಮುಂಬಡ್ತಿ ನೀಡಿಕೆಯಲ್ಲಿ ವಿಳಂಬ ಕುರಿತಾಗಿ ೧೯೮೫ ರಿಂದಲೇ ಸರ್ಕಾರದ ಸ್ಪಷ್ಟ ಮಾರ್ಗಸೂಚಿ ಇದ್ದರೂ ಮತ್ತು ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಕನಿಷ್ಠ ಆರು ತಿಂಗಳಿಗೊಮ್ಮೆ ಇಲಾಖಾ ಮುಂಬಡ್ತಿ ಸಮಿತಿಯು ಸಭೆ ನಡೆಸಬೇಕೆಂಬ ಹಿಂದಿನ ಸುತ್ತೋಲೆಗಳು ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/ ಇ೮೦/ಸೇನೆ ನೀ/೨೦೨೫, ದಿನಾಂಕ:೧೨-೦೨-೨೦೨೬ ರನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಗಂಭೀರವಾಗಿ ಪರಿಗಣಿಸಿದೆಯೇ ; ಹಾಗಿದ್ದಲ್ಲಿ, ಅರ್ಹ ಜೇಷ್ಠತೆ ನೌಕರರು/ಅಧಿಕಾರಿಗಳ ಮುಂಬಡ್ತಿ ವಿಷಯವಾಗಿ ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ ಸಂಪೂರ್ಣ ವಿವರ ಒದಗಿಸುವುದು ?

## ಕೋಲಾರ ಜಿಲ್ಲೆಯಲ್ಲಿ ರೈತರ ಜಮೀನುಗಳಿಗೆ ಪೋಡಿ ಮಾಡದೇ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೨೯ (೧೬೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಈವರೆಗೂ ರೈತರಿಗೆ ಮಂಜೂರಾಗಿರುವ ಜಮೀನುಗಳನ್ನು ಪೋಡಿ ಮಾಡಿ ದುರಸ್ತಿಪಡಿಸಲು ಬಾಕಿಯಿರುವ ಪ್ರಕರಣಗಳೆಷ್ಟು ;

(ಆ) ಈ ರೀತಿ ಬಾಕಿಯಿರುವ ಪ್ರಕರಣಗಳ ಪೈಕಿ ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ದಾಖಲೆಗಳಿದ್ದು, ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದೇ

ರೈತರು ತಮ್ಮ ಜಮೀನುಗಳನ್ನು ಪೋಡಿ ಮಾಡಿಸಲಾಗದೇ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಪ್ರಕರಣಗಳ ವಿವರಗಳನ್ನು ಒದಗಿಸುವುದು)

(ಇ) ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಿ, ರೈತರ ಹಿತರಕ್ಷಣೆಗೆ ಸರ್ಕಾರವು ಈವರೆಗೆ ತೆಗೆದುಕೊಂಡ ಕ್ರಮಗಳೇನು ;

(ಈ) ಇಂತಹ ಪ್ರಕರಣಗಳನ್ನು ಗೈರು ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ, ಇತ್ಯರ್ಥಪಡಿಸದೆ ಬಾಕಿಯಿರುವ ಪ್ರಕರಣಗಳೆಷ್ಟು ; (ವಿವರಗಳನ್ನು ಒದಗಿಸುವುದು)

(ಉ) ಈ ರೀತಿ ಗೈರು ಕಡತಗಳ ವಿಲೇವಾರಿ ಸಮಿತಿಯಲ್ಲಿ ಇತ್ಯರ್ಥವಾಗದೇ, ವಿನಾಕಾರಣ ರೈತರನ್ನು ಅಲೆದಾಡಿಸುತ್ತಿರುವ ಬಗ್ಗೆ ಸರ್ಕಾರದ ನಿಲುವೇನು ; ಯಾವ ಕಾಲಮಿತಿಯೊಳಗೆ ಇಂತಹ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುವುದು ?

## ಕರ್ನಾಟಕ ಭವನದಲ್ಲಿ ಕೊಠಡಿ ಬಾಡಿಗೆ ಮತ್ತು ವ್ಯವಸ್ಥೆ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೦ (೧೬೨೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಿರುಪತಿ ತಿರುಮಲದಲ್ಲಿರುವ ಕರ್ನಾಟಕ ಭವನದಲ್ಲಿ ನಿರ್ಮಾಣವಾಗಿರುವ ಒಟ್ಟು ಕೊಠಡಿಗಳ ಸಂಖ್ಯೆಯಷ್ಟು ; ಪ್ರತಿ ಕೊಠಡಿಗಳಿಗೆ ಸರ್ಕಾರ ನಿಗದಿಪಡಿಸಿರುವ ಬಾಡಿಗೆ ದರವೆಷ್ಟು

(ಆ) ಮುಜರಾಯಿ ಸಚಿವರನ್ನು ಒಳಗೊಂಡಂತೆ, ಇನ್ನಿತರ ಸಚಿವರು, ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು, ಲೋಕಸಭಾ ಮತ್ತು ರಾಜ್ಯ ಸಭಾ ಸದಸ್ಯರಿಗೆ ವರ್ಷಕ್ಕೆ ಇಂತಿಷ್ಟು ಕೊಠಡಿಗಳನ್ನು ಕ್ಷೇತ್ರದ ಜನರಿಗೆ ಶಿಫಾರಸ್ಸು ಮಾಡಲು ಅವಕಾಶ ಇದೆಯೇ ;

(ಇ) ಪ್ರಸ್ತುತ ಇರುವಂತಹ ಸಿಬ್ಬಂದಿಗಳಿಂದ ಇಷ್ಟೊಂದು ಕೊಠಡಿಗಳ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿರುವ ಹಿನ್ನಲೆಯಲ್ಲಿ "ಕರ್ನಾಟಕ ಪ್ರವಾಸೋದ್ಯಮ ಇಲಾಖೆ"ಗೆ ಜವಾಬ್ದಾರಿ ನೀಡಿದರೆ ಸ್ವಚ್ಛತೆ, ಕಾರ್ಯನಿರ್ವಹಣೆ ಹಾಗೂ ಭಕ್ತರೊಂದಿಗೆ ಸೌಹಾರ್ದತೆಯಿಂದ ಸಹಕರಿಸಲು ಅನುಕೂಲವಾಗುವುದಿಲ್ಲವೇ ;

(ಈ) ಕೊಠಡಿ ಕಾಯ್ದಿರಿಸುವಿಕೆಯನ್ನು ಆನ್‌ಲೈನ್ ಮೂಲಕವಲ್ಲದೇ "ಬೆಂಗಳೂರು ಒನ್" ನಿಂದಲು ಕೊಠಡಿಯನ್ನು ಕಾಯ್ದಿರಿಸಲು ಅವಕಾಶ ಕಲ್ಪಿಸಿಕೊಡಲಾಗಿದೆಯೇ ;

(ಉ) ಆನ್‌ಲೈನ್ ಮೂಲಕ ಕೊಠಡಿಗಳನ್ನು ಕಾಯ್ದಿರಿಸುವ ಪದ್ಧತಿಯಲ್ಲಿ ರಾಜ್ಯದ ಭಕ್ತಾದಿಗಳಿಗೆ ಶೇಕಡ ೫೦% ರಷ್ಟು ಮತ್ತು ಉಳಿದಂತೆ ಬೇರೆ ಬೇರೆ ರಾಜ್ಯದವರಿಗೆ ಶೇಕಡ ೫೦% ರಷ್ಟು, ಕಾಯ್ದಿರಿಸಲು ಅನುಕೂಲವಾಗುವಂತೆ ನೂತನವಾಗಿ ಸಾಫ್ಟ್‌ವೇರ್ ಸಿದ್ದಪಡಿಸುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ ;

(ಊ) ಕೊಠಡಿಗಳು ಲಭ್ಯತೆ ಇಲ್ಲದಂತಹ ಪರಿಸ್ಥಿತಿಯಲ್ಲಿ ರಾಜ್ಯದ ಭಕ್ತಾದಿಗಳಿಗೆ ಅನುಕೂಲವಾಗಲು ಸಾಮೂಹಿಕವಾದ ಸ್ನಾನದ ಕೊಠಡಿ ಮತ್ತು ವಸ್ತ್ರ ಬದಲಾಯಿಸಲು ಗಂಡಸರಿಗೆ ಮತ್ತು ಹೆಂಗಸರಿಗೆ ಪ್ರತ್ಯೇಕವಾದ ಕೊಠಡಿಗಳ ವ್ಯವಸ್ಥೆ ಮಾಡಲಾಗಿದೆಯೇ ; ಇದನ್ನು ಉಚಿತವಾಗಿ ನೀಡುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ ;

(ಋ) ಪ್ರಸ್ತುತ ಇರುವ ಕೊಠಡಿಯು ಬಾಡಿಗೆಯು ತುಂಬಾ ದುಬಾರಿಯಾಗಿರುವುದರಿಂದ, ಬಾಡಿಗೆ ಹಣವನ್ನು ಕಡಿಮೆ ಮಾಡುವುದರ ಬಗ್ಗೆ ಸರ್ಕಾರ ಆಲೋಚಿಸಿದೆಯೇ ?

# ಶಕ್ತಿ ಯೋಜನೆ ಅಡಿಯಲ್ಲಿ ಮಹಿಳಾ ಫಲಾನುಭವಿಗಳು ಉಚಿತ ಪ್ರಯಾಣ ಸೌಲಭ್ಯವನ್ನು ಪಡೆದಿರುವ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೨೧ (೧೫೯೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಕ್ತಿ ಯೋಜನೆ ಪ್ರಾರಂಭವಾದ ದಿನಾಂಕದಿಂದ ಇಲ್ಲಿಯವರೆಗೆ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲಾವಾರು ಎಷ್ಟು ಮಹಿಳಾ ಫಲಾನುಭವಿಗಳು ಉಚಿತ ಪ್ರಯಾಣ ಸೌಲಭ್ಯವನ್ನು ಪಡೆದಿದ್ದಾರೆ ; ಪ್ರತಿ ಜಿಲ್ಲೆಗೆ ಸಂಬಂಧಿಸಿದಂತೆ, ತಿಂಗಳವಾರು ಫಲಾನುಭವಿಗಳ ವಿವರ ಒದಗಿಸುವುದು ;

(ಆ) ಮೇಲ್ಕಂಡ ಅವಧಿಯಲ್ಲಿ ಶಕ್ತಿ ಯೋಜನೆ ಅಡಿಯಲ್ಲಿ ಮಹಿಳಾ ಫಲಾನುಭವಿಗಳ ಪ್ರಯಾಣಕ್ಕೆ ಸಂಬಂಧಿಸಿದಂತೆ, ಸಾರಿಗೆ ನಿಗಮಕ್ಕೆ ಆಗಿರುವ ವೆಚ್ಚದ ಒಟ್ಟು ಮೊತ್ತ ಎಷ್ಟು ; ತಿಂಗಳವಾರು ಹಾಗೂ ಜಿಲ್ಲಾವಾರು ವೆಚ್ಚದ ವಿವರ ಒದಗಿಸುವುದು ;

(ಇ) ಶಕ್ತಿ ಯೋಜನೆ ಅಡಿಯಲ್ಲಿ ಸಾರಿಗೆ ನಿಗಮವು ಮಾಡಿದ ವೆಚ್ಚಕ್ಕೆ ವಿರುದ್ಧವಾಗಿ ಸರ್ಕಾರವು ಇಲ್ಲಿಯವರೆಗೆ ಪಾವತಿಸಿದ ಅನುದಾನ ಎಷ್ಟು ; ಪ್ರತಿ ತಿಂಗಳವಾರು ಸರ್ಕಾರದಿಂದ ಮರುಭರಣ (Reimbursement) ಮಾಡಲಾದ ಮೊತ್ತದ ವಿವರಗಳನ್ನು ಒದಗಿಸುವುದು ;

(ಈ) ಸಾರಿಗೆ ನಿಗಮವು ವೆಚ್ಚ ಮಾಡಿದ ಸಂಪೂರ್ಣ ಮೊತ್ತವನ್ನು ಸರ್ಕಾರ ಮರುಭರಣ ಮಾಡಿರುವುದೇ ; ಮಾಡಿದ್ದರೆ, ಪ್ರತಿ ತಿಂಗಳು ಮಾಡಿದ ವೆಚ್ಚಕ್ಕೆ ವಿರುದ್ಧವಾಗಿ ಯಾವ ದಿನಾಂಕಗಳಲ್ಲಿ ಮತ್ತು ಎಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗಿದೆ; ವಿವರಗಳನ್ನು ಒದಗಿಸುವುದು ;

(ಉ) ಸಂಪೂರ್ಣ ಅನುದಾನವನ್ನು ಬಿಡುಗಡೆ ಮಾಡದಿದ್ದಲ್ಲಿ ಬಾಕಿ ಇರುವ ಮೊತ್ತ ಎಷ್ಟು ; ಈ ವ್ಯತ್ಯಾಸದಿಂದ ಸಾರಿಗೆ ನಿಗಮಕ್ಕೆ ಉಂಟಾದ ಆರ್ಥಿಕ ನಷ್ಟಕ್ಕೆ ಹೊಣೆಗಾರರು ಯಾರು; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವು ಮತ್ತು ಕ್ರಮಗಳು ಏನು ?

## ೨೦೨೫–೨೬ನೇ ಸಾಲಿನಲ್ಲಿ ವಿವಿಧ ಸಾರಿಗೆ ನಿಗಮಗಳ ವತಿಯಿಂದ ಖರೀದಿಸಲಾದ ಎಲೆಕ್ಟ್ರಿಕ್ ಬಸ್‌ಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೨೨ (೧೫೯೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿನಲ್ಲಿ ರಾಜ್ಯದ ವಿವಿಧ ಸಾರಿಗೆ ನಿಗಮಗಳ ವತಿಯಿಂದ ಒಟ್ಟು ಎಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಅನುಮೋದಿಸಲಾಗಿದೆ ; ಅವುಗಳಲ್ಲಿ ಇದುವರೆಗೆ ಎಷ್ಟು ಬಸ್ಸುಗಳು ವಿತರಿಸಲ್ಪಟ್ಟು ಸಂಚಾರಕ್ಕೆ ಇಳಿಸಲಾಗಿದೆ ; ವಿವರಗಳನ್ನು ಒದಗಿಸುವುದು ;

(ಆ) ಖರೀದಿಸಲಾದ ಇ–ಬಸ್ಸುಗಳನ್ನು ಯಾವ ಯಾವ ಜಿಲ್ಲೆಗಳಿಗೆ ಎಷ್ಟು ಪ್ರಮಾಣದಲ್ಲಿ ಹಂಚಿಕೆ ಮಾಡಲಾಗಿದೆ ; ನಿಗಮವಾರು ಹಾಗೂ ಜಿಲ್ಲಾವಾರು ವಿವರ ಒದಗಿಸುವುದು ;

(ಇ) ಕಲ್ಯಾಣ ಕರ್ನಾಟಕದ ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳಿಗೆ ವಿಶೇಷವಾಗಿ ಎಷ್ಟು ಇ–ಬಸ್ಸುಗಳನ್ನು ಮೀಸಲಿಟ್ಟಿದ್ದಾರೆ ? (ಜಿಲ್ಲಾವಾರು ವಿವರ ಒದಗಿಸುವುದು)

## ಸಾರಿಗೆ ನಿಗಮಗಳ ವತಿಯಿಂದ ೧೫ ವರ್ಷ ಮೇಲ್ಪಟ್ಟ ವಾಹನಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೨೩ (೧೫೯೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ (೨೦೨೩–೨೪ ರಿಂದ ೨೦೨೫–೨೬ರವರೆಗೆ) ವಿವಿಧ ಸಾರಿಗೆ ನಿಗಮಗಳ ವತಿಯಿಂದ ೧೫ ವರ್ಷ ಮೇಲ್ಪಟ್ಟ ಎಷ್ಟು ಸರ್ಕಾರಿ ವಾಹನಗಳನ್ನು ವಿಲೇವಾರಿ ಮಾಡಲಾಗಿದೆ ; ನಿಗಮವಾರು ವಿವರ ಒದಗಿಸುವುದು ;

(ಆ) ಈ ವಿಲೇವಾರಿಯಿಂದ ಸರ್ಕಾರಕ್ಕೆ/ನಿಗಮಗಳಿಗೆ ನಿರೀಕ್ಷಿಸಲಾದ ಆದಾಯ ಎಷ್ಟು ; ವಾಸ್ತವವಾಗಿ ಲಭಿಸಿದ ಆದಾಯ ಎಷ್ಟು; (ವಿವರ ಒದಗಿಸುವುದು)

(ಇ) ಹಳೆಯ ವಾಹನಗಳ ಬದಲಿಗೆ ಹೊಸ ವಾಹನಗಳನ್ನು ಖರೀದಿಸಲು ಸರ್ಕಾರದ ಮುಂದಿನ ಯೋಜನೆ ಏನು ; ಬಸ್ಸುಗಳ ಸಂಖ್ಯೆ, ವೆಚ್ಚ ಮತ್ತು ಕಾಲಮಿತಿ ವಿವರ ಒದಗಿಸುವುದು ?

## ೨೦೨೫–೨೬ನೇ ಸಾಲಿನಲ್ಲಿ ಮುದ್ರಾಂಕ ಮತ್ತು ನೋಂದಣಿ ಇಲಾಖೆ ಮತ್ತು ಖನಿಜ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಸಂಗ್ರಹವಾದ ಆದಾಯದ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೨೪ (೧೫೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿನಲ್ಲಿ ಮುದ್ರಾಂಕ ಮತ್ತು ನೋಂದಣಿ ಇಲಾಖೆ ಮತ್ತು ಖನಿಜ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಎಷ್ಟು ರೂಪಾಯಿ ಆದಾಯ ಸಂಗ್ರಹಣೆ ಗುರಿಯುನ್ನು ನಿಗದಿಪಡಿಸಲಾಗಿದೆ ; ಇದರ ಪೈಕಿ ಇಲ್ಲಿಯವರೆಗೆ ಎಷ್ಟು ರೂಪಾಯಿಗಳು ಆದಾಯ ಸಂಗ್ರಹವಾಗಿದೆ ; (ವಿವರಗಳನ್ನು ಒದಗಿಸುವುದು)

(ಆ) ಜಿಲ್ಲಾವಾರು ಕಂದಾಯ ಸಂಗ್ರಹದ ಗುರಿ ಮತ್ತು ಸಾಧನೆ ಎಷ್ಟಿದೆ ; ಸಂಪೂರ್ಣ ಮಾಹಿತಿಯನ್ನು ನೀಡುವುದು ;

(ಇ) ತೆರಿಗೆ ವಂಚನೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಮುಜರಾಯಿ ವ್ಯಾಪ್ತಿಯ ದೇವಸ್ಥಾನಗಳ ಆದಾಯ ಮತ್ತು ಅಭಿವೃದ್ಧಿ ಕಾರ್ಯಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು):–**

೧೪೨೫ (೧೫೫೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪–೨೫, ೨೦೨೫–೨೬ನೇ ಸಾಲಿನಲ್ಲಿ ಮುಜರಾಯಿ ವ್ಯಾಪ್ತಿಯ ದೇವಸ್ಥಾನಗಳಿಂದ ಒಟ್ಟು ಎಷ್ಟು ಆದಾಯ ಬಂದಿದೆ ; ಆ ಹಣವನ್ನು ಯಾವ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗಿದೆ; ಕಾರ್ಯಕ್ರಮವಾರು ಮೊತ್ತದ ವಿವರಗಳನ್ನು ಒದಗಿಸುವುದು;

(ಆ) ಹಿಂದುಳಿದ ಪ್ರದೇಶದ ದೇವಸ್ಥಾನಗಳ ಅಭಿವೃದ್ಧಿಗೆ ಯಾವ ವಿಶೇಷ ಯೋಜನೆ ಜಾರಿಯಲ್ಲಿದೆ ; (ವಿವರ ಒದಗಿಸುವುದು)

(ಇ) ಎಷ್ಟು ದೇವಸ್ಥಾನಗಳಿಗೆ ಮೂಲಸೌಕರ್ಯ ಅಭಿವೃದ್ಧಿ ಅನುದಾನ ನೀಡಲಾಗಿದೆ ; (ವಿವರಗಳನ್ನು ಒದಗಿಸುವುದು)

(ಈ) ಖಾಲಿ ಇರುವ ಅರ್ಚಕ ಮತ್ತು ಸಿಬ್ಬಂದಿ ಹುದ್ದೆಗಳ ಸಂಖ್ಯೆ ಎಷ್ಟು ; ನೇಮಕಾತಿ ಪ್ರಕ್ರಿಯೆ ಯಾವ ಹಂತದಲ್ಲಿದೆ ? (ವಿವರಗಳನ್ನು ಒದಗಿಸುವುದು)

## ವಸತಿ ಇಲಾಖೆಯಿಂದ ಕರಾವಳಿ ಕರ್ನಾಟಕಕ್ಕೆ ನೀಡಿದ ಮನೆಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೬(೧೬೩೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಕರ್ನಾಟಕದಲ್ಲಿ ವಸತಿ ಇಲಾಖೆಯಿಂದ ನೀಡಲಾದ ಮನೆಗಳಷ್ಟು ; ೨೦೨೨-೨೩, ೨೦೨೩-೨೪ ಮತ್ತು ೨೦೨೪-೨೫ರಲ್ಲಿ ನೀಡಿದ ಮನೆಗಳೆಷ್ಟು: ಪ್ರಸ್ತುತ ಯಾವ ಹಂತದಲ್ಲಿದೆ ; ಪ್ರತಿ ಮನೆಗೆ ತಗಲಿದ ವೆಚ್ಚ ಎಷ್ಟು ; (ವಿವರ ನೀಡುವುದು)

(ಆ) ಕಳೆದ ೩ ವರ್ಷದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ವಸತಿ ಇಲಾಖೆಯಿಂದ ನೀಡಿದ ಮನೆಗಳೆಷ್ಟು ; ಯಾವ ಯಾವ ತಾಲ್ಲೂಕುಗಳಿಗೆ ಎಷ್ಟು ಮನೆಗಳನ್ನು ನೀಡಲಾಗಿದೆ ; (ವಿವರ ನೀಡುವುದು)

(ಇ) ಕರ್ನಾಟಕ ಗೃಹ ಮಂಡಳಿ ವತಿಯಿಂದ ಸುರತ್ಕಲ್ ಮಧ್ಯದಲ್ಲಿರುವ ಪ್ರಸ್ತಾವಿತ ಯೋಜನೆಗೆ ಸಾರ್ವಜನಿಕರಿಂದ ೬೦೦ ಕ್ಕೂ ಅಧಿಕ ಅರ್ಜಿಗಳನ್ನು ಠೇವಣಿಯೊಂದಿಗೆ ಸಲ್ಲಿಸಿ. ಇನ್ನೂ ನಿವೇಶನಗಳನ್ನು ಹಂಚಿಕೆ ಮಾಡದೇ ಇರಲು ಕಾರಣವೇನು ; ಇದು ಇಲಾಖೆಯಲ್ಲಿನ ಅಸಮರ್ಥ ತೋರಿಸುವುದಿಲ್ಲವೇ ; ಅರ್ಜಿದಾರರಿಗೆ ಎಂದು ನಿವೇಶನಗಳನ್ನು ನೀಡಲಾಗುವುದು ; (ವಿವರ ನೀಡುವುದು)

(ಈ) ವಸತಿ ಇಲಾಖೆಯಿಂದ ಸಾರ್ವಜನಿಕರಿಗೆ ನಿವೇಶನ ಹಂಚದೇ ಇದ್ದು, ಇದರಿಂದ ಸಾರ್ವಜನಿಕರಿಗೆ ಮನೆ ನಿರ್ಮಿಸಲು ಇಲಾಖೆ ಸಹಾಯ ಮಾಡುತ್ತಿಲ್ಲ ಎಂಬ ದೂರುಗಳಿದ್ದು, ಈ ಬಗ್ಗೆ ಇಲಾಖೆಗೆ ಕೈಗೊಂಡ ಕ್ರಮಗಳೇನು ;

(ಉ) ವಸತಿ ಇಲಾಖೆಯಿಂದ ಇತ್ತೀಚಿಗೆ ೪೦ ಸಾವಿರ ಮನೆಗಳನ್ನು ಏಕಕಾಲಕ್ಕೆ ವಿತರಿಸಲಾಗಿದ್ದು, ಈ ಮಾದರಿಯಲ್ಲಿ ಕರಾವಳಿ ಭಾಗದಲ್ಲಿ ಇಂತಹ ಯೋಜನೆ ಹಾಕದೇ ಇರಲು ಕಾರಣವೇನು: ಕರಾವಳಿ ಭಾಗ ನಿರ್ಲಕ್ಷಿಸಲಾಗಿದೆಯೇ ; ವಿತರಿಸಲು ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೭ (೧೬೩೪) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರರ ಸಂಖ್ಯೆ ಎಷ್ಟು ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಮೀನುಗಾರರಿಗೆ ನೀಡುತ್ತಿರುವ ಉತ್ತೇಜನ ಹಾಗೂ ಸೌಲಭ್ಯಗಳೇನು ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾಗಿರುವ ಪಶುವೈದ್ಯಾಧಿಕಾರಿಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೮ (೧೬೩೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರಾಗಿರುವ ಪಶು ವೈದ್ಯಾಧಿಕಾರಿಗಳ ಒಟ್ಟು ಹುದ್ದೆ ಎಷ್ಟು ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಯಕ್ಕೆ ಸರಿಯಾಗಿ ಪಶು ವೈದ್ಯಕೀಯ ಸೇವೆಗಳು ದೊರೆಯುವುದಿಲ್ಲ ಎಂಬ ದೂರುಗಳಿರುವುದು ನಿಜವೇ ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾಗಿರುವ ಪಶು ವೈದ್ಯಾಧಿಕಾರಿಗಳ ಹುದ್ದೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; ಯಾವಾಗ ಭರ್ತಿ ಮಾಡಲಾಗುವುದು ? (ವಿವರ ನೀಡುವುದು)

## ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮಳೆಯ ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೨೯ (೧೬೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮಳೆಯು ಪ್ರವಾಹದಿಂದ ಹಾನಿಗೊಳಗಾದ ಪ್ರದೇಶವೆಷ್ಟು ; ಎಷ್ಟು ಹೆಕ್ಟೇರ್ ಬೆಳೆ ನಾಶವಾಗಿದೆ ; ಎಷ್ಟು ಮನೆ, ಜನರ ಪ್ರಾಣ ಹಾಗೂ ಪಶು–ಜಾನುವಾರುಗಳ ಪ್ರಾಣ ಹಾನಿಯಾಗಿದೆ ; ಎಷ್ಟು ಜನ ಪ್ರವಾಹದಿಂದ ನಿರಾಶ್ರಿತರಾಗಿದ್ದಾರೆ ; (ವಿವರ ನೀಡುವುದು)

(ಆ) ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ಪ್ರದೇಶಗಳ ಜನ–ಜಾನುವಾರು ಪ್ರಾಣಹಾನಿ ಇತ್ಯಾದಿಗಳಿಗೆ ಸರ್ಕಾರ ಘೋಷಿಸಿರುವ ಪರಿಹಾರ ಮೊತ್ತ ಎಷ್ಟು ;

(ಇ) ಇಲ್ಲಿಯವರೆಗೆ ಎಷ್ಟು ರೈತರಿಗೆ ಪರಿಹಾರ ವಿತರಣೆ ಮಾಡಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವಾಲಯಗಳ ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೦ (೧೬೩೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ದೇವಾಲಯಗಳನ್ನು ಮುಜರಾಯಿ ಇಲಾಖೆಗೆ ಒಳಪಡಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ದೇವಾಲಯಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ ; (ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಯಾವ ಯಾವ ದೇವಾಲಯಗಳನ್ನು ಅಭಿವೃದ್ಧಿ ಮಾಡಲಾಗಿದೆ ? (ಬಾಕಿ ಇರುವ ದೇವಾಲಯಗಳ ವಿವರ ನೀಡುವುದು)

## ಜಿಲ್ಲಾಧಿಕಾರಿಗಳ ತಹಶೀಲ್ದಾರ್ A.C.ಗಳ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೧ (೧೬೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುವ ಜಿಲ್ಲಾಧಿಕಾರಿಗಳ/ಉಪ ವಿಭಾಗಾಧಿಕಾರಿಗಳ ಹಾಗೂ ತಹಶೀಲ್ದಾರ್‌ಗಳ ಕಛೇರಿ ಕಡತಗಳು ಸೇರಿದಂತೆ ನ್ಯಾಯಾಲಯಗಳಲ್ಲಿ ಇತ್ಯಾರ್ಥವಾಗದೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ಈ ಪ್ರಕರಣಗಳು ಎಷ್ಟು ವರ್ಷಗಳಿಂದ ಬಾಕಿ ಉಳಿದಿವೆ ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಆ) ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥ ಮಾಡಲು ಸರ್ಕಾರ ವಿಶೇಷ ಅಭಿಯಾನ ಹಮ್ಮಿಕೊಂಡರೂ ಸಹ ಅವಧಿಗೆ ಮೀರಿದ ಪ್ರಕರಣಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ; ಬಂದಿದ್ದಲ್ಲಿ, ಬಾಕಿ ಉಳಿಸಿಕೊಂಡಿರುವ ಅಧಿಕಾರಿ/ನೌಕರರ ಮೇಲೆ ಸರ್ಕಾರ ಯಾವ ರೀತಿ ಕಾನೂನು ಕ್ರಮ ಜರುಗಿಸಿದೆ ; (ಮಾಹಿತಿಯೊಂದಿಗೆ ವಿವರ ನೀಡುವುದು)

(ಇ) ಬಗರ್ ಹುಕುಂ ರೈತರ ಜಮೀನು ಸರ್ವೆ ಮತ್ತು ಆರ್.ಟಿ.ಸಿ. ಹಾಗೂ ಪೋಡಿ ದುರಸ್ತಿ ಸಮಸ್ಯೆ ನಿವಾರಣೆಗೆ ನನ್ನ ಭೂಮಿ ಅಭಿಯಾನದಡಿ ಇಲ್ಲಿಯವರೆಗೂ ಎಷ್ಟು ಪ್ರಕರಣಗಳು ವಿಲೇವಾರಿ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಈ) ಬಾಕಿ ಇರುವ ಈ ಎಲ್ಲಾ ಸಮಸ್ಯೆಗಳನ್ನು ಎಷ್ಟು ದಿನಗಳಲ್ಲಿ ವಿಲೇವಾರಿ ಮಾಡಲು ಸಮಯವನ್ನು ನಿಗದಿಪಡಿಲಾಗಿದೆ ? (ವಿವರ ನೀಡುವುದು)

## ಗ್ರಾಮ ಆಡಳಿತಾಧಿಕಾರಿಗೆ ಕಛೇರಿ ಸ್ಥಳ ಒದಗಿಸುವ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೨ (೧೬೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಹಳ ವರ್ಷಗಳಿಂದ ರಾಜ್ಯದಲ್ಲಿರುವ ಗ್ರಾಮ ಆಡಳಿತಾಧಿಕಾರಿಗಳು (ವಿ.ಎ.ಗಳು) ಗ್ರಾಮ ಪಂಚಾಯಿತಿಗಳಿಗೆ ಬಾರದೆ ತಾಲ್ಲೂಕು/ ನಾಡ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು ; (ವಿವರ ನೀಡುವುದು)

(ಆ) ಸಾರ್ವಜನಿಕರು ಅದರಲ್ಲೂ ಹೆಚ್ಚಾಗಿ ರೈತರು ೨೫–೩೦ ಕಿ.ಮೀ.ಪ್ರಯಾಣ ಮಾಡಿ, ತಾಲ್ಲೂಕು ಕಛೇರಿ/ನಾಡ ಕಛೇರಿಗಳಿಗೆ ಹೋಗಿ ಅವರ ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ; ಇದಕ್ಕೆ ಸರ್ಕಾರದ ನಿರ್ಧಾರವೇನು ; (ವಿವರ ನೀಡುವುದು)

(ಇ) ಇದಕ್ಕೆ ಕಡಿವಾಣ ಹಾಕಲು ಗ್ರಾಮ ಪಂಚಾಯಿತಿ ಕಛೇರಿಗಳಲ್ಲೇ, ಈ ಕಂದಾಯ ಇಲಾಖೆಯ ಆಡಳಿತಾಧಿಕಾರಿಗಳಿಗೆ ಪ್ರತ್ಯೇಕ ಕಛೇರಿ ತೆರೆದು ಕಾರ್ಯನಿರ್ವಹಿಸುವ ವ್ಯವಸ್ಥೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ತಕ್ಷಣ ನಿರ್ಧಾರ ತೆಗೆದುಕೊಳ್ಳುವುದೇ ;

(ಈ) ವಂಶವೃಕ್ಷ ವಿತರಣೆ ಅಧಿಕಾರವನ್ನು ಎ.ಸಿ.ಗಳಿಗೆ ನೀಡಿದ ಅಧಿಕಾರಕ್ಕೆ ತಡೆಯಾಜ್ಞೆಯನ್ನು ತೆರವುಗೊಳಿಸಲಾಗಿದೆಯೇ ;

(ಉ) ರಾಜ್ಯದಲ್ಲಿ ಸುಮಾರು ೬೦ಲಕ್ಷಕ್ಕೂ ಹೆಚ್ಚು ಕೃಷಿ ಭೂಮಿಗೆ ಪೌತಿ ಖಾತೆ ಆಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಅಧಿಕಾರಿ/ನೌಕರರಿಗೆ ಕರ್ತವ್ಯ ನಿರ್ವಹಿಸಲು ಸ್ಪಷ್ಟ ಆದೇಶ ನೀಡುವುದೇ ?

## ಭೂ ಪರಿವರ್ತನೆ ಇಲ್ಲದೆ ರೈತರ ಜಮೀನಿನಲ್ಲಿ ಮನೆ ನಿರ್ಮಾಣದ ಬಗ್ಗೆ

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೩ (೧೬೧೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ಪರಿವರ್ತನೆ ಇಲ್ಲದೆ ರೈತರ ಕೃಷಿ ಭೂಮಿಯಲ್ಲಿ ಮನೆ/ ಫಾರಂಹೌಸ್/ದನಗಳ ಕೊಟ್ಟಿಗೆ/ಹಿಪ್ಪುನೇರಳೆ ಸಾಗಾಣಿಕೆ/ಕೋಳಿ ಸಾಗಾಣಿಕೆ ಶೆಡ್ ಹಾಗೂ ಇತರೆ ಸಾಗಾಣಿಕೆ ಮನೆಗಳನ್ನು ನಿರ್ಮಿಸಿಕೊಳ್ಳಲು ಎಷ್ಟು ಗುಂಟೆ ಜಾಗವನ್ನು ಬಳಸಿಕೊಳ್ಳಲು ಅವಕಾಶವಿದೆ ; (ವಿವರ ನೀಡುವುದು)

(ಆ) ರೈತರು ಮೇಲೆ ತಿಳಿಸಿರುವ ಮನೆಗಳನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದರೆ ಜಿಲ್ಲೆಯ ಕಂದಾಯ ಮತ್ತು ಸ್ಥಳೀಯ ಅಧಿಕಾರಿಗಳು ರೈತರಿಗೆ ನೋಟಿಸ್ ನೀಡುವುದು, ಕಟ್ಟುತ್ತಿರುವ ಮನೆಗಳನ್ನು ಸ್ಥಗಿತಗೊಳಿಸುವುದು, ಹಾಗೂ ದಂಡ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ;

(ಇ) ಬಂದಿದ್ದಲ್ಲಿ, ರೈತರ ರಕ್ಷಣೆಗಾಗಿ ಸರ್ಕಾರ ಸೂಕ್ತ ಆದೇಶವನ್ನು ಹೊರಡಿಸಲು ತಕ್ಷಣ ಕ್ರಮವಹಿಸುವುದೇ ; (ತಿಳಿಸುವುದು) ಈ ಬಗ್ಗೆ ಸರ್ಕಾರ ಆದೇಶ ಹೊರಡಿಸಿದ್ದಲ್ಲಿ, ಆದೇಶ/ಸುತ್ತೋಲೆ ಪ್ರತಿಯನ್ನು ಒದಗಿಸುವುದರೊಂದಿಗೆ ವಿವರವಾದ ಮಾಹಿತಿ ಒದಗಿಸುವುದು ?

## ಸಾರಿಗೆ ಇಲಾಖೆಯಿಂದ ಊಬರ್, ಓಲೋ ವಾಹನಗಳ ದರದ ಬಗ್ಗೆ

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೪ (೧೬೧೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರಿಗೆ ಇಲಾಖೆಯಿಂದ ಉಬರ್, ಓಲೋ, ಆಟೋರಿಕ್ಷ ಮತ್ತು ರ್‍ಯಾಪಿಡೋ ಸಾರ್ವಜನಿಕ ವಾಹನಗಳಿಗೆ ದರವನ್ನು ನಿಗದಿಗೊಳಿಸಿ ಆದೇಶ ಹೊರಡಿಸಲಾಗಿದೆಯೇ ; (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)

(ಆ) ಈ ಸಾರ್ವಜನಿಕ ವಾಹನಗಳು ಹೆಚ್ಚಾಗಿ ಪೀಕ್ ಅವರ್‌ನಲ್ಲಿ ಮತ್ತು ಇತರೆ ಸಮಯದಲ್ಲಿ ಹೆಚ್ಚಿನ ದರಗಳನ್ನು ನಿಗದಿ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಆ ಕಂಪನಿಗಳ ವಾಹನಗಳನ್ನು ಸಾರಿಗೆ ಇಲಾಖೆ ಅಧಿಕಾರಿಗಳು ತಪಾಸಣೆಮಾಡಿ, ಅಂತಹ ವಾಹನಗಳ ಮೇಲೆ ಎಷ್ಟು ಕಟ್ಟು ನಿಟ್ಟು ಕ್ರಮಗಳನ್ನು ಜರಗಿಸಿದ್ದಾರೆ ; (ವಿವರ ನೀಡುವುದು)

(ಈ) ಸಾರ್ವಜನಿಕ ವಾಹನಗಳನ್ನು ತಪಾಸಣೆ ಮಾಡಿ ಸರ್ಕಾರ ನಿಗದಿಪಡಿಸಿರುವ ದರವನ್ನೆ ಪಡೆಯುವ ವ್ಯವಸ್ಥೆಯನ್ನು ತಕ್ಷಣವೇ ಜಾರಿಗೆ ತರಲಾಗುವುದೇ ? (ವಿವರ ನೀಡುವುದು)

## ಮೀನು ಸಾಕಾಣಿಕೆಗೆ ಕೆರೆಗಳನ್ನು ನೀಡುವ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೩೫ (೧೬೧೮) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ಇಲಾಖೆವತಿಯಿಂದ ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಎಷ್ಟು ಕರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ ;

(ಆ) ಬೆಂಗಳೂರು ನಗರ ಜಿಲ್ಲೆಯ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಯಾವ ಯಾವ ಕೆರೆಗಳಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಇ) ಬೆಂಗಳೂರು ನಗರ ಜಿಲ್ಲೆಯಲ್ಲಿ ಮೀನು ಸಾಕಾಣಿಕೆ ಮಾಡಲು ಯಾವ ಯಾವ ಕೆರೆಗಳನ್ನು ಟೆಂಡರ್ ಮೂಲಕ ನೀಡಲಾಗಿದೆ ; (ಮಾಹಿತಿ ಒದಗಿಸುವುದು)

(ಈ) ಮೀನುಗಾರಿಕೆ ಇಲಾಖೆಯಿಂದ ಸಾರ್ವಜನಿಕರಿಗೆ ನೀಡುವ ಮೂಲಭೂತ ಸೌಲಭ್ಯಗಳ ವಿವರವಾದ ಮಾಹಿತಿಯನ್ನು ಸರ್ಕಾರದ ಆದೇಶಗಳೊಂದಿಗೆ ಒದಗಿಸುವುದು ;

(ಉ) ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದಂತೆ ಇಲಾಖಾ ವತಿಯಿಂದ ಕಳೆದ ಎರಡು ವರ್ಷಗಳಲ್ಲಿ ನೀಡಿರುವ ಮೂಲಭೂತ ಸೌರ್ಕಯಗಳ ವಿವರ ಒದಗಿಸುವುದು ?

## ಶಾಸಕರ ಭವನದ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್.(ವಿಧಾನಸಭೆಯಿಂದ ಚುನಾಯಿತರಾದವರು):–**

೧೪೩೬ (೧೬೩೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜೂನ್–೨೦೨೩ ರಿಂದ ಈವರೆಗೆ ಬೆಂಗಳೂರಿನ ಶಾಸಕರ ಭವನದಲ್ಲಿ (ಎಲ್‌ಹೆಚ್) ಕೈಗೊಂಡಿರುವ ಒಟ್ಟು ಸಿವಿಲ್ (Civil) ಎಲೆಕ್ಟ್ರಿಕಲ್ (Electrical), ಪ್ಲಂಬಿಂಗ್ (Plumbing) ಮತ್ತು ಇತರ ನವೀಕರಣ ಕಾಮಗಾರಿಗಳ ವಿವರ ಹಾಗೂ ಇದಕ್ಕಾಗಿ ವೆಚ್ಚ ಮಾಡಲಾದ ಒಟ್ಟು ಮೊತ್ತ ಎಷ್ಟು ; (ಕಾಮಗಾರಿವಾರು ಮತ್ತು ಕೊಠಡಿವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಅಲ್ಪಾವಧಿಯಲ್ಲಿಯೇ ಪದೇ ಪದೇ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕಾಮಗಾರಿಗಳ ಗುಣಮಟ್ಟದ ಬಗ್ಗೆ ನಡೆಸಲಾದ ತಪಾಸಣೆಗಳ ವರದಿ ಎಲ್ಲಿದೆ ;

(ಇ) ರಾಜ್ಯ ಸರ್ಕಾರವು ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ಕಡ್ಡಾಯವಾಗಿ ಸೌರ ಮೇಲ್ಛಾವಣಿ (Solar Rooftop) ಅಳವಡಿಸಬೇಕೆಂದು ಆದೇಶ ಹೊರಡಿಸಿದ್ದರೂ. ಶಾಸಕರ ಭವನದಲ್ಲಿ ಇದುವರೆಗೆ ಸೌರಶಕ್ತಿ ಘಟಕಗಳನ್ನು ಅಳವಡಿಸದಿರಲು ಕಾರಣಗಳೇನು ;

(ಈ) ಶಾಸಕರ ಭವನದ ಮಾಸಿಕ ವಿದ್ಯುತ್ ಬಿಲ್ ಸರಾಸರಿ ಎಷ್ಟು ಬರುತ್ತದೆ ; ಸೌರಶಕ್ತಿ ಅಳವಡಿಕೆಯಿಂದ ಸರ್ಕಾರಕ್ಕೆ ಆಗಬಹುದಾದ ಉಳಿತಾಯದ ಬಗ್ಗೆ ಇಲಾಖೆಯು ಯಾವುದಾದರೂ ಸಮೀಕ್ಷೆ ನಡೆಸಿದೆಯೇ ;

(ಉ) ಯಾವ ಕಾಲಮಿತಿಯೊಳಗೆ ಶಾಸಕರ ಭವನವನ್ನು ಸಂಪೂರ್ಣವಾಗಿ ಸೌರಶಕ್ತಿ ಚಾಲಿತ ಕಟ್ಟಡವನ್ನಾಗಿ (Solar-powered building) ಪರಿವರ್ತಿಸಲು ಸರ್ಕಾರ ಯೋಚಿಸಿದೆ ?

## ರಾಜ್ಯದಲ್ಲಿರುವ ಲೋಕೋಪಯೋಗಿ ವಸತಿ ಗೃಹಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್.(ವಿಧಾನಸಭೆಯಿಂದ ಚುನಾಯಿತರಾದವರು):–**

೧೪೩೭ (೧೬೩೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೌಕರರಿಗೆ ಅನುಕೂಲವಾಗಲು ಲೋಕೋಪಯೋಗಿ ಇಲಾಖಾವತಿಯ ವ್ಯಾಪ್ತಿಗೆ ಒಳಪಟ್ಟ ವಾಸ್ತವ್ಯಕ್ಕೆ ಯೋಗ್ಯವಿರುವ ವಸತಿ ಗೃಹಗಳ ಸಂಖ್ಯೆಯೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ವಿಜಯಪುರ ನಗರದ ಆದಿಲ್‌ಶಾಹಿ ಹೋಟೆಲ್ ಪಕ್ಕದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ನಿಲಯಗಳು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ದುರಸ್ತಿಪಡಿಸಿ ನೌಕರರ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಕಳೆದ ೩ ವರ್ಷಗಳಲ್ಲಿ ಇಲಾಖೆಯ ವತಿಯಿಂದ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲಾಗಿದೆ ; ಹಾಗೂ ವಾಸಿಸುತ್ತಿರುವ ಸರ್ಕಾರಿ ಅಧಿಕಾರಿಗಳ ಕುಟುಂಬಗಳಿಗೆ ಯಾವ ರೀತಿಯ ವ್ಯವಸ್ಥೆಗಳನ್ನು ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿರುವ ಬಹುತೇಕ ವಸತಿ ಗೃಹಗಳು ಪಾಳುಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಪಾಳು ಬೀಳಲು ಕಾರಣಗಳೇನು ; ಕಳೆದ ೩ ವರ್ಷದಿಂದ ವಸತಿ ಗೃಹಗಳ ನಿರ್ವಹಣೆಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಉ) ವಸತಿ ಗೃಹಕ್ಕಾಗಿ ಬೇಡಿಕೆ ಎಷ್ಟಿದೆ ಬೇಡಿಕೆಯನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ನೌಕರರ ವಸತಿ ವ್ಯವಸ್ಥೆಗೆ ಅನುಕೂಲವಾಗಲು ಲೋಕೋಪಯೋಗಿ ಇಲಾಖಾವತಿಯ ವ್ಯಾಪ್ತಿಗೆ ಒಳಪಟ್ಟಂತೆ ವಸತಿ ಗೃಹಗಳ ಸಂಖ್ಯೆ ರಾಜ್ಯದಾದ್ಯಂತೆ ಜಿಲ್ಲಾವಾರು ಎಷ್ಟಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ದೇವರ ಹಿಪ್ಪರಗಿ ತಾಲ್ಲೂಕಿನ ಜಲವಾದ ಗ್ರಾಮದಲ್ಲಿ ಪಶು ಆಸ್ಪತ್ರೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್.(ವಿಧಾನಸಭೆಯಿಂದ ಚುನಾಯಿತರಾದವರು):–**

೧೪೩೮ (೧೬೩೨) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲ್ಲೂಕಿನ ಜಲವಾದ ಗ್ರಾಮದಲ್ಲಿ ಪಶು ಆಸ್ಪತ್ರೆ ನಿರ್ಮಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಮಂಜೂರಾತಿಯನ್ನು ನೀಡಲಾಗುವುದು ; (ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಆ) ಸದರಿ ಗ್ರಾಮದಲ್ಲಿ ಜಾನುವಾರುಗಳು ಬಹುಸಂಖ್ಯೆಯಲ್ಲಿ ಇದ್ದು, ರೋಗರುಜಿನಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಇ) ಹೊಸದಾಗಿ ಪಶು ಆಸ್ಪತ್ರೆ ಮಂಜೂರಾತಿಗೆ ಯಾವ ಯಾವ ಗಣ್ಯವ್ಯಕ್ತಿಗಳು ಶಿಫಾರಸ್ಸು ಪತ್ರಗಳನ್ನು ನೀಡಿದ್ದಾರೆ; ಹೊಸದಾಗಿ ಪಶು ಆಸ್ಪತ್ರೆ ಸ್ಥಾಪಿಸಲು ಬೇಕಾದ ಮಾನದಂಡಗಳು ಹಾಗೂ ಮೂಲ ಸೌಕರ್ಯಗಳು ಇದ್ದರು ಕೂಡಾ ವಿಳಂಬವಾಗಲು ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ರಸ್ತೆಯ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೩೯ (೧೭೦೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಲೋಕೋಪಯೋಗಿ ಇಲಾಖೆ (PWD) ಅಧೀನದಲ್ಲಿರುವ ರಾಜ್ಯ ಹೆದ್ದಾರಿಗಳು ಹಾಗೂ ಪ್ರಮುಖ ಜಿಲ್ಲಾ ರಸ್ತೆಗಳ ಸ್ಥಿತಿ ದಿನೇ ದಿನೇ ಹದಗೆಡುತ್ತಿದ್ದು, ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೂಲಭೂತ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದಿಂದ ಸಮರ್ಪಕ ಅನುದಾನ ಬಿಡುಗಡೆ ಮಾಡಲಾಗುತ್ತಿದೆಯೇ ; ಎಷ್ಟು ಅನುದಾನ ಬಿಡುಗಡೆ ಆಗಿದೆ ;

(ಇ) ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಡಿ ರಾಜ್ಯ ಹೆದ್ದಾರಿ ಮತ್ತು ಪ್ರಮುಖ ಜಿಲ್ಲಾ ರಸ್ತೆಗಳಿಗೆ ಜಿಲ್ಲಾವಾರು ಮಂಜೂರಾದ ಒಟ್ಟು ಅನುದಾನ ಎಷ್ಟು ; ಸದರಿ ಮಂಜೂರಾದ ಅನುದಾನದಲ್ಲಿ ವಾಸ್ತವವಾಗಿ ಬಿಡುಗಡೆಗೊಂಡ ಹಾಗೂ ಖರ್ಚಾಗಿರುವ ಮೊತ್ತ ಎಷ್ಟು ;

(ಈ) ಅನುದಾನ ಕೊರತೆಯಿಂದ ಸ್ಥಗಿತಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ರಸ್ತೆ ಅಭಿವೃದ್ಧಿಗೆ ಕೇಂದ್ರ ಪ್ರಾಯೋಜಿತ ಯೋಜನೆಗಳು, NABARD, HUDCO ಅಥವಾ ಇತರ ಹಣಕಾಸು ಮೂಲಗಳಿಂದ ಹಣಕಾಸು ಒದಗಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಈ ಸಂಸ್ಥೆಗಳಿಂದ ಎಷ್ಟು ಅನುದಾನ ಬಂದಿದೆ ;

(ಊ) ಹಾಳಾದ ರಸ್ತೆಗಳ ಗುಣಮಟ್ಟ ಪರಿಶೀಲನ ನಡೆಸಲಾಗುತ್ತಿದೆಯೇ ;

(ಋ) ಗ್ರಾಮೀಣ ಹಾಗೂ ನಗರ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಹೊಸ ಸಮಗ್ರ ಮಾಸ್ಟರ್ ಪ್ಲಾನ್ ರೂಪಿಸುವ ಉದ್ದೇಶ ಸರ್ಕಾರಕ್ಕಿದೆಯೇ ಹಾಗೂ ಮುಂದಿನ ಆರ್ಥಿಕ ವರ್ಷದಲ್ಲಿ ರಸ್ತೆ ; ಮೂಲಸೌಕರ್ಯ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಿಸುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನು ;

(ಎ) ಹಾಳಾದ ರಸ್ತೆಗಳ ಮರು ನಿರ್ಮಾಣ ಹಾಗೂ ಹೊಸ ರಸ್ತೆಗಳ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ?

## ಮೀನುಗಾರಿಕೆ ಇಲಾಖೆಯಿಂದ ಮಂಜೂರಾದ ಅನುದಾನದ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೦ (೧೬೨೮) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯ ಮುಖಾಂತರ ಕೊಡಗು ಜಿಲ್ಲೆಗೆ ಮಂಜೂರಾದ ಹಾಗೂ ವಿನಿಯೋಗಿಸಿದ ಅನುದಾನವೆಷ್ಟು ; ಕಾಮಗಾರಿವಾರು ವಿವರ ನೀಡುವುದು ;

(ಆ) ಮೀನುಗಾರಿಕೆ ಇಲಾಖೆಯಲ್ಲಿರುವ ಯೋಜನೆಗಳಾವುವು ; ಈ ಯೋಜನೆಗಳನ್ನು ಪಡೆಯಲು ಇರುವ ಮಾನದಂಡಗಳೇನು ; ಯೋಜನೆಗಳ ಮಾಹಿತಿಯನ್ನು ನೀಡುವುದು ?

## ವಸತಿ ಬಡಾವಣೆ ಅಭಿವೃದ್ಧಿಪಡಿಸಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೪೪೧ (೧೬೮೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗೃಹ ಮಂಡಳಿವತಿಯಿಂದ ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಯ ಎಲೆಚಾಕನಹಳ್ಳಿ, ಗ್ರಾಮದಲ್ಲಿ ವಸತಿ ಬಡಾವಣೆ ಅಭಿವೃದ್ಧಿಪಡಿಸಲು ರೈತರಿಂದ ಎಷ್ಟು ಎಕರೆ ಜಮೀನನ್ನು ಸ್ವಾಧೀನಕ್ಕೆ ಪಡೆಯಲಾಗಿದೆ ; ಯಾವ್ಯಾವ ಗ್ರಾಮಗಳ ರೈತರು ಯೋಜನೆ ಭೂಮಿ ಬಿಟ್ಟುಕೊಟ್ಟಿದ್ದಾರೆ ಗ್ರಾಮಗಳ ಹೆಸರು, ಭೂಮಿ ಬಿಟ್ಟುಕೊಟ್ಟ ರೈತರ ಸಂಖ್ಯೆ ಸರ್ವೆ ನಂಬರ್ ಕುರಿತು ವಿವರ ನೀಡುವುದು ;

(ಆ) ಭೂಮಿ ಬಿಟ್ಟುಕೊಟ್ಟ ರೈತರಿಗೆ ಪ್ರತಿ ಎಕರೆಗೆ ಪಾವತಿಸಲಾಗಿರುವ ಪರಿಹಾರ ಮೊತ್ತ ಎಷ್ಟು ; ಭೂಪರಿಹಾರವಾಗಿ ಒಟ್ಟಾರೆ ಪಾವತಿಸಿರುವ ಮೊತ್ತವೆಷ್ಟು ; ಭೂ ಪರಿಹಾರಕ್ಕೆ ಒಪ್ಪದ ರೈತರು ನ್ಯಾಯಾಲಯದಲ್ಲಿ ದಾವೆ ಹೂಡಿರುವ ಪ್ರಕರಣಗಳಿವೆಯೇ ;

(ಇ) ಯೋಜನೆಗೆ ಭೂಮಿ ನೀಡಿರುವ ರೈತರಿಗೆ ಯಾವ ರೀತಿಯ ಅನುಕೂಲಗಳನ್ನು ಕಲ್ಪಿಸಲಾಗಿದೆ ;

(ಈ) ಸದರಿ ವಸತಿ ಯೋಜನೆಯ ಯೋಜನಾ ಮೊತ್ತ ಎಷ್ಟು ; ಸ್ವಾಧೀನಕ್ಕೆ ಪಡೆಯಲಾದ ಜಮೀನಿನಿಂದ ವಿವಿಧ ವರ್ಗಗಳ ಎಷ್ಟು ವಸತಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ ; (ವಾಣಿಜ್ಯ, ಸಿಎ ನಿವೇಶನ, ವಿವಿಧ ಅಳತೆಯ ನಿವೇಶನಗಳ ಸಂಖ್ಯೆ ಒಳಗೊಂಡಂತೆ ಸಂಪೂರ್ಣ ಮಾಹಿತಿ ನೀಡುವುದು)

(ಉ) ಸದರಿ ವಸತಿ ಬಡಾವಣೆಯಲ್ಲಿ ಕಲ್ಪಿಸಿರುವ ಮೂಲ ಸೌಲಭ್ಯಗಳಾವುವು ; (ಸಂಪೂರ್ಣ ವಿವರ ನೀಡುವುದು)

(ಊ) ಸಾರ್ವಜನಿಕರಿಗೆ ಸದರಿ ವಸತಿ ಬಡಾವಣೆಯಲ್ಲಿ ನಿವೇಶನ ಆಯ್ಕೆಗೆ ಯಾವಾಗ ಅವಕಾಶ ಕಲ್ಪಿಸಲಾಗುವುದು ?

## ಭೂ ದಾಖಲೆಗಳ ಡಿಜಿಟಲೀಕರಣ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೪೪೨ (೧೬೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯ ತಾಲ್ಲೂಕು ಕಛೇರಿ, ಉಪ ವಿಭಾಗಾಧಿಕಾರಿ ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಭೂ ದಾಖಲೆಗಳನ್ನು ಡಿಜಿಟಲೀಕರಣ ಮಾಡುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಮೇಲ್ಕಾಣಿಸಿದ ಜಿಲ್ಲಾ ವ್ಯಾಪ್ತಿಯ ಯಾವುದಾದರೂ ತಾಲ್ಲೂಕು ಕಛೇರಿಗಳಲ್ಲಿ ಭೂ ದಾಖಲೆಗಳ ಡಿಜಿಟಲೀಕರಣ ಪೂರ್ಣಗೊಂಡಿದೆಯೇ ; (ಇದ್ದಲ್ಲಿ ವಿವರ ನೀಡುವುದು)

(ಇ) ಹಾಗೇ ಜಿಲ್ಲಾವಾರು ಎಲ್ಲಾ ತಾಲ್ಲೂಕು ಕಛೇರಿಗಳ ಪ್ರಗತಿ ನೀಡುವುದು ; ಜಿಲ್ಲೆ, ತಾಲ್ಲೂಕು ಕಛೇರಿ ಹೆಸರು, ಮೂಲ ಭೂ ದಾಖಲೆಗಳ ಒಟ್ಟು ಸಂಖ್ಯೆ ಡಿಜಿಟಲೀಕರಣಗೊಳಿಸಿದ ಭೂ ದಾಖಲೆಗಳ ಸಂಖ್ಯೆ ಶೇಕಡವಾರು ಪ್ರಗತಿ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಈ) ಉಪ ವಿಭಾಗಾಧಿಕಾರಿ ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಭೂ ದಾಖಲೆಗಳನ್ನು ಡಿಜಿಟಲೀಕರಣ ಕುರಿತು ಮಾಹಿತಿ ಒದಗಿಸುವುದು ; ಜಿಲ್ಲೆ AC/DC ಕಛೇರಿ ಹೆಸರು, ಮೂಲ ಭೂ ದಾಖಲೆಗಳ ಒಟ್ಟು ಸಂಖ್ಯೆ ಡಿಜಿಟಲೀಕರಣಗೊಳಿಸಿದ ಭೂ ದಾಖಲೆಗಳ ಸಂಖ್ಯೆ. ಶೇಕಡವಾರು ಪ್ರಗತಿ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಉ) ಭೂ ದಾಖಲೆಗಳ ಡಿಜಿಟಲೀಕರಣಕ್ಕಾಗಿ ಯಾವ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ; ಇದಕ್ಕಾಗಿ ಭರಿಸಲಾಗುತ್ತಿರುವ ವೆಚ್ಚ ಎಷ್ಟು ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಅನುಗ್ರಹ ಕೊಡುಗೆ ಯೋಜನೆ'ಯಡಿ ಪರಿಹಾರ ಮತ್ತು ಪಾವತಿಸದಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೪೪೩ (೧೬೮೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 'ಅನುಗ್ರಹ ಕೊಡುಗೆ ಯೋಜನೆ'ಯಡಿ ಆಕಸ್ಮಿಕ ಮರಣ ಹೊಂದಿದ ಜಾನುವಾರುಗಳಿಗೆ ಪ್ರಸ್ತುತ ನೀಡುತ್ತಿರುವ ಪರಿಹಾರ ಮೊತ್ತ ಎಷ್ಟು ;

(ಆ) ೨೦೨೨-೨೩ನೇ ಸಾಲಿನಿಂದ ಈವರೆಗೆ ಆಕಸ್ಮಿಕ ಮರಣ ಹೊಂದಿದ ಮೇಕೆ/ಕುರಿ ಹಾಗೂ ಹಸು-ಎಮ್ಮೆ-ಎತ್ತುಗಳ (ಪರಿಹಾರ ಧನ ವಿತರಿಸಿರುವ ಪ್ರಕರಣಗಳಲ್ಲಿ) ಸಂಖ್ಯೆ ಎಷ್ಟು; ಪರಿಹಾರ ಪಾವತಿಸಿದ ಮೊತ್ತ ಮತ್ತು ಪಾವತಿಸಲು ಬಾಕಿ ಇರುವ ಮೊತ್ತ ಎಷ್ಟು; (ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು)

(ಇ) ಪರಿಹಾರ ಪಡೆಯಲು ಅರ್ಜಿ ವಿಲೇವಾರಿ ಪ್ರಕ್ರಿಯೆಯೇನು; (ವಿವರವಾದ ಮಾಹಿತಿ ನೀಡುವುದು)

(ಈ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹೊಸದಾಗಿ ಪಶು ವೈದ್ಯಕೀಯ ಆಸ್ಪತ್ರೆ/ಚಿಕಿತ್ಸಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದೆಯೇ; ಇದ್ದಲ್ಲಿ,ಪೊ ಎಲ್ಲೆಲ್ಲಿ ಮಾಡಲಾಗುತ್ತಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಉ) ಸದರಿ ಜಿಲ್ಲೆಗಳಲ್ಲಿ ಬಾಡಿಗೆ/ಖಾಸಗಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಆಸ್ಪತ್ರೆ/ಚಿಕಿತ್ಸಾಲಯಗಳ ಮಾಹಿತಿ ನೀಡುವುದು ?

## ಏಕ ಮತ್ತು ಜಂಟಿ ಮಾಲೀಕತ್ವವಿರುವ ಇ-ಪೌತಿ ಖಾತೆಗಳ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೧೪೪೪ (೧೬೮೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಏಕ ಮಾಲೀಕತ್ವ ಮತ್ತು ಇಂಟಿ ಮಾಲೀಕತ್ವದಲ್ಲಿ ಇರುವ ಇ-ಪೌತಿ ಖಾತೆಗಳ ಸಂಖ್ಯೆ ಎಷ್ಟು; (ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಏಕ ಮಾಲೀಕತ್ವಕ್ಕೆ ಹೋಲಿಸಿದರೆ ಜಂಟಿ ಮಾಲೀಕತ್ವದಲ್ಲಿರುವ ಖಾತೆಗಳ ಸಂಖ್ಯೆಯಲ್ಲಿ ಮೂರ್ನಾಲ್ಕು ಪಟ್ಟು ಹೆಚ್ಚಿರುವುದು ನಿಜವೇ ;

(ಇ) ಇದ್ದಲ್ಲಿ, ಕ್ಷೇತ್ರ ಮಟ್ಟದಲ್ಲಿ ಗುರುತಿಸಿದಂತೆ ಇರುವ ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿರುವ ಖಾತಾ ಅಮೀನುಗಳ ಸಂಖ್ಯೆ ಎಷ್ಟು ; ಮೃತರ ಹೆಸರಿನಲ್ಲಿರುವ ಪಹಣಿಗಳ ಸಂಖ್ಯೆ ಎಷ್ಟು ; ಸದರಿ ಮೇಲ್ಕಾಣಿಸಿದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಮಾಹಿತಿ ನೀಡುವುದು ;

(ಉ) ಬಹುವಾರಸುದಾರರು ಇರುವ ಪ್ರಕರಣಗಳಲ್ಲಿ ಇ–ಪೌತಿ ಖಾತೆಗಳನ್ನು ಯಾವ ರೀತಿ ಕೈಗೊಳ್ಳಲಾಗುತ್ತದೆ ? (ವಿವರ ನೀಡುವುದು)

## ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ನೆಲ್ಲೂರು ಗ್ರಾಮದ ದಲಿತ ಕುಟುಂಬಗಳ ವಸತಿ ಸಮಸ್ಯೆ ಕುರಿತು.

**ಶ್ರೀ ಪಿ. ಎಸ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೫ (೧೬೪೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಹೊಗ್ಯಂ ಗ್ರಾಮ ಪಂಚಾಯತ್ ವ್ಯಾಪ್ತಿಯ ನೆಲ್ಲೂರು ಗ್ರಾಮದಲ್ಲಿ ಸುಮಾರು ೪೦ಕ್ಕೂ ಹೆಚ್ಚು ದಲಿತ (ಆದಿ ಜಾಂಬದ) ಕುಟುಂಬಗಳು ಕಳೆದ ೨೦ ವರ್ಷಗಳಿಂದ ವಸತಿ ರಹಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಈ ಪೈಕಿ ಎಷ್ಟು ಕುಟುಂಬಗಳು ಶಿಥಲಗೊಂಡಿರುವ ಮನೆಗಳಲ್ಲಿ ಅಥವಾ ಒಂದೇ ಮನೆಯಲ್ಲಿ ೨–೩ ಕುಟುಂಬಗಳು ವಾಸಿಸುತ್ತಿವೆ ಎಂಬ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ ;

(ಇ) ಈ ಗ್ರಾಮದ ವಸತಿ ರಹಿತರಿಗಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಫಲಾನುಭವಿಗ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ; ಪಟ್ಟಿಯನ್ನು ಸಲ್ಲಿಸಿದ್ದರೆ, ಈವರೆಗೆ ಎಷ್ಟು ಮನೆಗಳು ಮಂಜೂರಾಗಿವೆ; ಮಂಜೂರಾಗದಿದ್ದಲ್ಲಿ, ಅದಕ್ಕೆ ಕಾರಣಗಳೇನು ;

(ಈ) ಗ್ರಾಮದಲ್ಲಿ ನಿವೇಶನಗಳ ಕೊರತೆಯಿಂದಾಗಿ ಜನರು ತಮಿಳುನಾಡಿಗೆ ವಲಸೆ ಹೋಗುತ್ತಿರುವುದು ಮತ್ತು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉ) ಈ ಕುಟುಂಬಗಳಿಗೆ ಮಳೆಗಾಲದಲ್ಲಿ ಎದುರಾಗುವ ಪ್ರವಾಹದ ಭೀತಿಯನ್ನು ತಪ್ಪಿಸಲು ಸುರಕ್ಷಿತ ಜಾಗದಲ್ಲಿ ನಿವೇಶನ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಊ) ಕಳೆದ ೫ ವರ್ಷಗಳಿಂದ ನಿರಂತರವಾಗಿ ಮನವಿ ನೀಡುತ್ತಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನುಃ ಈ ಕೂಡಲೇ ಈ ೪೦ ಕುಟುಂಬಗಳಿಗೆ ಮನೆ ನಿರ್ಮಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ರಾಜ್ಯದ ಆರ್‌ಟಿಓ ಕಛೇರಿಗಳಲ್ಲಿ ನಕಲಿ ದಾಖಲೆಗಳ ಸೃಷ್ಟಿ ಕುರಿತು

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೬ (೧೬೫೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಆರ್‌ಟಿಓ ಕಛೇರಿಗಳಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಳೆಯ ಬಸ್‌ಗಳನ್ನು ಹೊಸದಾಗಿ ನೋಂದಣಿ ಮಾಡಿ ಮಾರಾಟ ಮಾಡುತ್ತಿರುವ ವಂಚನೆ ಜಲ ಸಾರಿಗೆ ಇಲಾಖೆಯ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಹಗರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ವಿರುದ್ಧ ಸರ್ಕಾರವು ಕೈಗೊಂಡಿರುವ ಶಿಸ್ತು ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಈ ನಕಲಿ ದಾಖಲೆಗಳ ಹಗರಣದ ಬಗ್ಗೆ ತನಿಖೆ ನಡೆಸಲು ಜಂಟಿ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆಯೇ ಹಾಗಿದ್ದಲ್ಲಿ, ಆ ಸಮಿತಿಯು ವರದಿ ಸಲ್ಲಿಸಲು ನೀಡಿರುವ ಕಾಲಾವಕಾಶ ಎಷ್ಟು ಮತ್ತು ಈವರೆಗೆ ನಡೆಸಿರುವ ಪ್ರಗತಿಯೇನು ;

(ಈ) ನಿಯಮಗಳನ್ನು ಉಲ್ಲಂಘಿಸಿ ಫಿಟ್‌ನೆಸ್ ಸರ್ಟಿಫಿಕೇಟ್ (FC) ನೀಡಿದ ಆರೋಪದ ಮೇಲೆ ಅಮಾನತ್ತುಗೊಂಡಿರುವ ಅಧಿಕಾರಿಗಳ ವಿವರ ಮತ್ತು ಇಂತಹ ಅವ್ಯವಹಾರಗಳು ಮರುಕಳಿಸದಂತೆ ತಡೆಯಲು ಇಲಾಖೆಯು ತಂದಿರುವ ಸುಧಾರಣೆಗಳೇನು ?

## ಕೆ.ಎಸ್.ಆರ್.ಟಿ.ಸಿ ಬಸ್‌ಗಳಿಂದ ಸಂಭವಿಸುವ ಅಪಘಾತಗಳ ಪರಿಹಾರ ವಿಳಂಬ ಮತ್ತು ನ್ಯಾಯಾಲಯದ ಅಸ್ತಿ ಕ್ರಮಗಳ ಬಗ್ಗೆ

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೭ (೧೬೫೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಕೆ.ಎಸ್.ಆರ್.ಟಿ.ಸಿ ಬಸ್‌ಗಳಿಂದ ಸಂಭವಿಸಿದ ಅಪಘಾತಗಳ ಸಂಖ್ಯೆ ಎದ್ದು, ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯವು ಪರಿಹಾರ ನೀಡಲು ಆದೇಶಿಸಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಚನ್ನರಾಯಪಟ್ಟಣದ ನ್ಯಾಯಾಲಯವು ಇತ್ತೀಚೆಗೆ ಎರಡು ಬಸ್ ಗಳನ್ನು ಅಪ್ತಿ ಮಾಡಲು ಆದೇಶ ನೀಡಲು ಕಾರಣವಾದ ಅಂಶಗಳೇನು ; ನಿಗದಿತ ಅವಧಿಯಲ್ಲಿ ಮೃತರ ಕುಟುಂಬಕ್ಕೆ ಪರಿಹಾರ ನೀಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ;

(ಇ) ನ್ಯಾಯಾಲಯದ ಆದೇಶದ ಹೊರತಾಗಿಯೂ ಪರಿಹಾರ ನೀಡದ ಕಾರಣ ಕಳೆದ ಒಂದು ವರ್ಷದಲ್ಲಿ ರಾಜ್ಯದ ವಿವಿದೆಡೆ ಕೆ.ಎಸ್.ಆರ್.ಬಿ.ಸಿ ಸಂಸ್ಥೆಯ ಎಷ್ಟು ಬಸ್ ಗಳು ಜಪ್ತಿಯಾಗಿವೆ ;

(ಈ) ಸಾರಿಗೆ ಸಂಸ್ಥೆಯು ಇಂತಹ ಅಪಘಾತ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ತಕ್ಷಣದ ಪರಿಹಾರ ನೀಡಲು ಯಾವುದಾದರೂ ವಿಶೇಷ ನಿಧಿಯನ್ನು (Corpus Fund) ಹೊಂದಿದೆಯೇ ; ಇಲ್ಲದಿದ್ದಲ್ಲಿ, ಸರ್ಕಾರ ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ;

(ಉ) ಬಸ್‌ಗಳ ಜಪ್ತಿಯಿಂದಾಗಿ ಸಾರ್ವಜನಿಕ ಸಾರಿಗೆಗೆ ಉಂಟಾಗುತ್ತಿರುವ ವ್ಯತ್ಯಯ ಮತ್ತು ಸಂಸ್ಥೆಯ ಘನತೆಗೆ ಆಗುತ್ತಿರುವ ಹಾನಿಯನ್ನು ತಪ್ಪಿಸಲು ಸರ್ಕಾರ ಯಾವ ಕಟ್ಟುನಿನ ಕ್ರಮಗಳನ್ನು ಕೈಗೊಳ್ಳಲಿದೆ ?

## ಮೈಸೂರಿನ ಟಿ.ನರಸೀಪುರದಲ್ಲಿರುವ ರೇಷ್ಮೆ ಘಟಕವನ್ನು ಮುಚ್ಚದಿರುವ ಹಾಗೂ ರೇಷ್ಮೆ ಉದ್ಯಮಕ್ಕೆ ಉತ್ತೇಜನ ನೀಡುವ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೮ (೧೬೫೨) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ (KSIC) ಮೈಸೂರಿನ ಟಿ.ನರಸೀಪುರದಲ್ಲಿರುವ ಘಟಕವನ್ನು ಮುಚ್ಚಲು ಮತ್ತು ಆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಉದ್ದೇಶಿಸಿರುವುದು ನಿಜವೇ ;

(ಆ) ಸರ್ಕಾರ ಉದ್ದೇಶಿಸಿರುವುದು ನಿಜವೇ ; ಒಂದು ವೇಳೆ ಹೌದಾದಲ್ಲ, ಲಾಭದಾಯಕವಾಗಿ ನಡೆಯುತ್ತಿರುವ/ನಡೆಯಬಹುದಾದ ರೇಷ್ಮೆ ಘಟಕವನ್ನು ಮುಚ್ಚುವ ಅನಿವಾರ್ಯತೆ ಏನಿದೆ ; ಈ ಬಗ್ಗೆ ಸರ್ಕಾರ ನಡೆಸಿದ ಅಧ್ಯಯನದ ವರದಿ ಏನು ;

(ಇ) ಈ ರೇಷ್ಮೆ ಘಟಕವನ್ನು ನಂಬಿಕೊಂಡಿರುವ ನೂರಾರು ನೇಕಾರರು, ಕಾರ್ಮಿಕರು ಮತ್ತು ಸ್ಥಳೀಯ ರೇಷ್ಮೆ ಬೆಳೆಗಾರರ ಬದುಕಿಗೆ ಈ ನಿರ್ಧಾರದಿಂದ ಆಗುವ ಪೆಟ್ಟನ್ನು ಸರ್ಕಾರ ಗಮನಿಸಿದೆಯೇ ; ಅವರ ಬದುಕಿಗೆ ಪರ್ಯಾಯ ಮಾರ್ಗಗಳೇನು ;

(ಈ) ಕ್ರೀಡಾಂಗಣಕ್ಕೆ ಬೇರೆ ಪರ್ಯಾಯ ಸರ್ಕಾರಿ ಭೂಮಿ ಲಭ್ಯವಿದ್ದರೂ ಸಹ, ಐತಿಹಾಸಿಕ ರೇಷ್ಮೆ ಉದ್ದಿಮೆಯ ಅಸ್ತಿತ್ವವನ್ನು ಅಳಿಸಿ ಕ್ರೀಡಾಂಗಣ ನಿರ್ಮಿಸುವುದು ಎಷ್ಟು ಸಮಂಜಸ ; ಈ ನಿರ್ಧಾರವನ್ನು ಕೈಬಿಡುವ ಉದ್ದೇಶ ಸರ್ಕಾರಕ್ಕಿದೆಯೇ ;

(ಉ) ಮೈಸೂರಿನ ರೇಷ್ಮೆ ಸೀರೆಗಳಿಗೆ ಬಹಳ ಬೇಡಿಕೆ ಇರುವುದರಿಂದ ಇನ್ನೂ ೫–೬ ಘಟಕಗಳನ್ನು ಕನಕಪುರ, ರಾಮನಗರ, ಮಂಡ್ಯ ಹಾಗೂ ದೊಡ್ಡಬಳ್ಳಾಪುರದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ? ಯಾವ ಕ್ರಮ ಕೈಗೊಂಡಿದೆ ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಅನರ್ಹ ಭೂಮಂಜೂರಾತಿ ರದ್ದುಗೊಳಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೪೯ (೧೬೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಾರಿಯಲ್ಲಿರುವ ಭೂಮಂಜೂರು ನಿಯಮಗಳು ಯಾವುವು ; ಇಲ್ಲಿಯವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಭೂಮಂಜೂರಾತಿಗೆ ಸಲ್ಲಿಕೆಯಾದ ಸಾರ್ವಜನಿಕ ಉದ್ದೇಶದ ಮತ್ತು ವೈಯಕ್ತಿಕ ಉದ್ದೇಶದ ಅರ್ಜಿಗಳ ಪೈಕಿ ತಾಲ್ಲೂಕುವಾರು ತಿರಸ್ಕೃತ, ಅಂಗೀಕೃತ, ಕ್ರಮಕ್ಕೆ ಬಾಕಿಯಿರುವ ಅರ್ಜಿಗಳ ವಿವರಗಳೇನು ;

(ಆ) ಅನರ್ಹ ಭೂಮಂಜೂರಾತಿಯನ್ನು ಮತ್ತು ಅರ್ಜಿ ತಿರಸ್ಕೃತವಾದ ಸರ್ಕಾರಿ ಭೂಮಿಯನ್ನು ಮರುಸ್ವಾಧೀನಪಡಿಸಿಕೊಳ್ಳಲು ನಿಗಧಿಪಡಿಸಿದ ಕಾಲಮಿತಿಯೆಷ್ಟು ; ಕಾನೂನುಬಾಹಿರ ಭೂಮಂಜೂರಾತಿಗಳನ್ನು ರದ್ದುಪಡಿಸಿ ಭೂಮಿಯನ್ನು ವಾಪಸು ಪಡೆಯಲು ಇಲಾಖೆ ಕೈಗೊಂಡ ಕ್ರಮವೇನು ;

(ಇ) ಕಂದಾಯ ಇಲಾಖೆಯ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ, ನಕಲಿ ದಾಖಲೆ ಸೃಷ್ಟಿ, ಸರ್ಕಾರಿ ಭೂಮಿ ಕಾನೂನುಬಾಹಿರ ಮಂಜೂರು, ಅರಣ್ಯ/ಡೀಮ್ಡ್ ಅರಣ್ಯ ಭೂಮಿಯ ಪರಭಾರೆ ಸೇರಿದಂತೆ ಗಂಭೀರ ಆರೋಪಗಳ ಹಿನ್ನೆಲೆಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ; ಅವುಗಳಲ್ಲಿ ಎಷ್ಟು ಪ್ರಕರಣಗಳು ಎಷ್ಟು ಅವಧಿಯಿಂದ ಇಲಾಖಾ ವಿಚಾರಣೆಯಲ್ಲಿವೆ ; ನಷ್ಟ ಉಂಟು ಮಾಡಿದ ಅಧಿಕಾರಿಗಳಿಂದ ಆರ್ಥಿಕ ಹೊಣೆಗಾರಿಕೆ ನಿಗದಿ ಮಾಡಿ ವಸೂಲಿ ಮಾಡುವ ಬಗ್ಗೆ ಸರ್ಕಾರದ ಕ್ರಮಗಳೇನು ;

(ಈ) ರಾಜ್ಯದಲ್ಲಿ ಸರ್ಕಾರಿ ಭೂಮಿಗಳ ರಕ್ಷಣೆಯ ಜವಾಬ್ದಾರಿಯಾರದ್ದು ; ತಳ ಹಂತದ ಅಧಿಕಾರಿಗಳಿಗೆ ತರಬೇತಿ ಮತ್ತು ಗ್ರಾಮ ಆಡಳಿತ ಅಧಿಕಾರಿ ಎಷ್ಟು ಅವಧಿಗೊಮ್ಮೆ ಗ್ರಾಮದ ಸರ್ಕಾರಿ ಭೂಮಿಯನ್ನು ನಿಯಮಾನುಸಾರ ಸ್ಥಿತಿಗತಿಯನ್ನು ವರದಿಮಾಡಬೇಕಿದೆ ;

(ಉ) ರಾಜ್ಯದ ಕಂದಾಯ ಗ್ರಾಮಗಳಲ್ಲಿ ಸರ್ಕಾರಿ ಭೂಮಿಗಳ ಸ್ಥಿತಿಗತಿಯನ್ನು ಇಂದೀಕರಿಸಲಾಗಿದೆಯೇ ; ತಂತ್ರಜ್ಞಾನಗಳಾದ ಸರ್ವೆ, ಜಿಐಎಸ್ ಮ್ಯಾಪಿಂಗ್ ಇತ್ಯಾದಿ ಬಳಸಿ ಭೂಬದಲಾವಣೆಗಳನ್ನು ಗಮನಿಸಿ ನಿಯಮಿತವಾಗಿ ಮೇಲ್ವಿಚಾರಣೆ ಮಾಡುವ ವ್ಯವಸ್ಥೆ ಇದೆಯೇ ; ಅನಧಿಕೃತ ಅತಿಕ್ರಮಣ ಮತ್ತು ಕಾನೂನು ತೊಡಕುಗಳನ್ನು ನಿವಾರಿಸುವ ಬಗ್ಗೆ ಸರ್ಕಾರದ ಕಾಲಮಿತಿಯ ನಿರ್ಧಾರಗಳೇನು ?

# ಕರ್ನಾಟಕ ರಾಜ್ಯದಲ್ಲಿ ಸಾರಿಗೆ ನಿಗಮಗಳ ಆದಾಯ–ವೆಚ್ಚ ಕುರಿತು.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೦ (೧೬೭೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಆದಾಯ–ವೆಚ್ಚ ; ಇವುಗಳ ಕಳೆದ ಐದು ವರ್ಷಗಳ ಆದಾಯ–ವೆಚ್ಚದ ವರ್ಷವಾರು ವಿವರವೇನು ; ಪ್ರಯಾಣಿಕರ ಸಂಖ್ಯೆಯಲ್ಲಿ ಎಷ್ಟು ಶೇಕಡಾ ಏರಿಕೆಯಾಗಿದೆ ; ಒಟ್ಟು ಆದಾಯ ಮತ್ತು ವೆಚ್ಚದಲ್ಲಿ ಎಷ್ಟು ಹೆಚ್ಚಳವಾಗಿದೆ ;

(ಆ) ಪ್ರತಿ ನಿಗಮದಲ್ಲಿ ಒಂದು ಬಸ್‌ನ ಮಾಸಿಕ ಸರಾಸರಿ ಆದಾಯ ಮತ್ತು ವೆಚ್ಚದ ವಿವರವೇನು ; ಎಕ್ಸ್‌ಪ್ರೆಸ್ ಬಸ್‌ಗಳಿಗೆ ಸಾಮಾನ್ಯ (ನಗರ/ಗ್ರಾಮೀಣ), ಪ್ರತಿ ಕಿ.ಮೀಗೆ ಸರಾಸರಿ ಆದಾಯ ಮತ್ತು ಸರಾಸರಿ ವೆಚ್ಚ ಎಷ್ಟು ;

(ಇ) ನಾಲ್ಕು ನಿಗಮಗಳಲ್ಲಿ ಲಾಭದಲ್ಲಿರುವ ವಿಭಾಗಗಳು ಯಾವುವು ; ನಷ್ಟದಲ್ಲಿರುವ ವಿಭಾಗಗಳನ್ನು ಸುಧಾರಿಸಲು ಕೈಗೊಂಡ ಕ್ರಮಗಳೇನು ; ಡೀಸೆಲ್ ಬೆಲೆ, ಸಿಬ್ಬಂದಿ ವೇತನ, ಬಸ್ ನಿರ್ವಹಣಾ ವೆಚ್ಚ ಹಾಗೂ ಸಾಲದ ಬಡ್ಡಿದರ ಏರಿಕೆಯಿಂದ ಉಂಟಾಗಿರುವ ಹೆಚ್ಚುವರಿ ಭಾರ ಎಷ್ಟು ;

(ಈ) ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ ಅವಧಿ ಮೀರಿದ ಸಾರಿಗೆ ವಾಹನಗಳನ್ನು ಹೇಗೆ ವಿಲೇವಾರಿ ಮಾಡಲಾಗುತ್ತಿದೆ ; ಕಳೆದ ಮೂರು ವರ್ಷಗಳಲ್ಲಿ ಹಳೆ ಬಸ್ ಸಹಿತ ಎಲ್ಲಾ ನಿರುಪಯುಕ್ತ ಸ್ಕ್ರಾಪ್ ಹರಾಜು ನಿಂದ ವಸೂಲಿಯಾದ ಮೊತ್ತವೆಷ್ಟು ; ಕಳೆದ ಮೂರು ವರ್ಷಗಳಲ್ಲಿ ಹಳೆ ಸಾರಿಗೆ ಬಸ್‌ಗಳಿಗೆ ಹರಾಜು ಪ್ರಕ್ರಿಯೆಯಲ್ಲಿ ನಿಗದಿಪಡಿಸಿದ ಕನಿಷ್ಟ ಮೌಲ್ಯವೆಷ್ಟು ;

(ಉ) ರಾಜ್ಯದಲ್ಲಿ ಇನ್ನೂ ಸುಮಾರು ೧,೭೦೦ಕ್ಕೂ ಹೆಚ್ಚು ಗ್ರಾಮಗಳಿಗೆ ಸಮರ್ಪಕ ಬಸ್ ಸೌಲಭ್ಯವಿಲ್ಲದಿರಲು ಕಾರಣವೇನು ; ಈ ಗ್ರಾಮಗಳಿಗೆ ಸಾರಿಗೆ ಸೇವೆ ಒದಗಿಸಲು ಕೈಗೊಂಡ ಕ್ರಮವೇನು ;

(ಊ) ಅವಕಾಶವಿರುವ ಪ್ರದೇಶಗಳಲ್ಲಿ ಸಾರಿಗೆ ಬಸ್ ಸೇವೆಯನ್ನು ಹೊಸ ಪರವಾನಿಗೆಯೊಂದಿಗೆ ವಿಸ್ತರಿಸುವ ಮತ್ತು ಸುಧಾರಿಸುವ ಮೂಲಕ ಆರ್ಥಿಕ ಸ್ಥಿತಿ ತರ್ಕಬದ್ಧಗೊಳಿಸುವ ಬಗ್ಗೆ ಸರ್ಕಾರ ದೀರ್ಘಕಾಲೀನ ಯೋಜನೆಗಳೇನು ?

## ರಾಜ್ಯದ ರಸ್ತೆ ಮತ್ತು ಸೇತುವೆಗಳ ನಿರ್ವಹಣೆ, ಅನುದಾನ ಮತ್ತು ರಸ್ತೆ ಸುರಕ್ಷತಾ ಕ್ರಮಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೧ (೧೬೭೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಇರುವ ರಸ್ತೆಗಳಿಗೆ ವಾರ್ಷಿಕವಾಗಿ ಎಷ್ಟು ನಿರ್ವಹಣಾ ಅನುದಾನ ನಿಗದಿಪಡಿಸಲಾಗುತ್ತದೆ ; ಕಳೆದ ಮೂರು ವರ್ಷಗಳ ಅನುದಾನ ಹಾಗೂ ವೆಚ್ಚದ ವಿವರವೇನು: ನಿರ್ವಹಣೆ ಯಾವ ಮಾನದಂಡಗಳ ಆಧಾರದ ಮೇಲೆ ಕೈಗೊಳ್ಳಲಾಗುತ್ತದೆ ;

(ಆ) ರಾಜ್ಯದಲ್ಲಿ ಪ್ರಸ್ತುತ ಎಷ್ಟು ಹೊಸ ಸೇತುವೆ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿವೆ ; ಎಷ್ಟು ಸೇತುವೆಗಳು "ಅಪಾಯಕಾರಿ" ಎಂದು ಗುರುತಿಸಲ್ಪಟ್ಟಿವೆ ; ರಸ್ತೆ ಅಥವಾ ಸೇತುವೆಯನ್ನು ಅಪಾಯಕಾರಿ ಎಂದು ಪರಿಗಣಿಸುವ ಮಾನದಂಡಗಳು ಯಾವುವು ; ಅವುಗಳ ದುರಸ್ತಿ/ಪುನರ್ ನಿರ್ಮಾಣಕ್ಕೆ ಕೈಗೊಂಡ ಕ್ರಮವೇನು ; (ಜಿಲ್ಲಾವಾರು ವಿವರ ನೀಡುವುದು)

(ಇ) ಸೇತುವೆ ನಿರ್ಮಾಣ ಅಥವಾ ರಸ್ತೆ ದುರಸ್ತಿ ಸಂದರ್ಭದಲ್ಲಿ ಪರ್ಯಾಯ ರಸ್ತೆ (Diversion Road) ಒದಗಿಸುವ ಬಗ್ಗೆ ಗರಿಷ್ಠ ಅವಧಿ ಎಷ್ಟು ನಿಗದಿಪಡಿಸಲಾಗಿದೆ; ಹತ್ತಿರದ ಪರ್ಯಾಯ ರಸ್ತೆಯಿಲ್ಲದ ಕಡೆ ಗರಿಷ್ಟ ೨ ವರ್ಷಗಳವರೆಗೆ ಸಂಚಾರ ನಿಷೇಧಿಸಿ ಆದೇಶ ಮಾಡಲು ಅವಕಾಶವಿದೆಯೇ ;

(ಈ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ವೇಳೆ ಡಿಪಿಆರ್ ತಯಾರಿಸುವಾಗ ಎಲ್ಲೆಲ್ಲಿ ಮೇಲ್ಸೇತುವೆಗಳು, ಅಂಡರ್‌ಪಾಸ್‌ಗಳು. ಕ್ರಾಸಿಂಗ್‌ಗಳು, ಸರ್ವಿಸ್ ರಸ್ತೆಗಳು ಒಳಗೊಂಡಿರುತ್ತವೆ ಎಂಬ ಮಾಹಿತಿಯನ್ನು ಸಾರ್ವಜನಿಕವಾಗಿ ಪ್ರಕಟಿಸಲಾಗುತ್ತದೆಯೇ ; ಈ ಕುರಿತಂತೆ ಮಂಗಳೂರು–ಮೂಡಬಿದ್ರೆ–ಕಾರ್ಕಳ ಮತ್ತು ಮಂಗಳೂರು–ಕಾರವಾರ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಮೂಲ ಮತ್ತು ಪರಿಷ್ಕೃತ ಡಿಪಿಆರ್ ಮಾಹಿತಿಗಳೇನು ;

(ಉ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಸ್ತೆ ಬದಿಯ ಅಂಚು ನಿರ್ವಹಣೆ, ಅಪಾಯಕಾರಿ ಮರ/ಕಟ್ಟಡಗಳ ತೆರವು, ರಸ್ತೆ ಉಬ್ಬುಗಳ ನಿರ್ವಹಣೆಯುನ್ನು ಯಾವ ಆಧ್ಯತೆಯು ಮೇರೆಗೆ ನಿರ್ವಹಿಸಲಾಗುತ್ತಿದೆ ; ಇವುಗಳನ್ನು ರಸ್ತೆ ನಿಯಮಾವಳಿ/ಐಆರ್‌ಸಿ (IRC) ಮಾನದಂಡಗಳಂತೆ ನಿರ್ವಹಿಸಿದ ವಿವರಗಳೇನು ? ಹಾಕಿಕೊಂಡಿರುವ ಕಾರ್ಯಕ್ರಮಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿ ವಿವಿಧ ರೀತಿಯ ಪೋಡಿ ಕಾರ್ಯಕ್ರಮದ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೫೨ (೧೬೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಒಟ್ಟು ಎಷ್ಟು ಪೋಡಿ ಅರ್ಜಿಗಳು ಬಾಕಿ ಇವೆ: ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬಾಕಿ ಇರುವ ಅರ್ಜಿಗಳ

ಸಂಖ್ಯೆ ಎಷ್ಟು ; ಭೂಮಾಪನ ಹಾಗೂ ಪೋಡಿ ಕಾರ್ಯಕ್ಕಾಗಿ ಕಂದಾಯ ಇಲಾಖೆಯಲ್ಲಿ ಪ್ರತ್ಯೇಕ ಭೂಮಾಪಕರ ತಂಡವಿದೆಯೇ ; ರಾಜ್ಯದಲ್ಲಿ ಸರ್ಕಾರದ ಭೂಮಾಪಕರ ಕೊರತೆ ಪೋಡಿ ಕಾರ್ಯಕ್ರಮದ ವಿಳಂಬಕ್ಕೆ ಕಾರಣವಾಗಿದೆಯೇ ;

(ಆ) ಖಾಸಗಿ ಭೂಮಾಪಕರಿಂದ ಪೋಡಿ ಕಾರ್ಯದಲ್ಲಿ ವಿಳಂಬ ಹಾಗೂ ರೈತರಿಂದ ಜಮೀನು ಮೌಲ್ಯದ ಶೇಕಡಾವಾರು ಹಣ ವಸೂಲಿ ಮಾಡುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದುವರೆಗೆ ಬಂದ ದೂರುಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ ;

(ಇ) ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಒಟ್ಟು ಎಷ್ಟು ಮಂಜೂರಿದಾರರನ್ನು ಅಳತೆಗೆ ಸ್ವೀಕರಿಸಲಾಗಿದೆ ; ಯೋಜನೆಯ ನಿರೀಕ್ಷಿತ ಗುರಿ ಮತ್ತು ಸಾಧನೆ ಶೇಕಡಾವಾರು ಎಷ್ಟು ; ಅರ್ಜಿ ಸಲ್ಲಿಕೆಯಿಂದ ಇತ್ಯರ್ಥದವರೆಗೆ ಗರಿಷ್ಠ ಸಮಯ ಮಿತಿ (Time Limit) ನಿಗದಿ ಮಾಡಲಾಗಿದೆಯೇ ; ಇಲ್ಲದಿದ್ದರೆ, ಟೈಂ-ಬೌಂಡ್ ವ್ಯವಸ್ಥೆ ಜಾರಿಗೊಳಿಸುವ ಬಗ್ಗೆ ಸರ್ಕಾರದ ನಿರ್ಧಾರವೇನು ;

(ಈ) ಪೋಡಿ ವಿಳಂಬದಿಂದ ರೈತರಿಗೆ ಜಮೀನು ಮಾರಾಟ, ಸಾಲ, ಸಹಾಯಧನ, ಭೂ ಪರಿವರ್ತನೆ ಸೇರಿದಂತೆ ಇತರ ಸೇವೆಗಳು ಲಭ್ಯವಾಗದಿರುವುದನ್ನು ಸರ್ಕಾರ ಒಪ್ಪುತ್ತದೆಯೇ ; ಮೂಲ ಭೂ ದಾಖಲೆಗಳು ಮತ್ತು ಕಂದಾಯ ದಾಖಲೆಗಳ ವ್ಯತ್ಯಾಸ. ನ್ಯಾಯಾಲಯ ವ್ಯಾಜ್ಯಗಳು ಹಾಗೂ ಗಡಿ ತಕರಾರುಗಳಿಂದ ಉಂಟಾಗುತ್ತಿರುವ ವಿಳಂಬ ನಿವಾರಣೆಗೆ ಸಮಗ್ರ ಕಾರ್ಯಯೋಜನೆ ರೂಪಿಸಲಾಗಿದೆಯೇ ;

(ಉ) ಪೋಡಿ ಕಾರ್ಯವನ್ನು ಸಂಪೂರ್ಣವಾಗಿ ಆನ್‌ಲೈನ್ ನಿಗಾ ವ್ಯವಸ್ಥೆಗೆ ತರಲು ಹಾಗೂ ಅರ್ಜಿದಾರರಿಗೆ ನೈಜ ಸ್ಥಿತಿ ತಿಳಿಯುವ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

# ಬೀದರ್ ಜಿಲ್ಲೆಯಲ್ಲಿನ ವಕ್ಫ್ ಆಸ್ತಿಗಳ ಸಂರಕ್ಷಣೆ, ಆದಾಯ ಮತ್ತು ಡಿಜಿಟಲೀಕರಣ ಕುರಿತು

**ಡಾ॥ ಎಂ.ಜಿ ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೧೪೫೩ (೧೬೮೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ Karnataka State Board of Auqaf ಅಧೀನದಲ್ಲಿ ನೋಂದಾಯಿತವಾಗಿರುವ ಒಟ್ಟು ವಕ್ಫ್ ಆಸ್ತಿಗಳ (ಜಮೀನು, ಕಟ್ಟಡ, ಕಸ್ಥಾನ್ ಇತ್ಯಾದಿ) ಸಂಖ್ಯೆ ಎಷ್ಟು ; ಇವುಗಳಲ್ಲಿ ಪ್ರಸ್ತುತ ಮಂಡಳಿಯ ನೇರ ಸುಪರ್ದಿಯಲ್ಲಿರುವ ಆಸ್ತಿಗಳ ಸಂಖ್ಯೆ ಎಷ್ಟು ; ಉಳಿದವು ಲೀಸ್/ಬಾಡಿಗೆ ಆಧಾರದಲ್ಲಿ ನೀಡಿರುವ ವಿವರವೇನು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಈ ಆಸ್ತಿಗಳಿಂದ ಸಂಗ್ರಹವಾಗಿರುವ ಒಟ್ಟು ವಾರ್ಷಿಕ ಆದಾಯ ಎಷ್ಟು ; ಆದಾಯದ ಮೂಲಗಳನ್ನು (ಬಾಡಿಗೆ, ಲೀಸ್, ಕೃಷಿ ಆದಾಯ. ವಾಣಿಜ್ಯ ಬಳಕೆ ಇತ್ಯಾದಿ) ವರ್ಗೀಕರಿಸಿ ವರ್ಷವಾರು ಮಾಹಿತಿ ನೀಡುವುದು ; ನಿಗದಿತ ಬಾಡಿಗೆ/ಲೀಸ್ ಮೊತ್ತವನ್ನು ಸಂಪೂರ್ಣವಾಗಿ ಸಂಗ್ರಹಿಸಲಾಗುತ್ತಿದೆಯೇ ;

(ಇ) ವಕ್ಫ್ ಆಸ್ತಿಗಳ ದುರುಪಯೋಗ ತಡೆಗಟ್ಟಲು ಮತ್ತು ಪಾರದರ್ಶಕತೆ ಹೆಚ್ಚಿಸಲು 'ಡಿಜಿಟಲ್ ದಾಖಲೆ' (Digital Documentation) ಮತ್ತು WAQMS (Waqf Asset Management System) ಪ್ರಕ್ರಿಯೆ ಪೂರ್ಣಗೊಂಡಿದೆಯೇ ; ಬೀದರ್ ಜಿಲ್ಲೆಯಲ್ಲಿನ ಎಷ್ಟು ಆಸ್ತಿಗಳು ಜಿಯೋಟ್ಯಾಗ್ ಆಗಿವೆ ; ಬಾಕಿ ಉಳಿದಿರುವ ಆಸ್ತಿಗಳ ಡಿಜಿಟಲೀಕರಣ ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಮಿತಿ ಏನು ;

(ಈ) ಬೀದರ್ ಜಿಲ್ಲೆಯಲ್ಲಿ ವಕ್ಫ್ ಆಸ್ತಿಗಳನ್ನು ಅನಧಿಕೃತವಾಗಿ ಬಾಡಿಗೆಗೆ ನೀಡಿರುವುದು ಅಥವಾ ಒತ್ತುವರಿ (Encroachment) ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಅಂತಹ ಪ್ರಕರಣಗಳ ಸಂಖ್ಯೆ ಎಷ್ಟು ; ಅಕ್ರಮ ಒತ್ತುವರಿ ತೆರವುಗೊಳಿಸಲು ಕೈಗೊಂಡಿರುವ ಕಾನೂನು ಕ್ರಮಗಳು ಹಾಗೂ ವಸೂಲಿ ಮಾಡಿದ ದಂಡದ ವಿವರವೇನು ;

(ಉ) ವಕ್ಫ್ ಆಸ್ತಿಗಳಿಂದ ಸಂಗ್ರಹವಾಗುವ ಆದಾಯವನ್ನು ಸಮುದಾಯದ ಶಿಕ್ಷಣ ಆರೋಗ್ಯ ವಿದ್ಯಾರ್ಥಿವೇತನ ಮಸೀದಿ ನಿರ್ವಹಣೆ ಹಾಗೂ ಇತರೆ ಸಾಮಾಜಿಕ ಕಲ್ಯಾಣ ಯೋಜನೆಗಳಿಗ ಎಷ್ಟು ಪ್ರಮಾಣದಲ್ಲಿ ಬಳಸಲಾಗುತ್ತಿದೆ ;

(ಊ) ಕಳೆದ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಈ ನಿಧಿಯಿಂದ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ಅನುದಾನದ ಮೊತ್ತ ಎಷ್ಟು ?

## ಬೀದರ್ ಜಿಲ್ಲೆಯಲ್ಲಿನ ಬೆಳೆ ಹಾನಿ ಪರಿಹಾರ ವಿತರಣೆ ಮತ್ತು ತಾಂತ್ರಿಕ ಪಾರದರ್ಶಕತೆ ಕುರಿತು

**ಡಾ|| ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೪ (೧೬೮೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಅತಿವೃಷ್ಟಿ, ಅನಾವೃಷ್ಟಿ ಅಥವಾ ಅಕಾಲಿಕ ಮಳೆಯಿಂದಾಗಿ ಬೆಳೆ ಹಾನಿಗೊಳಗಾಗಿ ಸರ್ಕಾರದಿಂದ ಪರಿಹಾರ ಪಡೆದ ರೈತರ ಒಟ್ಟು ಸಂಖ್ಯೆ ಎಷ್ಟು ; ಪರಿಹಾರವಾಗಿ ವಿತರಿಸಲಾದ ಒಟ್ಟು ಮೊತ್ತ ಎಷ್ಟು ; (ತಾಲ್ಲೂಕುವಾರು ಹಾಗೂ ವರ್ಷವಾರು ವಿವರ ನೀಡುವುದು)

(ಆ) ರೈತರು ಬೆಳೆ ಹಾನಿ ವರದಿ ಸಲ್ಲಿಸಿದ ದಿನಾಂಕದಿಂದ ಅವರ ಬ್ಯಾಂಕ್ ಖಾತೆಗೆ ಪರಿಹಾರದ ಮೊತ್ತ ಜಮೆಯಾಗಲು ಸರ್ಕಾರ ಸರಾಸರಿಯಾಗಿ ತೆಗೆದುಕೊಳ್ಳುವ ಅವಧಿ ಎಷ್ಟು ದಿನಗಳು ಪರಿಹಾರ ವಿತರಣೆಯಲ್ಲಿ ಉಂಟಾಗುತ್ತಿರುವ ವಿಳಂಬದ ಪ್ರಮುಖ ಕಾರಣಗಳು ಯಾವುವು ; ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಸುಧಾರಣಾತ್ಮಕ ಕ್ರಮಗಳೇನು ;

(ಇ) ಬೀದರ್ ಜಿಲ್ಲೆಯಲ್ಲಿ ಬೆಳೆ ನಷ್ಟದ ಅಂದಾಜು ಮಾಡುವ ವೇಳೆ ಮಾನವ ಹಸ್ತಕ್ಷೇಪ ಕಡಿಮೆ ಮಾಡಿ ನಿಖರತೆ ಕಾಯ್ದುಕೊಳ್ಳಲು ಜಿಯೋ–ಟ್ಯಾಗಿಂಗ್ (Geo-Tagging), ಡ್ರೋನ್ ಸಮೀಕ್ಷೆ ಮತ್ತು ಮೊಬೈಲ್ ಆಧಾರಿತ ಬೆಳೆ ಸಮೀಕ್ಷೆ (Crop Survey) ಅಪ್ಲಿಕೇಶನ್‌ಗಳನ್ನು ಬಳಸಲಾಗುತ್ತಿದೆಯೇ ; ಬಳಸಿದ ಪ್ರಕರಣಗಳ ಸಂಖ್ಯೆ ಎಷ್ಟು ; ಇದರ ಪರಿಣಾಮಕಾರಿತ್ವದ ಮೌಲ್ಯಮಾಪನ ನಡೆಸಲಾಗಿದೆಯೇ ;

(ಈ) ಕಳೆದ ಎರಡು ವರ್ಷಗಳಲ್ಲಿ ತಾಂತ್ರಿಕ ದೋಷಗಳು. ಆಧಾರ್ ಜೋಡಣೆ ಸಮಸ್ಯೆ, ಬ್ಯಾಂಕ್ ಖಾತೆ ವಿವರಗಳ ತೊಂದರೆ ಅಥವಾ ದಾಖಲೆಗಳ ಕೊರತೆಯಿಂದಾಗಿ ಪರಿಹಾರ ಸಿಗದೆ ಬಾಕಿ ಉಳಿದಿರುವ ರೈತರ ಪ್ರಕರಣಗಳ ಸಂಖ್ಯೆ ಎಷ್ಟು ; ಇವುಗಳನ್ನು ಇತ್ಯರ್ಥಪಡಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು ; ವಿಶೇಷ ಪರಿಹಾರ ಶಿಬಿರಗಳನ್ನು ಆಯೋಜಿಸಲಾಗಿದೆಯೇ ;

(ಉ) ರೈತರು ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು FRUITS (Farmer Registration and Unified Beneficiary Information System) ಪೋರ್ಟಲ್ ಅಥವಾ ಇತರೆ ಆನ್‌ಲೈನ್ ವ್ಯವಸ್ಥೆಗಳ ಮೂಲಕ ಬೆಳೆ ಹಾನಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಸಂಪೂರ್ಣವಾಗಿ ಜಾರಿಯಲ್ಲಿದೆಯೇ ; ಗ್ರಾಮೀಣ ಭಾಗದ

ರೈತರಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಲು ಕೈಗೊಂಡಿರುವ ತರಬೇತಿ, ಗ್ರಾಮಸಭೆ ಅಥವಾ ಜಾಗೃತಿ ಅಭಿಯಾನಗಳ ವಿವರವೇನು ?

## ಬೀದರ್ ಜಿಲ್ಲೆಯಲ್ಲಿನ ಸರ್ಕಾರಿ ಕಟ್ಟಡಗಳ ದುರಸ್ತಿ, ಸುರಕ್ಷತೆ ಹಾಗೂ ಪುನರ್ ನಿರ್ಮಾಣ ಕುರಿತು

**ಡಾ॥ ಎಂ.ಜಿ.ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೫ (೧೬೮೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ (PWD) ವ್ಯಾಪ್ತಿಗೆ ಬರುವ ಒಟ್ಟು ಸರ್ಕಾರಿ ಕಟ್ಟಡಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ತುರ್ತು ದುರಸ್ತಿ ಅಗತ್ಯವಿರುವ ಕಟ್ಟಡಗಳ ಸಂಖ್ಯೆ ಎಷ್ಟು ; ಶಿಥಿಲಾವಸ್ಥೆಯಲ್ಲಿರುವ ಹಾಗೂ ಅಪಾಯಕಾರಿಯಾಗಿ ಗುರುತಿಸಲ್ಪಟ್ಟ ಕಟ್ಟಡಗಳ ವಿವರವೇನು ; (ಇಲಾಖೆವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಜಿಲ್ಲೆಯ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ಹಾಗೂ ಇತರೆ ಸಾರ್ವಜನಿಕ ಕಟ್ಟಡಗಳಿಗೆ ಕಳೆದ ಒಂದು ವರ್ಷದಲ್ಲಿ 'ರಚನಾತ್ಮಕ ಸುರಕ್ಷತಾ ಪರಿಶೀಲನೆ' (Structural Safety Audit) ನಡೆಸಲಾಗಿದೆಯೇ ; ಮಳೆಗಾಲದ ಅವಧಿಯಲ್ಲಿ ಮೇಲ್ಛಾವಣಿ ಕುಸಿತ, ಗೋಡೆ ಬಿರುಕು, ನೀರು ಜೋರಾಗಿ ಸೋರುವುದು ಮುಂತಾದ ಅನಾಹುತಗಳನ್ನು ತಪ್ಪಿಸಲು ಕೈಗೊಂಡ ಮುನ್ನೆಚ್ಚರಿಕಾ ಕ್ರಮಗಳ ವಿವರವೇನು ;

(ಇ) ಸರ್ಕಾರಿ ಕಟ್ಟಡಗಳ ವಾರ್ಷಿಕ ನಿರ್ವಹಣೆ ಹಾಗೂ ಸಣ್ಣಪುಟ್ಟ ದುರಸ್ತಿಗಳಿಗಾಗಿ (Maintenance & Repairs) ಕಳೆದ ಮೂರು ವರ್ಷಗಳಲ್ಲಿ ಮೀಸಲಾದ ಒಟ್ಟು ಅನುದಾನ ಎಷ್ಟು ;

ಅದರಲ್ಲಿ ಬಿಡುಗಡೆಯಾದ ಮತ್ತು ವಾಸ್ತವವಾಗಿ ಬಳಸಿದ ಮೊತ್ತ ಎಷ್ಟು ; (ವರ್ಷವಾರು ಮತ್ತು ಇಲಾಖಾವಾರು ವಿವರ ನೀಡುವುದು)

(ಈ) ಬೀದರ್ ಜಿಲ್ಲೆಯಲ್ಲಿ ಸಂಪೂರ್ಣ ಹಾನಿಗೊಳಗಾದ ಅಥವಾ ಅಪಾಯಕಾರಿಯಾಗಿ ಪರಿಣಮಿಸಿರುವ ಹಳೆಯ ಕಟ್ಟಡಗಳನ್ನು ನೆಲಸಮಗೊಳಿಸಿ, ಅದೇ ಸ್ಥಳದಲ್ಲಿ ಹೊಸ ಹಾಗೂ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದ ಮುಂದೆ ವಿಶೇಷ ಪ್ರಸ್ತಾವನೆ ಇದೆಯೇ ; ಇದ್ದಲ್ಲಿ, ಇಂತಹ ಕಟ್ಟಡಗಳ ಸಂಖ್ಯೆ ಎಷ್ಟು ಹಾಗೂ ಯೋಜನೆಗೆ ಅಂದಾಜು ವೆಚ್ಚ ಎಷ್ಟು ;

(ಉ) ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ಹೊಸ ಸರ್ಕಾರಿ ಕಟ್ಟಡಗಳ ಗುಣಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಲು 'ತಾಂತ್ರಿಕ ಮೇಲ್ವಿಚಾರಣೆ ತಂಡ' (Quality Control/Technical Monitoring Team) ಕಾರ್ಯನಿರ್ವಹಿಸುತ್ತಿದೆಯೇ ; ಕಳೆದ ಒಂದು ವರ್ಷದಲ್ಲಿ ಈ ತಂಡ ನೀಡಿದ ವರದಿಗಳ ಆಧಾರದ ಮೇಲೆ ಎಷ್ಟು ಕಾಮಗಾರಿಗಳಿಗೆ ದೋಷ ಸೂಚನೆ ನೀಡಲಾಗಿದೆ ; ಎಷ್ಟು ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಲಾಗಿದೆ ?

## ರಾಜ್ಯದಲ್ಲಿರುವ ಮೀನಿನ ತಳಿಗಳು ಮತ್ತು ಸಬ್ಸಿಡಿಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೬ (೧೫೮೫) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಮೀನಿನ ತಳಿಗಳು ಇವೆ ಮತ್ತು ರಾಜ್ಯದ ಯಾವ ಯಾವ ನದಿಗಳಲ್ಲಿ ಯಾವ ಯಾವ ತಳಿಗಳು ಉತ್ಪತ್ತಿಯಾಗುತ್ತಿವೆ ;

(ಆ) ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯಿಂದ ಮೀನುಗಳ ಸಂತಾನೋತ್ಪತ್ತಿ ಕೈಗೊಳ್ಳಲು ಮೀನುಗಾರಿಕಾ ರೈತರಿಗೆ ನೀಡಲಾದ ಸಹಾಯಧನ ಎಷ್ಟು ; (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

(ಇ) ಸರ್ಕಾರದ ವತಿಯಿಂದ ಮೀನಿನ ಆಹಾರಗಳ ಮೇಲೆ ಸಬ್ಸಿಡಿ ನೀಡಲಾಗುತ್ತಿದೆಯೇ ; ಇದ್ದಲ್ಲಿ, ಎಷ್ಟು ಸಬ್ಸಿಡಿ ನೀಡಲಾಗುತ್ತಿದೆ ಮತ್ತು ಹೊಸದಾಗಿ ಮೀನು ಸಾಕಾಣಿಕೆ ಪ್ರಾರಂಭಿಸುವವರಿಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸಬ್ಸಿಡಿಗಳು ಯಾವುವು ಮತ್ತು ಮಾನದಂಡಗಳೇನು ? (ಮಾಹಿತಿ ನೀಡುವುದು)

## ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೭ (೧೫೮೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಘೋಷಿಸಲಾದ ೨೫೦ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಗಳ (ಪೂರ್ವ ಪ್ರಾಥಮಿಕಯಿಂದ ಪಿ.ಯು.ಸಿ ವರೆಗೆ) ನಿರ್ಮಾಣ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ; ಎಷ್ಟು ಶಾಲೆಗಳನ್ನು ನಿರ್ಮಿಸಲಾಗಿದೆ ಮತ್ತು ಎಷ್ಟು ಬಾಕಿ ಇವೆ ; ಈ ಶಾಲೆಗಳಲ್ಲಿ ಅಗತ್ಯವಿರುವಷ್ಟು ಸಿಬ್ಬಂದಿಗಳು ಲಭ್ಯವಿದ್ದಾರೆಯೇ ;

(ಆ) NIOS-Aligned ಶಿಕ್ಷಣಕ್ಕಾಗಿ ಮದರಸಾಗಳಿಗೆ ಕಂಪ್ಯೂಟರ್‌ಗಳು ಮತ್ತು ಸ್ಮಾರ್ಟ್ ಬೋರ್ಡ್‌ಗಳನ್ನು ಒದಗಿಸುವ ೨೦೨೫ರ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಇ) ೨೦೨೫ನೇ ಸಾಲಿನಲ್ಲಿ ವಿದೇಶಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಯೋಜನೆಯಡಿ ರಾಜ್ಯದಲ್ಲಿ ಎಷ್ಟು ಮಕ್ಕಳು ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದರು ಮತ್ತು ಎಷ್ಟು ಮಕ್ಕಳು ಈ ವಿದ್ಯಾರ್ಥಿವೇತನವನ್ನು ಪಡೆದಿದ್ದಾರೆ ;

(ಈ) ೨೦೨೫ ರಲ್ಲಿ ಘೋಷಿಸಿರುವ ವೃತ್ತಿಪರ ಕೋರ್ಸ್ ಗಳಿಗೆ (ಕೆಇಎ ಪ್ರವೇಶ) ಶೇ.೫೦ ರಷ್ಟು ಶುಲ್ಕ ಮರುಪಾವತಿಯಿಂದ ಎಷ್ಟು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ ? (ಮಾಹಿತಿ ನೀಡುವುದು)

## ಭೂ ದಾಖಲೆಗಳಲ್ಲಿ ನಡೆದಿರುವ ಅನಿಯಮಿತತೆಗಳ ಬಗ್ಗೆ ತೆಗೆದುಕೊಂಡಿರುವ ಕ್ರಮದ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೮ (೧೫೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಭೂ ದಾಖಲೆಯಲ್ಲಿ ನಡೆದಿರುವ ಅನಿಯಮಿತತೆಗಳ ಕುರಿತು ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದರಲ್ಲಿ ಯಾವ ಯಾವ ಅಧಿಕಾರಿಗಳು ಭಾಗಿಯಾಗಿದ್ದಾರೆ ಮತ್ತು ಈ ಅಧಿಕಾರಿಗಳ ವಿರುದ್ಧ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಆ) 2025–26ನೇ ಸಾಲಿನಲ್ಲಿ ಬೆಳಗಾವಿ, ಬೀದರ್, ಕಲಬುರಗಿ ಜಿಲ್ಲೆಗಳಲ್ಲಿ ಭೂ ದಾಖಲೆ, ತಿದ್ದುಪಡಿಗಾಗಿ ಬಾಕಿ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಉತ್ತರ ಕರ್ನಾಟಕಕ್ಕೆ ವಿಶೇಷ ಭೂ ಸರ್ವೆ ಯೋಜನೆ ಘೋಷಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

# ಲೋಕೋಪಯೋಗಿ ಇಲಾಖೆಯ ಟೆಂಡರ್ ಪ್ರಕ್ರಿಯೆ ಮತ್ತು ಪ್ರಗತಿ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೫೯ (೧೫೮೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ಟೆಂಡರ್ ಪ್ರಕ್ರಿಯೆಯಲ್ಲಿ ಹೆಚ್ಚುವರಿ ವೆಚ್ಚ (Cost Escalation) ಎಷ್ಟು ಪ್ರಕರಣಗಳಲ್ಲಿ ಕಂಡುಬಂದಿದೆ ; ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗಳ ವಿಳಂಬದಿಂದ ಸರ್ಕಾರಕ್ಕೆ ಉಂಟಾದ ಹೆಚ್ಚುವರಿ ಭಾರ ಎಷ್ಟು ;

(ಆ) ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಅಧಿಕಾರಿಗಳ ವಿರುದ್ಧ ಸ್ವೀಕೃತವಾಗಿರುವ ಭ್ರಷ್ಟಾಚಾರ ದೂರುಗಳ ಸಂಖ್ಯೆ ಎಷ್ಟು ; ಪ್ರಸ್ತುತ ಸ್ವೀಕೃತವಾಗಿರುವ ದೂರುಗಳ ಸ್ಥಿತಿ ಏನು ; ಎಷ್ಟು ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗಿದೆ ; ಎಷ್ಟು ಪ್ರಕರಣಗಳು ನ್ಯಾಯಾಲಯಗಳಲ್ಲಿ ಇವೆ ;

(ಇ) ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಹಣೆಯ ಪ್ರಗತಿಯ (Work Progress) ಸಾರ್ವಜನಿಕರಿಗೆ ಲಭ್ಯವಾಗುವಂತೆ ಇಲಾಖೆಯ ಯಾವುದಾದರೂ ಡ್ಯಾಸ್‌ಬೋರ್ಡ್ ಇದೆಯೇ ; ಇದ್ದಲ್ಲಿ, ಅದರ ಕುರಿತು ಮಾಹಿತಿ ನೀಡುವುದು ?

# ಸಾರಿಗೆ ಇಲಾಖೆಯ ಬಸ್‌ಗಳು ಮತ್ತು ರಸ್ತೆ ಅಪಘಾತಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆದಿಂದ ಚುನಾಯಿತರಾದವರು) :–**

೧೪೬೦ (೧೫೮೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರತಿನಿತ್ಯ ಸಂಚಾರಿಸುವ ಬಸ್‌ಗಳ ಸಂಖ್ಯೆ ಎಷ್ಟು ; (ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ ಮತ್ತು ನಗರ ಸಾರಿಗೆಗಳು ಪ್ರತ್ಯೇಕ ಮಾಹಿತಿ ನೀಡುವುದು) ಗ್ರಾಮೀಣ ಪ್ರದೇಶಗಳಲ್ಲಿ ಕಡಿತಗೊಂಡ ಬಸ್ ಮಾರ್ಗಗಳ ಸಂಖ್ಯೆ ಎಷ್ಟು ;

(ಆ) ಸಾರಿಗೆ ಇಲಾಖೆ ವತಿಯಿಂದ ೨೦೨೫–೨೬ನೇ ಸಾಲಿನಲ್ಲಿ ಎಷ್ಟು ಹೊಸ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲಾಗಿದೆ ; ಈ ಬಸ್‌ಗಳನ್ನು ಯಾವ ಸಂಸ್ಥೆಯಿಂದ ಎಷ್ಟು ಮೊತ್ತದಲ್ಲಿ ಖರೀದಿಸಲಾಗಿದೆ ; ಸಾರಿಗೆ ಇಲಾಖೆಯ ಸುಪರ್ಧಿಯಲ್ಲಿ ಎಷ್ಟು ವಿದ್ಯುತ್ ಚಾಲಿತ ಬಸ್‌ಗಳು ಇವೆ ಮತ್ತು ಖಾಸಗಿ ಒಡೆತನದ ಬಸ್‌ಗಳು ಎಷ್ಟು ;

(ಇ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಸ್ತೆ ಅಪಘಾತಕ್ಕೆ ಒಳಗಾದ ಬಸ್‌ಗಳ ಸಂಖ್ಯೆ ಎಷ್ಟು ; ಈ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು ಮತ್ತು ಸರ್ಕಾರದಿಂದ ಎಷ್ಟು ಪರಿಹಾರ ನೀಡಲಾಗಿರುತ್ತದೆ ; (ವರ್ಷವಾರು ಮಾಹಿತಿ ನೀಡುವುದು) ಮತ್ತು ಅಪಘಾತಗಳಲ್ಲಿ ಮೃತ ನೌಕರರ ಅವಲಂಭಿತರಿಗೆ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲಾಗಿದೆಯೇ ; ಇದ್ದಲ್ಲಿ ಎಷ್ಟು ಕುಟುಂಬಗಳಿಗೆ ನೌಕರಿ ನೀಡಲಾಗಿದೆ ; (ಮಾಹಿತಿ ನೀಡುವುದು)

(ಈ) ಸಾರಿಗೆ ಇಲಾಖೆಯ ವ್ಯಾಪ್ತಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವ್ಯಾಪ್ತಿಯಲ್ಲಿರುವ ಒಟ್ಟು ಜಮೀನು ಎಷ್ಟು ; ಈ ಜಮೀನಿನಲ್ಲಿ ಎಷ್ಟು ಜಾಗವನ್ನು ಉಪಯೋಗಿಸಿಕೊಳ್ಳಲಾಗಿದೆ ಮತ್ತು ಎಷ್ಟು ಜಾಗ ಅನುಪಯುಕ್ತವಾಗಿ ಉಳಿದುಕೊಂಡಿದೆ ;

(ಉ) ಸದರಿ ಸಂಸ್ಥೆಗಳ ಒಟ್ಟು ಜಮೀನುಗಳಲ್ಲಿ ಎಷ್ಟು ಜಮೀನು ಮೊಕದ್ದಮೆಯಲ್ಲಿದೆ ; ಸದರಿ ಮೊಕದ್ದಮೆಗಳು ಯಾವ ವರ್ಷಗಳಿಂದ ಬಾಕಿ ಇದೆ ಮತ್ತು ಎಷ್ಟು ಪ್ರಕರಣಗಳು ಇತ್ಯರ್ಥಗೊಂಡಿವೆ ? (ಮಾಹಿತಿ ನೀಡುವುದು)

## ಬಾಗಲಕೋಟೆ ಜಿಲ್ಲೆ ರಬಕವಿ ಮಹೀಷವಾಡಗಿ ಸೇತುವೆ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೪೬೧ (೧೯೯೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ರಬಕವಿ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗಿದೆ ; ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಆ) ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ಸದರಿ ಕಾಮಗಾರಿಯು ಕಳೆದ ३–४ ವರ್ಷಗಳಿಂದ ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ಸ್ಥಗಿತಗೊಳಿಸಲಾಗಿದೆ ಮತ್ತು ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಸದರಿ ಕಾಮಗಾರಿಯನ್ನು ಸರ್ಕಾರವು ತ್ವರಿತವಾಗಿ ಪೂರ್ಣಗೊಳಿಸಲು ಇರುವ ಅಡಚಣೆಗಳೇನು ; ಈ ಕುರಿತು ಕೈಗೊಂಡ ಕ್ರಮಗಳೇನು ; ವಿವರ ನೀಡುವುದು ;

(ಈ) ಕಾಮಗಾರಿ ವಿಳಂಬದಿಂದಾಗಿ ಆ ಭಾಗದ ರೈತರಿಗೆ ತೊಂದರೆಯಾಗಿ ಉಪವಾಸ ಸತ್ಯಾಗ್ರಹ, ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಹಾಗಿದ್ದಲ್ಲಿ, ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭಿಸದೇ ಇರಲು ಕಾರಣಗಳೇನು ; ಸೂಕ್ತ ಮಾಹಿತಿಯೊಂದಿಗೆ ವಿವರ ನೀಡುವುದು ;

(ಉ) ಸದರಿ ಮಹೀಷವಾಡಗಿ ಸೇತುವೆ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

# ಸಾರಿಗೆ ಇಲಾಖೆಯ ನೌಕರರ ಸಮಸ್ಯೆಗಳ ಮತ್ತು ಬಾಕಿ ಪಾವತಿಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೪೬೨ (೧೬೯೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಿಗೆ ಸಂಸ್ಥೆಗಳು ಎಷ್ಟು ; ಸದರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ನೌಕರರ ಸಂಖ್ಯೆ ಎಷ್ಟು ; ಸದರಿ ನೌಕರರಿಗೆ ಯಾವ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಲಾಗಿದೆ ; ಯಾವ ನಿಯಮಗಳಡಿ ವೇತನ ಪರಿಷ್ಕರಣೆ ಮಾಡಲಾಗುತ್ತದೆ ; (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಸಾರಿಗೆ ಸಂಸ್ಥೆಗಳಲ್ಲಿ ಸಾರ್ವಜನಿಕರ ಸೇವೆಗಾಗಿ ಲಭ್ಯವಿರುವ ಬಸ್‌ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ಎಷ್ಟು ನೂತನ ಬಸ್‌ಗಳನ್ನು ಯಾವ–ಯಾವ ಸಾರಿಗೆ ಸಂಸ್ಥೆಗಳಿಗೆ ಯಾವ ವರ್ಷದಲ್ಲಿ ನೀಡಲಾಗಿದೆ ;

(ಈ) ೨೦೨೩–೨೪, ೨೦೨೪–೨೫ ಹಾಗೂ ೨೦೨೫–೨೬ನೇ ಸಾಲಿನಲ್ಲಿ ಶಕ್ತಿ ಯೋಜನೆಯಡಿಯಲ್ಲಿ ಸಂಚರಿಸಿದ ಮಹಿಳೆಯರ ಸಂಖ್ಯೆ ಎಷ್ಟು ; ಎಷ್ಟು ಮೊತ್ತದ ಟಿಕೆಟ್ ವಿತ್ತರಿಸಲಾಗಿದೆ ; ವಿತರಿಸಿದ ಟಿಕೆಟ್ ಮೊತ್ತವನ್ನು ರಾಜ್ಯ ಸರ್ಕಾರವು ಸಕಾಲದಲ್ಲಿ ಪಾವತಿಸಿದೆಯೇ ; ಪಾವತಿಸದೇ ಬಾಕಿ ಉಳಿಸಿಕೊಂಡ ಮೊತ್ತ ಎಷ್ಟು ಮತ್ತು ಯಾವ ಕಾಲಮಿತಿಯೊಳಗೆ ಪಾವತಿ ಮಾಡಲಾಗುವುದು ಹಾಗೂ ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ ಯಾವ ಮೂಲದಿಂದ ಸದರಿ ಬಾಕಿ ಮೊತ್ತವನ್ನು ಸರಿಪಡಿಸಲಾಗಿದೆ ಬಾಕಿ ಉಳಿಸಿಕೊಂಡಿರುವುದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆಯಾದಂತಾಗುವುದಲ್ಲವೇ ;

(ಉ) ಸದರಿ ಸಾರಿಗೆ ಸಂಸ್ಥೆಗಳಿಂದ ಫೆಬ್ರವರಿ ೨೦೨೬ರ ಅಂತ್ಯದವರೆಗೆ ಭವಿಷ್ಯ ನಿಧಿ, ನಿವೃತ್ತ ನೌಕರರ ಉಪಧನ, ರಜೆ ನಗದೀಕರಣ, ಸಿಬ್ಬಂದಿಗಳಿಗೆ ಬಾಕಿ, ಇಂಧನ ಖರೀದಿ, ಪೂರೈಕೆದಾರರಿಗೆ ಪಾವತಿಸಿಬೇಕಾದ ಬಾಕಿ ಮೊತ್ತದ ವಿವರಗಳೇನು ;

(ಊ) ಸದರಿ ಬಾಕಿಯನ್ನು ಪಾವತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ಯಾವ ಕಾಲಮಿತಿಯೊಳಗೆ ಬಾಕಿ ಮೊತ್ತವನ್ನು ಪಾವತಿಸಲಾಗುವುದು ; ಬಾಕಿ ಉಳಿಸಿಕೊಳ್ಳಲು ಸ್ಪಷ್ಟ ಕಾರಣಗಳೇನು ಸಂಸ್ಥೆಗಳ ಸಾಲದ ಹೊಣೆಗಾರಿಕೆ ಮೊತ್ತದ ಬಾಕಿ ಪಾವತಿಗಳ ಮಾಹಿತಿಯನ್ನು ನೀಡುವಿರೇ ? (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಗ್ರಾಮಗಳ ಗ್ರಾಮಠಾಣೆ ವಿಸ್ತರಿಸಲು ಇರುವ ಸಮಸ್ಯೆಗಳ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೩ (೧೫೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಗ್ರಾಮಗಳ ಗ್ರಾಮಠಾಣೆಯನ್ನು ವಿಸ್ತರಿಸದಿರಲು ಕಾರಣಗಳೇನು ;

(ಆ) ಗ್ರಾಮಠಾಣೆಗಳಿಗೆ ಹೊಂದಿಕೊಂಡಿರುವ ಸರ್ವೆ ನಂಬರಗಳ ಜಮೀನುಗಳಲ್ಲಿ ಇರುವ ಮನೆಗಳು/ಗ್ರಾಮಗಳನ್ನು ಪರಿಗಣಿಸಿ ಗ್ರಾಮಠಾಣೆ ವಿಸ್ತರಿಸಲು ಇರುವ ಸಮಸ್ಯೆಗಳೇನು ; (ವಿವರವಾಗಿ ಮಾಹಿತಿ ನೀಡುವುದು)

(ಇ) ಗ್ರಾಮದಲ್ಲಿ ನಿರ್ಮಿಸಿರುವ ಮನೆಗಳಿಗೆ ಇ–ಸ್ವತ್ತು ನೀಡುತ್ತಿದ್ದು, ಬಿ–ಖಾತೆಯಿಂದ ಎ–ಖಾತೆ ನೀಡಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಗ್ರಾಮಠಾಣಾ ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರವಾಗಿ ಮಾಹಿತಿ ನೀಡುವುದು)

## ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರಾದ ಮನೆಗಳು ಹಾಗೂ ಮನೆ ನಿರ್ಮಿಸಿಕೊಂಡಿರುವ ಫಲಾನುಭವಿಗಳಿಗೆ ಅನುದಾನ ನೀಡುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೪ (೧೫೯೭) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 2023–24 ರಿಂದ ಇಲ್ಲಿಯವರೆಗೆ ಮತ್ಸ್ಯಾಶ್ರಯ ಯೋಜನೆಯಡಿ ರಾಜ್ಯ ಸರ್ಕಾರವು ನಿಗದಿಪಡಿಸಿರುವ ಗುರಿ ಎಷ್ಟು ; ಜಿಲ್ಲಾವಾರು ಗುರಿಯ ವಿವರಗಳನ್ನು ನೀಡುವುದು ;

(ಆ) ಸದರಿ ಅವಧಿಯಲ್ಲಿ ಬಾಗಲಕೋಟೆ–ವಿಜಯಪುರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ; ಆಯ್ಕೆಯಾದ ಫಲಾನುಭವಿಗಳು ಎಷ್ಟು ; ಇನ್ನೂ ಬಾಕಿ ಇರುವ ಮನೆಗಳು/ಫಲಾನುಭವಿಗಳ ಸಂಖ್ಯೆ ಎಷ್ಟು ; ವಿವಿಧ ಹಂತಗಳಲ್ಲಿ ಆಗಿರುವ ಪ್ರಗತಿ ಎಷ್ಟು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಇ) ಮನೆ ನಿರ್ಮಿಸಿಕೊಂಡ ಅರ್ಹ ಫಲಾನುಭವಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; ಇನ್ನೂ ಬಿಡುಗಡೆಗೆ ಬಾಕಿ ಇರುವ ಅನುದಾನದ ಮೊತ್ತ ಎಷ್ಟು ; ತಾಲ್ಲೂಕುವಾರು ಮಾಹಿತಿ ಒದಗಿಸುವುದು ?

# ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ಪಾಲುದಾರಿಕೆಯೊಂದಿಗೆ ಜಾರಿಯಲ್ಲಿರುವ ಹೆದ್ದಾರಿ ಯೋಜನೆಗಳ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೫ (೧೫೫೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ಪಾಲುದಾರಿಕೆಯೊಂದಿಗೆ ಯಾವ ಯಾವ ಹೆದ್ದಾರಿ ಯೋಜನೆಗಳು ಜಾರಿಯಲ್ಲಿವೆ ; ಈ ಪೈಕಿ ಕಾಮಗಾರಿ ಪ್ರಗತಿಯಲ್ಲಿರುವ ಹಾಗೂ ಕಾಮಗಾರಿ ಆರಂಭಗೊಳ್ಳದಿರುವ ಯೋಜನೆಗಳು ಯಾವುವು; ಜಿಲ್ಲಾವಾರು ಮಾಹಿತಿ ನೀಡುವುದು ;

(ಆ) ಈ ಯೋಜನೆಗಳಿಗೆ ಅಗತ್ಯವಿರುವ ಭೂಮಿ ಎಷ್ಟು ; ಈ ಪೈಕಿ ಸರ್ಕಾರಿ ಮತ್ತು ಖಾಸಗಿ ಭೂಮಿ ಎಷ್ಟು ; ಅಗತ್ಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ; ಯೋಜನೆವಾರು ವಿವರ ನೀಡುವುದು ;

(ಇ) ಭೂಸ್ವಾಧೀನ ಸಮಸ್ಯೆ ಇರುವ ಹೆದ್ದಾರಿ ಯೋಜನೆಗಳು ಯಾವುವು ; ಭೂ ಸ್ವಾಧೀನಕ್ಕೆ ಇರುವ ತೊಡಕುಗಳೇನು ; ಯೋಜನೆವಾರು ವಿವರ ನೀಡುವುದು ; ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಮಾಹಿತಿ ನೀಡುವುದು ;

(ಈ) ಅಗತ್ಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುವ ಎಷ್ಟು ಯೋಜನೆಗಳಿಗೆ ರಾಜ್ಯ ಸರ್ಕಾರ ತನ್ನ ಪಾಲಿನ ಹಣವನ್ನು ನೀಡಿದೆ ; ಈ ಯೋಜನೆಗಳು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳ್ಳದಿರಲು ಕಾರಣಗಳೇನು; ಯೋಜನೆವಾರು ವಿವರ ನೀಡುವುದು ;

(ಉ) ಭೂಸ್ವಾಧೀನ ಸಮಸ್ಯೆಯಿಂದಾಗಿ ಯೋಜನೆಗಳು ಕಾರ್ಯಗತಗೊಳ್ಳಲು ಸಾಧ್ಯವಾಗದಿರುವುದನ್ನು ಸರ್ಕಾರ ಗಮನಿಸಿದೆಯೇ ; ಹಾಗಿದ್ದಲ್ಲಿ, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಇನಾಂ ಜಮೀನುಗಳನ್ನು ರೀ ಗ್ರಾಂಟ್ ಮಾಡಲು ಬಾಕಿ ಇರುವ ಪ್ರಕರಣಗಳ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೬೬ (೧೫೯೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವರ್ಗ–೧ ರಿಂದ ವರ್ಗ–೬ ಇನಾಂ ಜಮೀನುಗಳನ್ನು ರೀ ಗ್ರಾಂಟ್ ಮಾಡಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ;

(ಆ) ಬಾಗಲಕೋಟೆ–ವಿಜಯಪುರ ಜಿಲ್ಲೆಯಲ್ಲಿ ವರ್ಗ–೩ ಮತ್ತು ವರ್ಗ–6a-6b ರಡಿ ಇನಾಂ ಜಮೀನುಗಳು ರೀ ಗ್ರಾಂಟ್‌ಗಾಗಿ ಅರ್ಜಿ ಸಲ್ಲಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ಗ್ರಾಮವಾರು, ತಾಲ್ಲೂಕುವಾರು, ಜಿಲ್ಲಾವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು ;

(ಇ) ಇನಾಂ ಜಮೀನುಗಳಿಗೆ ರೀ ಗ್ರಾಂಟ್ ಮಾಡಲು ದಿನಾಂಕ:೧೫–೧೦–೨೦೨೨ ರಂದು ಅರ್ಜಿ ಸಲ್ಲಿಸಲು ಒಂದು ವರ್ಷ ಕಾಲಾವಧಿ ವಿಸ್ತರಿಸಿ, ಆದೇಶಿಸಿದ್ದು ಪ್ರಸ್ತುತ ಸರ್ಕಾರವು ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡದೇ ಇರುವುದರಿಂದ ಇನಾಂ ಜಮೀನು ಹೊಂದಿರುವ ರೀ ಗ್ರಾಂಟ್ ಮಾಡಿಕೊಳ್ಳದೇ ಇರುವುದರಿಂದ ಅವರ ನೋವು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ರೀ ಗ್ರಾಂಟ್‌ಗಾಗಿ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಕಾಲಾವಕಾಶ ನೀಡಿ ಆದೇಶಿಸುವುದೇ ?

# ಭೂ–ಮಾಪಕರ ಹುದ್ದೆಗಳ ತೀವ್ರ ಕೊರತೆ ಇರುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೬೭ (೧೬೬೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ದೀರ್ಘಕಾಲದಿಂದ ಖಾಯಂ ಭೂ–ಮಾಪಕರ ಅತೀವ ಕೊರತೆಯಿರುವುದರಿಂದ ಸಾರ್ವಜನಿಕರಿಗೆ ಭೂ–ಮಾಪನ ಸಂಬಂಧಿತ ಸೇವೆಗಳನ್ನು ಒದಗಿಸುವಲ್ಲಿ ವಿಪರೀತ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಭೂ–ಮಾಪನ ಇಲಾಖೆಯಲ್ಲಿ ಮಂಜೂರಾಗಿರುವ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಭೂ–ಮಾಪಕರ ಹುದ್ದೆಗಳ ವಿವರಗಳೇನು ; (ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಿಂದ ಖಾಯಂ ಭೂ–ಮಾಪಕರ ಕೊರತೆ ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಹಾಗೂ ಭರ್ತಿ ಮಾಡಿರುವ ಹುದ್ದೆಗಳ ವಿವರಗಳೇನು ;

(ಈ) ರಾಜ್ಯದಲ್ಲಿ ಭೂ–ಮಾಪನ ಇಲಾಖೆಯಲ್ಲಿ ನೋಂದಣಿಯಾಗಿರುವ ಖಾಸಗಿ ಭೂ–ಮಾಪಕರ ಸಂಖ್ಯೆ ಎಷ್ಟು ; ಅವರಲ್ಲಿ ಎಷ್ಟು ಜನ ಖಾಸಗಿ ಭೂ–ಮಾಪಕರನ್ನು ಪ್ರಸ್ತುತ ಭೂ–ಮಾಪನ ಸೇವೆಯಲ್ಲಿ ತೊಡಗಿಸಲಾಗಿದೆ ;

(ಉ) ಸದರಿ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಭೂ–ಮಾಪನ ಇಲಾಖೆಯಲ್ಲಿ ನೋಂದಣಿಯಾಗಿರುವ ಖಾಸಗಿ ಭೂ–ಮಾಪಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಭೂ–ಮಾಪನದ ಕೆಲಸದಲ್ಲಿ ತೊಡಗಿಸಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮ ವಹಿಸುವುದೇ ?

# “ಭೂ ವರಾಹ ಯೋಜನೆ” ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೬೮ (೧೬೬೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಯ ದೇವಾಲಯಗಳ ಆಸ್ತಿಗಳ ಸಂರಕ್ಷಣೆ ಹಾಗೂ ಅವುಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಸಲು ಜಾರಿಗೆ ತಂದಿರುವ “ಭೂ ವರಾಹ” ಯೋಜನೆಗೆ ಅಗತ್ಯವಿರುವ ಅನುದಾನದ ಕೊರತೆಯು ಕಾರಣದಿಂದಾಗಿ ಯಾವುದೇ ಪ್ರಗತಿ ಇದುವರೆಗೆ ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ರಾಜ್ಯದಲ್ಲಿ ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ವಿವಿಧ ವರ್ಗಗಳ ದೇಗುಲಗಳ ಸಂಖ್ಯೆ ಎಷ್ಟು ಮತ್ತು ಯಾವುವು ; (ತಾಲ್ಲೂಕುವಾರು ಪ್ರತ್ಯೇಕ ವಿವರ ನೀಡುವುದು)

(ಇ) “ಭೂ ವರಾಹ ಯೋಜನೆ”ಯನ್ನು ಜಾರಿಗೆ ತಂದ ನಂತರ ಇದುವರೆಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ;

(ಈ) ಆ ಪೈಕಿ ‘ಸಿ’ ಗ್ರೇಡ್‌ನ ಬಹಳಷ್ಟು ದೇವಾಲಯಗಳ ಆಸ್ತಿಗಳು ಒತ್ತುವರಿ ಮತ್ತು ಅತಿಕ್ರಮಣದ ಕಾರಣಗಳಿಂದಾಗಿ ಪರರ ಪಾಲಾಗಿದ್ದು, ಸದರಿ ದೇವಾಲಯಗಳ ಆಸ್ತಿಗಳ ಸಂರಕ್ಷಣೆಗೆ ಸರ್ಕಾರ ಇದುವರೆಗೆ ಅಗತ್ಯ ಅನುದಾನ ಒದಗಿಸದಿರಲು ಕಾರಣಗಳೇನು ;

(ಉ) ಯಾವ ಕಾಲಮಿತಿಯೊಳಗೆ “ಭೂ ವರಾಹ ಯೋಜನೆ” ಅನುಷ್ಠಾನಕ್ಕೆ ತರಲು ಬೇಕಾಗಿರುವ ಪೂರ್ಣ ಮೊತ್ತದ ಅನುದಾನವನ್ನು ಒದಗಿಸಲಾಗುವುದು ; ಆ ಮೂಲಕ ಮುಜರಾಯಿ ಇಲಾಖೆಯ ವ್ಯಾಪ್ತಿಯ ಎಲ್ಲಾ ದೇವಾಲಯಗಳ ಆಸ್ತಿಗಳ ಸಂರಕ್ಷಣೆ ಹಾಗೂ ಅವುಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸಲಾಗುವುದು ?

## ಕರಾವಳಿಯಲ್ಲಿ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೬೯ (೧೬೬೬) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರನ್ನು ಆರ್ಥಿಕವಾಗಿ ಮೇಲೆತ್ತಲು ಸೂಕ್ತ ಹಾಗೂ ಅತ್ಯಂತ ಸಂಘಟಿತ ಮಾರುಕಟ್ಟೆ ಒದಗಿಸಬೇಕಾದ ಅನಿವಾರ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು ;

(ಆ) ಮಂಗಳೂರು ಮೀನುಗಾರಿಕೆ ಬಂದರಿನ ೩ನೇ ಹಂತದ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆಯೇ ; ಒದಗಿಸಿರುವ ಅನುದಾನದ ವಿವರಗಳೇನು ;

(ಇ) ಬಂದರುಗಳ ಆಧುನೀಕರಣ ಹಾಗೂ ಕರಾವಳಿಯಲ್ಲಿ ಮೀನುಗಾರಿಕೆಯ ಸಮಗ್ರ ಅಭಿವೃದ್ಧಿಗಾಗಿ ಬಹು ದೃಷ್ಟಿಕೋನದ ಯೋಜನೆಯನ್ನು ಸರ್ಕಾರ ತ್ವರಿತವಾಗಿ ಕೈಗೊಂಡು ಮೀನುಗಾರಿಕೆಯ ಸಂಪೂರ್ಣ ಅಭಿವೃದಿಗೆ ಅಗತ್ಯ ಕ್ರಮ ವಹಿಸುವುದೇ ? (ವಿವರ ನೀಡುವುದು)

## ಪ್ರತ್ಯೇಕ ಮೀನುಗಾರಿಕೆ ವಿಶ್ವವಿದ್ಯಾಲಯದ ಸ್ಥಾಪನೆ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೦ (೧೬೬೭) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೀನುಗಾರಿಕೆ ಉದ್ಯಮ ಬಲಪಡಿಸಿ ಮೀನುಗಾರರನ್ನು ಸ್ವಾವಲಂಬಿಗಳಾಗಿ ಮಾಡುವ ದೃಷ್ಟಿಯಿಂದ ಪ್ರತ್ಯೇಕ ಮೀನುಗಾರಿಕೆ

ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಬೇಕಾದ ಅನಿವಾರ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಈಗಾಗಲೇ ಕೈಗೊಂಡಿರುವ ಕ್ರಮಗಳೇನು ;

(ಆ) ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರ ಹಿತರಕ್ಷಣೆಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು ಹಾಗೂ ಮೀನುಗಾರರಿಗೆ ಸರ್ಕಾರ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳು ಯಾವುವು ;

(ಇ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯ ಮೀನುಗಾರರಿಗೆ ಸಂಬಂಧಿಸಿದ ಯೋಜನೆ ಮತ್ತು ಸೌಲಭ್ಯಗಳಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನದ ವಿವರಗಳೇನು ;

(ಈ) ಮೀನುಗಾರಿಕೆ ಉದ್ಯಮ ವಿಸ್ತರಿಸಲು ಹಾಲಿ ಪಶುಸಂಗೋಪನೆ ವಿಶ್ವವಿದ್ಯಾಲಯುದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕೆಯನ್ನು ಪ್ರತ್ಯೇಕಗೊಳಿಸಿ ಹೊಸ ವಿಶ್ವವಿದ್ಯಾಲಯವನ್ನು ಯಾವ ಕಾಲಮಿತಿಯೊಳಗೆ ಸ್ಥಾಪನೆ ಮಾಡಲಾಗುವುದು ?

## ಶಾಲಾ ಕಾಲೇಜುಗಳ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೧೪೭೧ (೧೬೨೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಯಾವ–ಯಾವ ವಿಧದ ಎಷ್ಟು ಶಾಲಾ ಕಾಲೇಜುಗಳು ನಡೆಯುತ್ತಿವೆ ; (ಸಂಪೂರ್ಣ ವಿವರ ನೀಡುವುದು)

(ಆ) ಹಾಲಿ ನಡೆಯುತ್ತಿರುವ ಶಾಲಾ–ಕಾಲೇಜುಗಳನ್ನು ಹೊರತುಪಡಿಸಿ, ಎಷ್ಟು ಹೊಸ ಶಾಲಾ ಕಾಲೇಜುಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ; (ವಿವರ ನೀಡುವುದು)

(ಇ) ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಅನುಕೂಲವಾಗುವ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳು ರಚಿತವಾಗಿದೆಯೇ ; ರಚಿಸದಿದ್ದರೆ, ಯಾವ ಕಾಲಮಿತಿಯಲ್ಲಿ ರಚಿಸಲಾಗುವುದು ; (ವಿವರ ನೀಡುವುದು)

(ಈ) ೨೦೨೫–೨೬ನೇ ಸಾಲಿನಲ್ಲಿ ಸದರಿ ಶಾಲಾ ಕಾಲೇಜುಗಳಿಗೆ ವೇತನ, ಕಟ್ಟಡ ನಿರ್ಮಾಣ ಇನ್ನಿತರೆ ಕೆಲಸಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು ? (ವಿವರ ನೀಡುವುದು)

## ಮೀನು ಸಾಕಾಣಿಕೆ ಯೋಜನೆಗಳ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೪೭೨ (೧೬೭೮) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೀನು ಕೃಷಿಕರಿಗೆ ಬಂಡವಾಳದ ಅಗತ್ಯಗಳನ್ನು ಪೂರೈಸಲು ಕಿಸಾನ್ ಕ್ರೈಟ್ ಕಾರ್ಡ್ ಸೌಲಭ್ಯ ಜಾರಿಯಲ್ಲಿ ಇರುತ್ತದೆಯೇ ; ಇದ್ದಲ್ಲಿ, ಅದರ ವಿವರಗಳನ್ನು ನೀಡುವುದು ;

(ಆ) ರಾಜ್ಯ ಸರ್ಕಾರ ಮೀನು ಸಾಕಾಣಿಕೆ ಯೋಜನೆಯ ಅಡಿಯಲ್ಲಿ ಒಳನಾಡು ಮೀನುಗಾರಿಕೆಗೆ, ಕೇಜ್ ಕಲ್ಚರ್ ಮೀನುಗಾರಿಕೆ, ಪಚ್ಚೆಲೆ ಕೃಷಿ ಮೀನುಗಾರಿಕೆ, ಹಿನ್ನೀರಿನ ಸಿಗಡಿ ಕೃಷಿಯ ಬಂಡವಾಳ ಅಗತ್ಯ ಪೂರೈಸಲು ನೀಡುತ್ತಿರುವ ಹಣಕಾಸು ಸೌಲಭ್ಯಗಳು ಯಾವುವು ; ಈ ಯೋಜನೆಗಳನ್ನು ನೀಡಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಎಷ್ಟು ಫಲಾನುಭವಿಗಳು ಇದರ ಪ್ರಯೋಜನ ಪಡೆದುಕೊಂಡಿರುತ್ತಾರೆ ; (ವಿವರಗಳನ್ನು ಒದಗಿಸುವುದು)

(ಇ) ಮೀನುಗಾರಿಕೆ ಇಲಾಖೆ ಕಡಲ ಮೀನುಗಾರಿಕೆಗೆ ನೀಡುತ್ತಿರುವ ಯೋಜನೆಗಳು ಯಾವುವು ; ಹಣಕಾಸು ಸೌಲಭ್ಯಗಳು ಯಾವುವು ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಇದರ ಪ್ರಯೋಜನ ದೊರೆತಿದೆ ಅದರ ವಿವರಗಳನ್ನು ಒದಗಿಸುವುದು ;

(ಈ) ಮೀನು ಕೃಷಿಗೆ ಸಂಬಂಧಿಸಿದಂತೆ ಮೀನುಗಾರಿಕೆ ಇಲಾಖೆಯು ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ ; ಇದಕ್ಕೆ ಪೂರಕವಾಗಿ ನೀಡುತ್ತಿರುವ ಅನುದಾನ ಮತ್ತು ಸಹಾಯಧನಗಳು ಯಾವುವು ; (ವಿವರಗಳನ್ನು ನೀಡುವುದು)

(ಉ) ಮೀನುಗಾರಿಕೆ ಇಲಾಖೆಯು ಮೀನು ಮರಿ ಸಾಕಾಣಿಕೆಗೆ ವಾರ್ಷಿಕವಾಗಿ ಎಷ್ಟು ಹಣವನ್ನು ವೆಚ್ಚ ಮಾಡುತ್ತಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ತುಮಕೂರು ಜಿಲ್ಲಾ ರೇಷ್ಮೆ ಇಲಾಖೆಯ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೪೭೩ (೧೬೭೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ರೇಷ್ಮೆ ಇಲಾಖೆಯ ಅಡಿಯಲ್ಲಿ ಬರುವ ಒಟ್ಟು ಕೃಷಿ ಭೂಮಿ ಸಹಿತವಾಗಿ ಸ್ವತ್ತುಗಳು ಎಷ್ಟು ; ಚಿಕ್ಕನಾಯಕನಹಳ್ಳಿ ತಾಲ್ಲೂಕು ರೇಷ್ಮೆ ಇಲಾಖೆಗೆ ಸೇರಿದ ಸ್ವತ್ತಿನ ಮತ್ತು ಕಟ್ಟಡಗಳ ಪೂರ್ಣ ವಿವರಗಳನ್ನು ಒದಗಿಸುವುದು ;

(ಆ) ತುಮಕೂರು ಜಿಲ್ಲಾ ರೇಷ್ಮೆ ಇಲಾಖೆಯಲ್ಲಿ ಇರುವ ಒಟ್ಟು ಹಿಪ್ಪು ನೇರಳೆ ನಾಟಿ ಪ್ರದೇಶ ವಿಸ್ತೀರ್ಣ ಎಷ್ಟು ; ಜಿಲ್ಲೆಯಲ್ಲಿ ಇರುವ ರೇಷ್ಮೆ ಹುಳು ಸಾಕಾಣಿಕೆ ಕೇಂದ್ರಗಳು ಎಷ್ಟು ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

(ಇ) ತುಮಕೂರು ಜಿಲ್ಲೆ ರೇಷ್ಮೆ ಇಲಾಖೆಯಲ್ಲಿ ಬಾಕಿ ಪ್ರೋತ್ಸಾಹ ಧನ ನೀಡಲಾಗುತ್ತಿದೆಯೇ ; ನೀಡಿದ್ದಲ್ಲಿ, ಕಳೆದ ಮೂರು ವರ್ಷಗಳ ಫಲಾನುಭವಿಗಳ ಹೆಸರು ಸಹಿತವಾಗಿ ವಿವರಗಳನ್ನು ನೀಡುವುದು ;

(ಈ) ತುಮಕೂರು ಜಿಲ್ಲೆ ರೇಷ್ಮೆ ಇಲಾಖೆಯಲ್ಲಿ ಹನಿ ನೀರಾವರಿ ಯೋಜನೆಯ ಅಡಿಯಲ್ಲಿ ವಾರ್ಷಿಕವಾಗಿ ಎಷ್ಟು ಸಹಾಯಧನ ನೀಡಲಾಗುತ್ತಿದೆ ; (ಕಳೆದ ಮೂರು ವರ್ಷಗಳಲ್ಲಿ ಫಲಾನುಭವಿಗಳಿಗೆ ನೀಡಿರುವ ವಿವರಗಳನ್ನು ಹೆಸರು ಸಹಿತವಾಗಿ ತಾಲ್ಲೂಕುವಾರು ಒದಗಿಸುವುದು)

(ಉ) ತುಮಕೂರು ಜಿಲ್ಲೆಯಲ್ಲಿ ವಾರ್ಷಿಕವಾಗಿ ಉತ್ಪಾದನೆ ಆಗುತ್ತಿರುವ ರೇಷ್ಮೆ ಗೂಡುಗಳು ಎಷ್ಟು ; ಇದರಲ್ಲಿ ಶುದ್ಧ ತಳಿಯ ರೇಷ್ಮೆ ಗೂಡು ಹಾಗೂ ಸಂಕಲನ ತಳಿಯ ರೇಷ್ಮೆ ಗೂಡು ಎಷ್ಟು; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು) ಮತ್ತು ತುಮಕೂರು ಜಿಲ್ಲೆಯಲ್ಲಿ ಉತ್ಪಾದನೆಯಾದ ರೇಷ್ಮೆ ಗೂಡುಗಳಿಗೆ ಎಲ್ಲಿ ಮಾರುಕಟ್ಟೆಯನ್ನು ಒದಗಿಸಲಾಗಿರುತ್ತದೆ ; ಸ್ಥಳೀಯ ರೈತರು ತಮ್ಮ ಉತ್ಪಾದೆನಯನ್ನು ವಾರಾಟ ಮಾಡಲು ಯಾವ ಮಾರುಕಟ್ಟೆಗಳಿಗೆ ತಮ್ಮ ಉತ್ಪಾದನೆಯನ್ನು ಒಯ್ಯಬೇಕಾಗಿರುತ್ತದೆ ;

(ಊ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖೆ ಅಡಿಯಲ್ಲಿ ಯಾವ ಯಾವ ಯೋಜನೆಗಳನ್ನು ರೈತರಿಗೆ ನೀಡಲಾಗುತ್ತಿದೆ ;

(ಋ) ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಅನುದಾನಗಳನ್ನು ಮತ್ತು ಸಹಾಯಧನಗಳನ್ನು ರೇಷ್ಮೆ ಇಲಾಖೆ ರೈತರಿಗೆ ನೀಡಿರುತ್ತದೆ ; ಮೂರು ವರ್ಷದ ಫಲಾನುಭವಿಗಳ ಹೆಸರುಗಳ ಸಹಿತವಾಗಿ ವಿವರಗಳನ್ನು ಒದಗಿಸುವುದು ?

## ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೪೭೪ (೧೬೮೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಎಂದಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ ; ಈಗಿರುವ ಅಧ್ಯಕ್ಷರು ಮತ್ತು ಸದಸ್ಯರು ಯಾವಾಗ ನೇಮಕಗೊಂಡಿರುತ್ತಾರೆ ; ಹಿಂದಿನ ಅಧ್ಯಕ್ಷರ ಸಹಿತವಾಗಿ ಇಲ್ಲಿಯವರೆಗೆ ನೇಮಕಗೊಂಡಿರುವ ಅಧ್ಯಕ್ಷರು ಮತ್ತು ಸದಸ್ಯರ ಪೂರ್ಣ ವಿವರಗಳನ್ನು ಒದಗಿಸುವುದು ;

(ಆ) ರೇರಾದಲ್ಲಿ ಇಲ್ಲಿಯವರೆಗೆ ನೋಂದಣಿಯಾಗಿರುವ ರಿಯಲ್ ಎಸ್ಟೇಟ್ ಸಂಘ ಸಂಸ್ಥೆಗಳು ಎಷ್ಟು ; ನೋಂದಣಿ ಆಗದೆ ಇರುವ ರಿಯಲ್ ಎಸ್ಟೇಟ್ ಸಂಘ ಸಂಸ್ಥೆಗಳು ಎಷ್ಟು ; (ವಿವರಗಳನ್ನು ಒದಗಿಸುವುದು)

(ಇ) ನಿಯಮ ಉಲ್ಲಂಘನೆ ಮಾಡಿರುವ ರಿಯಲ್ ಎಸ್ಟೇಟ್ ಸಂಘ ಸಂಸ್ಥೆಗಳಿಂದ ಇಲ್ಲಿಯವರೆಗೆ ರೇರಾ ಎಷ್ಟು ದಂಡ ವಸೂಲಾತಿ ಮಾಡಿರುತ್ತದೆ ಮತ್ತು ಬಾಕಿ ಇರುವ ದಂಡ ವಸೂಲಾತಿ ಎಷ್ಟು; (ವಿವರಗಳನ್ನು ಒದಗಿಸುವುದು)

(ಈ) ರೇರಾದಲ್ಲಿ ಇರುವ ನೌಕರರು ಎಷ್ಟು ; ಇದರಲ್ಲಿ ಖಾಯಂ ಸಿಬ್ಬಂದಿ ಎಷ್ಟು ; ನಿಯೋಜನೆ ಮೇಲೆ ಇರುವವರು ಎಷ್ಟು ; ಗುತ್ತಿಗೆ ಆಧಾರದ ಮೇಲೆ ಅಥವಾ ದಿನಗೂಲಿ ಆಧಾರದ ಮೇಲೆ ಇರುವವರು ಎಷ್ಟು ; (ಪೂರ್ಣ ವಿವರಗಳನ್ನು ಒದಗಿಸುವುದು)

(ಉ) ರೇರಾ ಕಾರ್ಯ ವೈಖರಿಯ ಕುರಿತು ಸರ್ಕಾರಕ್ಕೆ ದೂರುಗಳು ಬಂದಿವೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

# ತುಮಕೂರು ಜಿಲ್ಲೆ, ಮುಜರಾಯಿ ಇಲಾಖೆಯ ದೇವಾಲಯಗಳ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೪೭೫ (೧೬೮೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ದತ್ತಿಗಳ ಇಲಾಖೆಯ ಅಡಿಯಲ್ಲಿ ಇರುವ ಪ್ರವರ್ಗ–ಎ, ಪ್ರವರ್ಗ–ಬಿ ಮತ್ತು ಪ್ರವರ್ಗ–ಸಿ ದೇವಾಲಯಗಳು ಎಷ್ಟು ಮತ್ತು ಇವುಗಳ ವಾರ್ಷಿಕ ಆದಾಯ ಎಷ್ಟು ; ಈ ದೇವಾಲಯಗಳಿಗೆ ಆಡಳಿತ ಮಂಡಳಿಗಳನ್ನು ರಚಿಸಲಾಗಿರುತ್ತದೆಯೇ ; ರಚಿಸಿದ್ದಲ್ಲಿ, ಮೂರು ವರ್ಷದ ವಿವರಗಳನ್ನು ಒದಗಿಸುವುದು ;

(ಆ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆ ಅಡಿಯಲ್ಲಿ ಬರುವ ಪ್ರವರ್ಗ–ಬಿ ಮತ್ತು ಪ್ರವರ್ಗ–ಸಿ ದೇವಾಲಯಗಳು ಎಷ್ಟು ; ಇವುಗಳ ವಾರ್ಷಿಕ ಆದಾಯ ಎಷ್ಟು ; (ಮೂರು ವರ್ಷಗಳ ಮಾಹಿತಿಯನ್ನು ಒದಗಿಸುವುದು) ಇವುಗಳಲ್ಲಿ ಎಷ್ಟು ದೇವಾಲಯಗಳಲ್ಲಿ ಆಡಳಿತ ಮಂಡಳಿ/ಅಭಿವೃದ್ಧಿ ಮಂಡಳಿ ರಚನೆ ಆಗಿರುತ್ತದೆ ; ಬಾಕಿ ಇರುವ ದೇವಾಲಯಗಳು ಎಷ್ಟು; (ವಿವರಗಳನ್ನು ಒದಗಿಸುವುದು)

(ಇ) ಮುಜರಾಯಿ ಇಲಾಖೆಯ ಅಡಿಯಲ್ಲಿ ಬರುವ ಪ್ರವರ್ಗ–ಸಿ ದೇವಾಲಯಗಳ ಆಡಳಿತ ಮಂಡಳಿ/ಅಭಿವೃದ್ಧಿ ಮಂಡಳಿ ರಚಿಸಲು ಈಗಿರುವ ಒಂದು ಲಕ್ಷ ರೂಪಾಯಿಗಳ ಆದಾಯ ಮಿತಿಯನ್ನು ಸಡಿಲಗೊಳಿಸುವ ಉದ್ದೇಶ ಸರ್ಕಾರದ ಮುಂದೆ ಇರುತ್ತದೆಯೇ ; ಇದ್ದಲ್ಲಿ, ಯಾವಾಗ ಇದನ್ನು ಜಾರಿಗೊಳಿಸಲಾಗುವುದು ;

(ಈ) ಸರ್ಕಾರವು ಯಾವುದೇ ಪ್ರವರ್ಗದ ಅಡಿಯಲ್ಲಿ ಬರುವ ದೇವಾಲಯಗಳಿಗೆ ಸ್ಥಳೀಯವಾಗಿ ಸಮಿತಿಗಳನ್ನು ರಚಿಸಲು ಅವಕಾಶ ನೀಡಿದರೆ ಹೆಚ್ಚು ಅಭಿವೃದ್ದಿ ಕಾರ್ಯ ಕೈಗೊಳ್ಳಲು ಮತ್ತು ಸ್ಥಳೀಯವಾಗಿ ಸಂಪನ್ಮೂಲ ಕ್ರೂಢೀಕರಣ ಮಾಡಲು ಅವಕಾಶವಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; ಬಂದಿದ್ದಲ್ಲಿ, ಎಲ್ಲ ಪ್ರವರ್ಗಗಳ ದೇವಾಲಯಗಳಲ್ಲಿ ಅಭಿವೃದ್ಧಿ ಸಮಿತಿಗಳನ್ನು ರಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಉ) ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಪುರಾತನ ಮತ್ತು ಐತಿಹಾಸಿಕ ದೇವಾಲಯಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; ಬಂದಿದ್ದಲ್ಲಿ, ಇವುಗಳ ಪುನರುಜ್ಜೀವನ ಮತ್ತು ಅಭಿವೃದ್ದಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಇಲಾಖೆಯ ವತಿಯಿಂದ ವಿಶೇಷ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆಯೇ ; ಹಮ್ಮಿಕೊಂಡಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು ?

## ಭೂ ದಾಖಲೆಗಳನ್ನು (RTC/ಪಹಣಿ) ಸಮಯಕ್ಕೆ ಸರಿಯಾಗಿ ನವೀಕರಿಸದಿರುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೪೭೬ (೧೫೭೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ದಾಖಲೆಗಳನ್ನು (ಆರ್‌ಟಿಸಿ/ಪಹಣಿ) ಸಮಯಕ್ಕೆ ಸರಿಯಾಗಿ ನವೀಕರಿಸದಿರುವುದರಿಂದ ರೈತರಿಗೆ ಸಾಲ ಮತ್ತು ಬೆಳೆ ವಿಮೆಗಾಗಿ ತೊಂದರೆಯಾಗುವುದಿಲ್ಲವೇ ;

(ಆ) ೧೦–೧೫ ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಇರುವ ಭೂ ಮಾಲೀಕತ್ವದ ವಿವಾದಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ;

(ಇ) ನೋಂದಾಯಿತ ಭೂ ವಹಿವಾಟಿನ ನಂತರವೂ ಎಷ್ಟು ರೈತರು ರೂಪಾಂತರ ನಮೂದುಗಳಿಗಾಗಿ ಕಾಯುತ್ತಿದ್ದಾರೆ ;

(ಈ) ಅತಿಕ್ರಮಣ ಮತ್ತು ನಕಲಿ ದಾಖಲೆಗಳನ್ನು ತಡೆಗಟ್ಟಲು ಎಲ್ಲಾ ಕೃಷಿ ಭೂಮಿಯನ್ನು ಡಿಜಿಟಲ್ ನಕ್ಷೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ?

## ಸರ್ಕಾರಿ ಭೂಮಿ ಅತಿಕ್ರಮಣ ಮಾಡಿರುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೪೭೭ (೧೫೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಎಷ್ಟು ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಲಾಗಿದೆ ಮತ್ತು ಎಷ್ಟು ವಶಪಡಿಸಿಕೊಳ್ಳಲಾಗಿದೆ ;

(ಆ) ಸಣ್ಣ ರೈತರು ತಕ್ಷಣದ ತೆರವು ಎದುರಿಸುತ್ತಿರುವಾಗ, ಪ್ರಬಲ ಅತಿಕ್ರಮಣದಾರರ ವಿರುದ್ಧ ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿರುವುದೇಕೆ ;

(ಇ) ಸಾರ್ವಜನಿಕರಿಗೆ ಲಭ್ಯವಿರುವ ಅತಿಕ್ರಮಣಗೊಂಡ ಗೋಮಾಳ (ಮೇಯಿಸುವಿಕೆ) ಭೂಮಿಗಳ ಜಿಲ್ಲಾವಾರು ಪಟ್ಟಿ ನೀಡುವುದು ?

## ಸ್ವಾಮಿತ್ವ ಯೋಜನೆ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೪೭೮ (೧೭೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮಠಾಣಾ ಎಂದರೆ ಏನು ; ಸದರಿ ಪ್ರದೇಶದ ದಾಖಲೆಗಳನ್ನು ನಿರ್ವಹಿಸುವ ಕಾರ್ಯವನ್ನು ಮಾಡುವವರು ಯಾರು ;

(ಆ) ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಮೂಲ ದಾಖಲೆಗಳು ಎಂದರೆ ಯಾವುವು ; ಯಾವ ಇಲಾಖೆಯು ಸದರಿ ದಾಖಲೆಗಳನ್ನು ನೀಡುವುದು ;

(ಇ) ಗ್ರಾಮಠಾಣಾ ವ್ಯಾಪ್ತಿಯ ಸ್ವತ್ತುಗಳು ಕ್ರಯ, ಅಡಮಾನ ಆಗದೆ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳ ಮಾಲೀಕರು ಇ-ಖಾತಾ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು ಯಾವುವು ; ಗ್ರಾಮಠಾಣಾ ವ್ಯಾಪ್ತಿಯ ಸ್ವತ್ತುಗಳಿಗೆ ಸ್ವಾಮಿತ್ವ ಯೋಜನೆಯಲ್ಲಿ ಆಸ್ತಿ ಕಾರ್ಡ್ ವಿತರಿಸಲು ಇರುವ ಮಾರ್ಗಸೂಚಿಗಳು ಏನು ; (ಪ್ರತಿಯನ್ನು ನೀಡುವುದು)

(ಈ) ಸ್ವಾಮಿತ್ವ ಯೋಜನೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಎಷ್ಟು ಗ್ರಾಮಗಳ ಜನತೆಗೆ ಆಸ್ತಿ ಕಾರ್ಡ್ ವಿತರಿಸಲಾಗಿದೆ ; ವಿತರಿಸದೇ ಇದ್ದಲ್ಲಿ ಕಾರಣಗಳೇನು ;

(ಉ) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಾಮಿತ್ವ ಯೋಜನೆಯ ಜಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಊ) ಯಾವ ಕಾಲಮಿತಿಯಲ್ಲಿ ಆಸ್ತಿ ಕಾರ್ಡ್ ವಿತರಣೆ ಮಾಡಲಾಗುವುದು ?

## ದಾಖಲೆಗಳಲ್ಲಿ ಮಾತ್ರ ಇದ್ದು ವಾಸ್ತವದಲ್ಲಿ ದೇವಸ್ಥಾನಗಳು ಇಲ್ಲದಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೭೬ (೧೫೮೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳು ಯಾವುವು ; ಸದರಿ ದೇವಸ್ಥಾನಗಳಿಂದ ಬರುತ್ತಿರುವ ಆದಾಯ ಎಷ್ಟು ;

ಈ ಆದಾಯ ಯಾವ ಉದ್ದೇಶಕ್ಕೆ ಬಳಕೆ ಆಗುತ್ತಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಹೆಚ್ಚು ಆದಾಯವುಳ್ಳ ದೇವಾಲಯಗಳಿಂದ ಬರುವ ಆದಾಯವನ್ನು ಬೇರೆ ದೇವಸ್ಥಾನಗಳಿಗೆ ಹಂಚಿಕೆ ಮಾಡುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಯಾವ ಯಾವ ದೇವಾಲಯಗಳ ಆದಾಯವನ್ನು ಯಾವ ದೇವಸ್ಥಾನಕ್ಕೆ ಹಂಚಿಕೆ ಮಾಡಲಾಗಿದೆ ; (ಸಮಗ್ರ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಮುಜರಾಯಿ ದೇವಾಲಯಗಳ ಒಟ್ಟು ಆಸ್ತಿ ಎಷ್ಟಿದೆ ; (ಜಿಲ್ಲಾವಾರು ವಿವರವನ್ನು ದೇವಸ್ಥಾನವಾರು ನೀಡುವುದು)

(ಈ) ಟೆನೆಂಟ್ ಆಕ್ಟ್ ಬರುವುದಕ್ಕಿಂತ ಮೊದಲು ರಾಜ್ಯದ ಮುಜರಾಯಿ ದೇವಾಲಯಗಳಿಗಿದ್ದ ಆಸ್ತಿ ಎಷ್ಟು ; ಎಷ್ಟು ಆಸ್ತಿಯನ್ನು ಟೆನೆಂಟ್ ಆಕ್ಟ್ ಮೂಲಕ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಉ) ಕೆಲವೊಂದು ದೇವಾಲಯಗಳು ದಾಖಲೆಗಳಲ್ಲಿ ಮಾತ್ರವಿದ್ದು, ವಾಸ್ತವವಾಗಿ ದೇವಾಲಯಗಳು ಇಲ್ಲದೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ ? (ವಿವರ ಒದಗಿಸುವುದು)

## ಪಶುಸಂಗೋಪನಾ ಇಲಾಖೆಯಿಂದ ನಡೆಯುತ್ತಿರುವ ಮೊಬೈಲ್ ವೆಟರಿನರಿ ಯೂನಿಟ್‌ಗಳ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೦ (೧೫೮೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಮೊಬೈಲ್ ವೆಟರಿನರಿ ಯೂನಿಟ್‌ಗಳು ಕಾರ್ಯನಿರ್ವಹಿಸುತ್ತಿವೆ ; (ವಾಹನ ಸಂಖ್ಯೆ, ವಾಹನದ ಚಾರ್ಸಿ ಸಂಖ್ಯೆಯೊಂದಿಗೆ ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಮೊಬೈಲ್ ವೆಟರಿನರಿ ಯೂನಿಟ್‌ಗಳಿಗೆ ನೇಮಕಗೊಂಡ ವಾಹನ ಚಾಲಕರ ಹೆಸರು ಮೊಬೈಲ್ ನಂಬರ್, ಗುರುತಿನ ಚೀಟಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಕಳೆದ ೨ ವರ್ಷದಿಂದ ಪಶುಸಂಗೋಪನಾ ಇಲಾಖೆವತಿಯಿಂದ ಎಷ್ಟು ಪ್ರಾಣಿಗಳನ್ನು ಈ ಮೊಬೈಲ್ ವೆಟರಿನರಿ ಯೂನಿಟ್ ವಾಹನದಲ್ಲಿ ಚಿಕಿತ್ಸೆಗಾಗಿ ಸಾಗಿಸಲಾಗಿದೆ ; ಯಾವ ಯಾವ ಪ್ರಾಣಿಗಳನ್ನು ಸಾಗಿಸಲಾಗಿದೆ ; ಸದರಿ ಪ್ರಾಣಿಗಳ ಮಾಲೀಕರ ಹೆಸರು ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು ;

(ಈ) ಈ ಮೊಬೈಲ್ ವೆಟರಿನರಿ ಯೂನಿಟ್‌ಗಳಲ್ಲಿ ಪಶು ವೈದ್ಯರು ಸೇರಿದಂತೆ ಯಾವ ಯಾವ ಹುದ್ದೆಯ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಮೊಬೈಲ್ ವೆಟರಿನರಿ ಯೂನಿಟ್‌ಗಳ ನಿರ್ವಹಣೆಯ ಟೆಂಡರ್ ಯಾವ ಸಂಸ್ಥೆಗೆ ನೀಡಲಾಗಿದೆ ; ಕಳೆದ ೩ ವರ್ಷದಿಂದ ಈ ಯೂನಿಟ್ ನಿರ್ವಹಣೆಗೆ ಎಷ್ಟು ಮೊತ್ತ ವೆಚ್ಚವಾಗಿದೆ ; ಸದರಿ ಮೊತ್ತವನ್ನು ಟೆಂಡರ್ ಪಡೆದಿರುವ ಯಾವ ಸಂಸ್ಥೆಯ ಹೆಸರಿನಲ್ಲಿ ನೀಡಲಾಗಿದೆ ; (ವರ್ಷವಾರು, ಆಂಬ್ಯುಲೆನ್ಸ್‌ವಾರು, ಜಿಲ್ಲಾವಾರು ವಿವರ ನೀಡುವುದು)

(ಊ) ಕಳೆದ ೨ ವರ್ಷದಲ್ಲಿ ಮೊಬೈಲ್ ವೆಟರಿನರಿ ಯೂನಿಟ್‌ನಲ್ಲಿ ಬಳಸಿರುವ ಪ್ಯಾರವೆಟ್‌ಗಳು, ಔಷಧಿಗಳು ಮತ್ತು ಬಳಕೆ ಪದಾರ್ಥಗಳು ಹಾಗೂ ಎಲ್ಲಾ ತುರ್ತು ಸೇವೆಯ ಪ್ರಾಣಿಗಳ ನೋಂದಣಿ ಸಂಖ್ಯೆ ಹಾಗೂ ವರದಿಯನ್ನು ಆಯಾಯಾ ವೆಟರಿನರಿ ವೈದ್ಯರ ಪ್ಯಾರವೆಟ್‌ಗಳ ಸಹಿಯೊಂದಿಗೆ ಮಾಹಿತಿ ನೀಡುವುದು ?

# ವಿವಿಧ ವಸತಿ ಯೋಜನೆಯಡಿ ಹಂಚಿಕೆಯಾಗಿರುವ ಮನೆಗಳ ವಿವರ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೧ (೧೫೭೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೯–೨೦೨೩ ರವರೆಗೆ ವಿವಿಧ ವಸತಿ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು ; ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಫಲಾನುಭವಿಗಳಿಗೆ ಹಂಚಿಕೆ ಮಾಡಿರುವ ಮನೆಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ದಿನಾಂಕ: ೦೧.೦೬.೨೦೨೩ ರಿಂದ ೩೧.೧೦.೨೦೨೫ ರವರೆಗೆ ವಿವಿಧ ವಸತಿ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿ ಹೊಂದಲಾಗಿತ್ತು ; ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; ಫಲಾನುಭವಿಗಳಿಗೆ ಹಂಚಿಕೆ ಮಾಡಿರುವ ಮನೆಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಕೇಂದ್ರ ಮತ್ತು ರಾಜ್ಯ ಸರ್ಕಾರ ವಿವಿಧ ವಸತಿ ಯೋಜನೆಯಡಿ ಪ್ರತಿ ಮನೆ ನಿರ್ಮಾಣಕ್ಕೆ ನೀಡುವ ಸಹಾಯಧನದ ಮೊತ್ತ ಎಷ್ಟು ; (ವಸತಿ ಯೋಜನೆವಾರು ವಿವರ ನೀಡುವುದು)

(ಈ) ಮನೆಗಳನ್ನು ನಿರ್ಮಿಸಿರುವ ಗುತ್ತಿಗೆದಾರರಿಗೆ ಸಂದಾಯ ಮಾಡಲು ಬಾಕಿ ಇರುವ ಬಿಲ್ ಮೊತ್ತ ಎಷ್ಟು ; ಕಳೆದ ೨ ವರ್ಷದಿಂದ ಗುತ್ತಿಗೆದಾರರಿಗೆ ಎಷ್ಟು ಬಾಕಿ ಹಣ ಬಿಡುಗಡೆ ಮಾಡಲಾಗಿದೆ ; (ಗುತ್ತಿಗೆದಾರರ ಹೆಸರು ಸಹಿತ ವರ್ಷವಾರು ವಿವರ ನೀಡುವುದು) ಬಾಕಿ ಮೊತ್ತವನ್ನು ಯಾವ ಕಾಲಮಿತಿಯೊಳಗೆ ಬಿಡುಗಡೆ ಮಾಡಲಾಗುವುದು ?

## ಭೂ ಗ್ಯಾರಂಟಿ ಯೋಜನೆಯಡಿ ಹಕ್ಕುಪತ್ರ ನೀಡಿರುವ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೨ (೧೫೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಜಾರಿಗೆ ತಂದಿರುವ ಭೂ ಗ್ಯಾರಂಟಿ ಯೋಜನೆಯನ್ನು ವಿವರಿಸುವುದು ; ಯೋಜನೆಯ ಉದ್ದೇಶವೇನು ;

(ಆ) ಭೂ ಗ್ಯಾರಂಟಿ ಯೋಜನೆಯಡಿ ಈವರೆಗೆ ಎಷ್ಟು ಜನರಿಗೆ ಹಕ್ಕುಪತ್ರ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಒಟ್ಟು ಎಷ್ಟು ಕಂದಾಯ ಗ್ರಾಮಗಳಿವೆ ; ಈ ಕಂದಾಯ ಗ್ರಾಮಗಳಲ್ಲಿರುವ ಜನಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಈ) ಕಂದಾಯ ಗ್ರಾಮಗಳಲ್ಲಿ ವಾಸ ಮಾಡುವವರಿಗೆ ಹಕ್ಕುಪತ್ರ ವಿತರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಈವರೆಗೆ ಎಷ್ಟು ಕಂದಾಯ ಗ್ರಾಮಗಳಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ; ಎಷ್ಟು ಜನರಿಗೆ ಹಕ್ಕುಪತ್ರ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ರಾಜ್ಯದ ಎಲ್ಲಾ ಕಂದಾಯ ಗ್ರಾಮಗಳಲ್ಲಿ ಹಕ್ಕುಪತ್ರ ವಿತರಿಸುವ ಕಾರ್ಯ ಯಾವಾಗ ಪೂರ್ಣಗೊಳ್ಳಲಿದೆ ; ಈ ಕಾರ್ಯ ಪೂರ್ಣಗೊಳಿಸಲು ಸರ್ಕಾರ ನೀಡಿರುವ ಸೂಚನೆ ಏನು ; ಹಾಕಿಕೊಂಡಿರುವ ಕಾರ್ಯಕ್ರಮಗಳೇನು ? (ವಿವರ ನೀಡುವುದು)

## ಮುಜರಾಯಿ ಇಲಾಖೆಯ ಜಮೀನು ಸಾರಿಗೆ ಇಲಾಖೆ ವಶಕ್ಕೆ ನೀಡುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೩ (೧೬೧೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರಿಗೆ ಇಲಾಖೆಯು ಇದುವರೆಗೆ ಮುಜರಾಯಿ ಇಲಾಖೆಯ ಎಷ್ಟು ಎಕರೆ ಜಮೀನನ್ನು ತನ್ನ ವಶಕ್ಕೆ ಉಚಿತವಾಗಿ ಪಡೆದುಕೊಂಡಿದೆ ; (ವಿವರ ನೀಡುವುದು)

(ಆ) ದೇವನಹಳ್ಳಿಯಲ್ಲಿನ ಸರ್ವೆ ನಂ ೩೦೬ರ ೫.೨೫ ಎಕರೆ ಭೂಮಿಯು ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಜಾಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದ ನಿಲುವೇನು ;

(ಇ) ದೇವಸ್ಥಾನದ ಜಮೀನು ಮತ್ತು ತೋಪು ಸಾರಿಗೆ ಇಲಾಖೆಗೆ ಹಸ್ತಾಂತರಿಸುವ ಕುರಿತು ಕ್ರಮಕೈಗೊಳ್ಳುತ್ತಿರುವುದರಿಂದ ಜನರ ಧಾರ್ಮಿಕ ನಂಬಿಕೆ ಮತ್ತು ಭಾವನೆಗಳ ಧಕ್ಕೆ ಉಂಟಾಗುತ್ತಿರುವ ಬಗ್ಗೆ ಸರ್ಕಾರದ ನಿಲುವೇನು ;

(ಈ) ದೇವಸ್ಥಾನದ ಜಮೀನಿನ ರೀತಿಯಲ್ಲೇ ವಕ್ಫ್ ಬೋರ್ಡ್‌ನ ಭೂಮಿಯನ್ನು ಸಾರಿಗೆ ಇಲಾಖೆ ತನ್ನ ವಶಕ್ಕೆ ಪಡೆಯುವ ಚಿಂತನೆ ನಡೆಸಿದೆಯೇ ; ಇದುವರೆಗೆ ಎಷ್ಟು ಎಕರೆ ವಕ್ಫ್ ಜಮೀನು ಸಾರಿಗೆ ಇಲಾಖೆ ಉಚಿತವಾಗಿ ತನ್ನ ವಶಕ್ಕೆ ಪಡೆದಿದೆ ? (ವಿವರ ನೀಡುವುದು)

## ವಿವಿಧ ವಸತಿಯೋಜನೆಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೪ (೧೬೨೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಯ ಅನ್ವಯ ಎಷ್ಟು ಮನೆಗಳನ್ನು ವಿತರಿಸಲಾಗಿದೆ ಫಲಾನುಭವಿಗಳ ಹೆಸರಿನೊಂದಿಗೆ ಜಿಲ್ಲಾವಾರು ವಿವರ ನೀಡುವುದು ;

(ಆ) ಎಷ್ಟು ಹಿಂದುಗಳಿಗೆ ಅಲ್ಪ ಸಂಖ್ಯಾತರಿಗೆ ಮಹಿಳೆಯರಿಗೆ ತೃತೀಯ ಲಿಂಗಿಗಳಿಗೆ ಮತ್ತು ಅನ್ಯರಾಜ್ಯದವರಿಗೆ ಮನೆಗಳನ್ನು ವಿತರಿಸಲಾಗಿದೆ ;

(ಇ) ವಸತಿ ಯೋಜನೆಗಳಲ್ಲಿ ಯಾವ ರೀತಿಯ ಆರ್ಥಿಕ ರಿಯಾಯಿತಿ ಇದೆ ; ಈ ರೀತಿ ಆರ್ಥಿಕ ರಿಯಾಯಿತಿ ಪಡೆದು ವಸತಿ ಯೋಜನೆಯ ಫಲಾನುಭವಿಗಳಾಗಿರುವವರ ಜಿಲ್ಲಾವಾರು ವಿವರ ನೀಡುವುದು ;

(ಈ) ವಿವಿಧ ವಸತಿ ಯೋಜನೆಗಳಲ್ಲಿ ಮನೆಗಳಿಗೆ ನಿಗದಿಪಡಿಸಿದ ದರವೆಷ್ಟು ; ಸದರಿ ದರವನ್ನು ಯಾವ ಆಧಾರದಲ್ಲಿ ನಿಗದಿಪಡಿಸಲಾಗುತ್ತದೆ ; ಸದರಿ ಯೋಜನೆಗೆ ಎಷ್ಟು ಮೊತ್ತದ ಸಹಾಯಧನ ಎಷ್ಟು ಮೊತ್ತದ ಸಾಲವನ್ನು ಪ್ರತಿಯೊಂದು ಫಲಾನುಭವಿಗೆ ನೀಡಲಾಗುತ್ತದೆ ? (ವಿವರ ನೀಡುವುದು)

## ನೋಂದಣಿ ಶುಲ್ಕ ನಷ್ಟ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೫ (೧೬೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪ ಉಪ ನೋಂದಣಿ ಕಛೇರಿಯಲ್ಲಿ ರೂ. ೨೨,೭೩,೧೬೫/– ನೋಂದಣಿ ಶುಲ್ಕ ಸರ್ಕಾರಕ್ಕೆ ನಷ್ಟ ಮಾಡಿರುವ ಉಪ ನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ; ಅಮಾನತ್ತುಗೊಳಿಸಲಾಗಿದೆಯೇ ; ಇಲ್ಲವಾದ್ದಲ್ಲಿ, ಯಾವಾಗ ಅಮಾನತ್ತುಗೊಳಿಸಲಾಗುವುದು ; (ವಿವರ ನೀಡುವುದು)

(ಆ) ರೂ. ೨೨.೭೩,೧೬೫/– ನೊಂದಣಿ ಶುಲ್ಕವನ್ನು ಸಂಬಂಧಿತ ಉಪ ನೋಂದಣಿ ಅಧಿಕಾರಿಯಿಂದಲೇ ವಸೂಲಿ ಮಾಡಿ

ಸರ್ಕಾರಕ್ಕೆ ಜಮಾ ಮಾಡಲು ಕೈಗೊಂಡ ಕ್ರಮಗಳೇನು ; ಯಾವಾಗ ವಸೂಲಿ ಮಾಡಲಾಗುವುದು ;

(ಇ) ಸಮರ್ಪಕ ತರಬೇತಿ ಪಡೆದಿರದ ಅನರ್ಹ ಉಪ ನೋಂದಣಾಧಿಕಾರಿಯವರನ್ನು ಇತರ ಕರ್ತವ್ಯಗಳಿಗೆ ನಿಯೋಜಿಸದೇ ಸರ್ಕಾರಕ್ಕೆ ನಷ್ಟವಾದರೂ ಅದೇ ಹುದ್ದೆಯಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸುವ ಅನಿವಾರ್ಯತೆ ಸರ್ಕಾರಕ್ಕಿದೆಯೇ ? (ವಿವರ ನೀಡುವುದು)

## ಟೆಂಡರ್‌ನಲ್ಲಿ ಅವ್ಯವಹಾರ ನಡೆದಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೬ (೧೬೨೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) KSHIP ವತಿಯಿಂದ ಹೊಸಕೋಟೆ ಮಾಲೂರು ರಾಜ್ಯ ಹೆದ್ದಾರಿ–೯೫ ಮತ್ತು ೧೬೮ರ ಹೆಚ್ ಎ ಎಂ ಕಾಮಗಾರಿ (ಟೆಂಡರ್ ಸಂಖ್ಯೆ: KSHIP/೨೦೨೪–೨೫/WORK-INDENTS) ಅನ್ನು ಯಾವ ದಿನಾಂಕದಂದು ಟೆಂಡರ್ ಕರೆಯಲಾಗಿತ್ತು ; ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಯಾವುದು ; ಯಾವ ದಿನಾಂಕದಂದು ಟೆಂಡರ್ ಕಾರ್ಯಾದೇಶ ನೀಡಲಾಗಿದೆ ; (ಟೆಂಡರ್‌ನಲ್ಲಿ ಭಾಗವಹಿಸಿದ ಕಂಪನಿ, ಅನರ್ಹಗೊಂಡ ಕಂಪನಿಗಳ ಸಂಪೂರ್ಣ ಹೆಸರಿನೊಂದಿಗೆ ವಿವರ ನೀಡುವುದು)

(ಆ) ಪಶ್ಚಿಮ ಬಂಗಾಳ ಮೂಲದ BVEPL ಸಂಸ್ಥೆಯ ಮೇಲೆ ೧೧/೦೭/೨೦೨೫ ರಂದು ವಂಚನೆಯ ಕುರಿತು ಸಿಬಿಐ ಕೇಸು ದಾಖಲಿಸಿ ಬಳಿಕವೂ ಟೆಂಡರ್ ಪ್ರಕ್ರಿಯೆ ಮುಂದುವರೆಸಲು ಕಾರಣವೇನು ; ಸಿಬಿಐ ಕೇಸು ದಾಖಲಿಸಿದ ಕುರಿತಾದ ಮಾಹಿತಿ

ಸರ್ಕಾರದ ಗಮನಕ್ಕೆ ಬಂದ ದಿನಾಂಕ ಯಾವುದು ; ಯಾವ ರೂಪದಲ್ಲಿ ಗಮನಕ್ಕೆ ಬಂದಿದೆ ; (ವಿವರ ನೀಡುವುದು)

(ಇ) ಆದಾಗ್ಯೂ ಪಶ್ಚಿಮ ಬಂಗಾಳ ಮೂಲದ BVEPL ಸಂಸ್ಥೆಗೆ ಟೆಂಡರ್ ನೀಡಿರುವ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

## MRP ಗಿಂತ ಹೆಚ್ಚಿನ ಬೆಲೆಯಲ್ಲಿ ಆಹಾರೋತ್ಪನ್ನ ಉತ್ತಮ ಮಾರಾಟ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೮೭ (೧೭೦೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಂಪೆಗೌಡ ಬಸ್ಸು ನಿಲ್ದಾಣ ಸೇರಿದಂತೆ ರಾಜ್ಯದ ಹೆಚ್ಚಿನ ಎಲ್ಲಾ ಬಸ್ಸು ನಿಲ್ದಾಣಗಳಲ್ಲಿ ಇರುವ ಆಹಾರೋತ್ಪನ್ನ ಮಳಿಗೆಗಳಲ್ಲಿ ತಿಂಡಿ–ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಅಂತಹ ಮಳಿಗೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಸದರಿ ಮಳಿಗೆಗಳ ಲೈಸೆನ್ಸ್ ರದ್ದುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಕಳೆದ ೨ ವರ್ಷಗಳಲ್ಲಿ ಇಂತಹ ಎಷ್ಟು ಮಳಿಗೆಗಳ ಮೇಲೆ ದಾಳಿ ನಡೆಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಸರ್ಕಾರಿ ಬಸ್ಸು ನಿಲ್ದಾಣಗಳಲ್ಲಿರುವ ಮಳಿಗೆಗಳಲ್ಲಿ ಅವಧಿ ಮುಗಿದ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದು ಈ ಕುರಿತು ಕಳೆದ ೨ ವರ್ಷಗಳಲ್ಲಿ ಎಷ್ಟು ಪ್ರಕರಣಗಳನ್ನು ದಾಖಲಿಸಿದೆ ? (ಜಿಲ್ಲಾವಾರು ವಿವರ ನೀಡುವುದು)

## ಸಾರಿಗೆ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೧೪೮೮ (೧೭೦೫) ಮಾನ್ಯ ಸಾರಿಗೆ ಮತ್ತು ಮಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) K.S.R.T.C ಹಾಗೂ R.T.O ಗಳಲ್ಲಿ ಕಳೆದ ೫ ವರ್ಷದಿಂದ ಎಷ್ಟು ಭ್ರಷ್ಟಾಚಾರದ ಪ್ರಕರಣಗಳು ಬೆಳಕಿಗೆ ಬಂದಿದೆ ;

(ಆ) ಬಂದಿದ್ದಲ್ಲಿ, ಎಷ್ಟು ಕೋಟಿ ರೂಪಾಯಿಗಳು ಭ್ರಷ್ಟಾಚಾರ ನಡೆದಿದೆ ; (ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವವರ ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಇ) ಭ್ರಷ್ಟಾಚಾರ ಎಸಗಿರುವವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ; ಭ್ರಷ್ಟಾಚಾರದ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ಮರಳಿ ಪಡೆಯಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಹಣ ಸಂದಾಯವಾಗಿದೆ ;

(ಈ) ಇದುವರೆಗೂ ಎಷ್ಟು ಅಧಿಕಾರಿ/ಸಿಬ್ಬಂದಿಗಳನ್ನು ಅಮಾನತ್ತು ಮಾಡಲಾಗಿದೆ ; ಎಷ್ಟು ಸಿಬ್ಬಂದಿಗಳನ್ನು ಸೇವೆಯಿಂದ ವಜಾಗೊಳಿಸಲಾಗಿದೆ ?

## ಭೂ ಸುರಕ್ಷಾ ಯೋಜನೆಯ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೮೯ (೧೬೦೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ಸುರಕ್ಷಾ ಯೋಜನೆಯ ಉದ್ದೇಶ ಏನು ;

(ಆ) ಸದರಿ ಯೋಜನೆ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯೋ ಅಥವಾ ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆಯೋ ; ಮಾಹಿತಿ ನೀಡುವುದು ;

(ಇ) ಭೂ ಸುರಕ್ಷಾ ಯೋಜನೆಗೆ ಅಂದಾಜಿಸಲಾದ ಮೊತ್ತ ಎಷ್ಟು; ಭೂ ಸುರಕ್ಷಾ ಯೋಜನೆಗೆ ಕೇಂದ್ರ ಸರ್ಕಾರದ ಅನುದಾನ ಎಷ್ಟು ;

(ಈ) ಭೂ ಸುರಕ್ಷಾ ಯೋಜನೆಗೆ ಸಂಬಂಧಿಸಿದಂತೆ, ವಿಧಾನ ಪರಿಷತ್ ಶಾಸಕರಿಗೆ ಶಿಷ್ಠಾಚಾರ ಉಲ್ಲಂಘನೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಶಿಷ್ಠಾಚಾರ ಉಲ್ಲಂಘನೆ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು ?

## ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಸ್ಥಿರಾಸ್ತಿಗಳ ಬೆಲೆ ಕಡಿಮೆ ಮಾಡಿರುವ ಬಗ್ಗೆ

**ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೦ (೧೫೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ದಕ್ಷಿಣ ತಾಲ್ಲೂಕು ಕೆಲವು ಗ್ರಾಮಗಳ ಸರ್ವೆ ನಂಬರ್‌ಗಳ ಸ್ಥಿರಾಸ್ತಿಗಳ ನೋಂದಣಿಯಲ್ಲಿ ಆಸ್ತಿಗಳ ಕಡಿಮೆ ಮೌಲ್ಯಮಾಪನ ಮಾಡಿ ನೋಂದಾಯಿಸಿರುವುದು ಹಾಗೂ ಗಂಗೇನಹಳ್ಳಿ, ವರ್ತೂರು, ನರಸೀಪುರ ಹಾಗೂ ಪದ್ದನಪಾಳ್ಯ ಗ್ರಾಮದಲ್ಲಿ ಸರ್ಕಾರಿ ಜಮೀನಿಗೆ ನಕಲಿ ಮ್ಯೂಟೇಶನ್ ರಿಜಿಸ್ಟರ್ ಸೃಷ್ಟಿಸಿ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಜಮೀನಿನ ಸಂಪೂರ್ಣ ಮಾಹಿತಿ ನೀಡುವುದು ; ಈ ಕುರಿತು ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟವೆಷ್ಟು ;

(ಆ) ನಕಲಿ ಮ್ಯೂಟೇಶನ್ ರಿಜಿಸ್ಟರ್ ಸೃಷ್ಟಿಸಿ ಖಾತೆ ಮಾಡಿರುವ ಜಮೀನನ್ನು ಸರ್ಕಾರ ಹಿಂಪಡೆದುಕೊಂಡಿದೆಯೇ ; ಹಿಂಪಡೆದಿದ್ದಲ್ಲಿ, ಜಮೀನನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ;

ಹಿಂಪಡೆಯದಿದ್ದಲ್ಲಿ, ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳಲಾಗುವುದು ;

(ಇ) ನಕಲಿ ಮ್ಯೂಟೇಶನ್ ರಿಜಿಸ್ಟರ್ ಸೃಷ್ಟಿಸಿರುವ ಮತ್ತು ಕಡಿಮೆ ಮೌಲ್ಯಮಾಪನ ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳು ಯಾರು ; ಅವರುಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು ? (ಸಂಪೂರ್ಣ ವಿವರ ನೀಡುವುದು)

## ಉಡುಪಿ ಮತ್ತು ಮಂಗಳೂರು ಆರ್‌ಟಿಓ ಕಛೇರಿಗಳಲ್ಲಿ ಐಷಾರಾಮಿ ಕಾರುಗಳ ಖೊಟ್ಟಿ ದಾಖಲೆಯ ಪ್ರಕರಣದ ಕುರಿತು

**ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೧ (೧೫೭೭೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಮತ್ತು ಮಂಗಳೂರು ಆರ್.ಟಿ.ಓ. ಕಛೇರಿಯಲ್ಲಿ ಐಷಾರಾಮಿ ಕಾರುಗಳ ನೋಂದಣಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ನಿಜವಾದ ವಾಹನದ ಮೌಲ್ಯವನ್ನು ಮರೆಮಾಚಿ ರಿಜಿಸ್ಟ್ರೇಷನ್ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯ ಸಂಪೂರ್ಣ ವಿವರ ನೀಡುವುದು ;

(ಆ) ಇದೇ ಪ್ರಕರಣದಲ್ಲಿ ವಾಹನದ ಮೂಲ ಮೌಲ್ಯವನ್ನು ಮರೆಮಾಚಿ ಕಡಿಮೆ ಬೆಲೆ ಪರಿಗಣಿಸಿ, ವಾಹನದ ತಾತ್ಕಾಲಿಕ ನೋಂದಣಿ ವಿವರಗಳನ್ನು ಮಾರ್ಪಾಡು ಮಾಡಿರುವ ಕೇಂದ್ರ ಕಛೇರಿಯಲ್ಲಿ ವಾಹನ ನೋಂದಣಿಗೆ ಅನುಮತಿ ನೀಡಿರುವ ಹಿರಿಯ ಅಧಿಕಾರಿಗಳ ವಿವರ ನೀಡುವುದು ;

(ಇ) ಐಷಾರಾಮಿ ಕಾರುಗಳ ನೋಂದಣಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ವಾಹನ ನೋಂದಣಿಗಾಗಿ ಅನುಮತಿ ನೀಡಿರುವ ಸದರಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ ; ಬಂದಿದ್ದಲ್ಲಿ, ಕ್ರಮ ಕೈಗೊಳ್ಳದಿರಲು ಕಾರಣಗಳೇನು ; ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ?

## ಕೊಡಗು ಜಿಲ್ಲೆಯ ಪಶು ಆಸ್ಪತ್ರೆ ಮತ್ತು ಸಿಬ್ಬಂದಿಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೪೯೨ (೧೬೨೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿನ ಪಶು ಆಸ್ಪತ್ರೆಗಳಲ್ಲಿ ಪಶು ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವೈದ್ಯರು ಮತ್ತು ಸಿಬ್ಬಂದಿಗಳ ನೇಮಕಾತಿಗೆ ಕ್ರಮಕೈಗೊಳ್ಳಲಾಗಿದೆಯೇ ; (ಸಂಪೂರ್ಣ ವಿವರ ನೀಡುವುದು)

(ಆ) ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ; ಸದರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಇ) ಜಾನುವಾರುಗಳು, ಇತರೆ ಪ್ರಾಣಿಗಳ ಆರೈಕೆಗೆ ಹಾಗೂ ತುರ್ತು ಚಿಕಿತ್ಸೆಗಾಗಿ ತಾಲ್ಲೂಕುವಾರು ಕೈಗೊಂಡಿರುವ ಕ್ರಮಗಳಾವುವು ?

## ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೩ (೧೬೦೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಈ ವರ್ಷ (೨೦೨೫–೨೬) ಅತಿವೃಷ್ಟಿಯಿಂದ ಹಾನಿಗೊಳಗಾದ ಪ್ರದೇಶದ ಸಮೀಕ್ಷೆ

ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಎಕರೆ ಪ್ರದೇಶ ಬೆಳೆ ಹಾನಿಗೊಳಗಾಗಿದೆ ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಹಾನಿಗೊಳಗಾದ ಪ್ರತಿ ಎಕರೆಗೆ ನೀಡಲಾಗಿರುವ ಪರಿಹಾರದ ಮೊತ್ತ ಎಷ್ಟು ; ಪ್ರತಿ ರೈತನಿಗೆ ಗರಿಷ್ಟ ಎಷ್ಟು ಎಕರೆಗೆ ಪರಿಹಾರ ನೀಡಲಾಗಿದೆ ; (ಮಾಹಿತಿ ನೀಡುವುದು)

(ಇ) ಈ ವರ್ಷದ ಅತಿವೃಷ್ಟಿಯಿಂದ ಹಾನಿಗೊಳಗಾದ ಮನೆಗಳ ಸಂಖ್ಯೆ ಎಷ್ಟು: ಭಾಗಶಃ ಮತ್ತು ಸಂಪೂರ್ಣ ಹಾಳಾಗಿರುವ ಮನೆಗಳ ಸಂಖ್ಯೆ ಎಷ್ಟು ; ಈ ಮನೆಗಳನ್ನು ಕಳೆದುಕೊಂಡವರಿಗೆ ನೀಡಲಾಗರುವ ಪರಿಹಾರದ ಮೊತ್ತ ಎಷ್ಟು ; (ಕಲ್ಯಾಣ ಕರ್ನಾಟಕದ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯಕ್ಕೆ ೨೦೨೫–೨೬ನೇ ಸಾಲಿನಲ್ಲಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ನೀಡಲಾದ ಪರಿಹಾರದ ಮೊತ್ತ ಎಷ್ಟು; ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ನೀಡಲಾದ ಮೊತ್ತ ಎಷ್ಟು? (ಪ್ರತ್ಯೇಕ ಮಾಹಿತಿಯನ್ನು ಜಿಲ್ಲಾವಾರು ನೀಡುವುದು)

## ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೪ (೧೬೫೯) ಮಾನ್ಯ ವಸತಿ, ವಕ್ಫ್‌ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಎಷ್ಟು ಮನೆಗಳು ಪೂರ್ಣವಾಗಿದೆ ; ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಕಾಮಗಾರಿ ಪ್ರಗತಿಯಲ್ಲಿರುವ ಮನೆಗಳು ಎಷ್ಟು; ಕಾಮಗಾರಿಯೂ ಯಾವ ಹಂತದಲ್ಲಿದೆ; ಯಾವ ರಾಜ್ಯದಲ್ಲಿ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ನಕಲಿ ದಾಖಲೆ ನೀಡಿ ಪ್ರಧಾನಮಂತ್ರಿ ಆವಾಸ್ ಯೋಜನೆಯ ದುರ್ಬಳಕೆ ಮಾಡಿಕೊಂಡಿರುವಂತಹ ಪ್ರಕರಣಗಳು ಎಷ್ಟು: ಅದರಲ್ಲಿ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)

## ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಾಳಾಗಿರುವ ರಸ್ತೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೫ (೧೬೬೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲೋಕೋಪಯೋಗಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಕಳೆದ ೨ ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಎಷ್ಟು ರಸ್ತೆಗಳು ಮತ್ತು ಎಷ್ಟು ಸೇತುವೆಗಳ ಕಾಮಗಾರಿ ನಡೆದಿದೆ ; ಅದಕ್ಕೆ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಭಾಗದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಟೆಂಡರ್ ಪಡೆದು ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಸರ್ಕಾರ ಪಾವತಿಸಲು ಬಾಕಿಯಿರುವ ಮೊತ್ತ ಎಷ್ಟು ; (ಗುತ್ತಿಗೆದಾರರ ಹೆಸರು, ಬಾಕಿ ಇರುವ ಮೊತ್ತ, ಕಾಮಗಾರಿಯ ವಿವರದೊಡನೆ ಮಾಹಿತಿ ನೀಡುವುದು)

(ಈ) ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ಕಿ.ಮೀ ಉದ್ದದ ರಸ್ತೆ ಹಾಳಾಗಿರುತ್ತದೆ ; ರಸ್ತೆಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ಸಿಬ್ಬಂದಿಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೬ (೧೬೬೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕೋಪಯೋಗಿ ಇಲಾಖೆಯಲ್ಲಿ ನೇಮಕಗೊಂಡು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಧಾನ ಇಂಜಿನಿಯರ್, ಮುಖ್ಯ ಇಂಜಿನಿಯರ್, ಅಧೀಕ್ಷಕ ಇಂಜಿನಿಯರ್ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್ ಸಿಬ್ಬಂದಿಗಳು ಎಷ್ಟು ; ಸದರಿಯವರು ಬೇರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ; (ಯಾರು ಯಾರು ವಿವರವಾಗಿ ಸಿಬ್ಬಂದಿ/ಅಧಿಕಾರಿ ಹೆಸರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ ಇಲಾಖೆ ವಿವರಗಳೊಂದಿಗೆ ನೀಡುವುದು)

(ಆ) ೨೦೦೨ನೇ ಸಾಲಿನಿಂದ ಇಲ್ಲಿಯವರೆಗೆ ಸದರಿ ಇಲಾಖೆಗೆ ಕೆಪಿಎಸ್‌ಸಿ ಮತ್ತು ಕೆಇಎ ಹಾಗೂ ಇಲಾಖೆಯಿಂದ ನೇರವಾಗಿ ನೇಮಕಗೊಂಡ ವಿವಿಧ ವೃಂದದ ಇಂಜಿನಿಯರ್‌ಗಳು ಎಷ್ಟು; (ವಿವರವಾಗಿ ವೃಂದವಾರು, ವರ್ಷವಾರು, ನೇಮಕಾತಿ ಪ್ರಾಧಿಕಾರವಾರು ವಿವರವಾದ ಮಾಹಿತಿ ನೀಡುವುದು) ಚಿಕ್ಕಮಗಳೂರು ಜಿಲ್ಲೆ ಶ್ರೀ ಫಲಹಾರ ಸ್ವಾಮಿ ಮಠದ ರಸ್ತೆ ತೀರ

ಹಾಳಾಗಿರುವುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಯಾವ ಕಾಲಮಿತಿಯೊಳಗೆ ರಸ್ತೆ ನಿರ್ಮಾಣ ಮಾಡಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿರುವ ಸ್ಲಂಗಳ ಅವ್ಯವಸ್ಥೆ ಮತ್ತು ವಾಸಕ್ಕೆ ಯೋಗ್ಯವಿಲ್ಲದಿರುವ ಕುರಿತು

**ಡಾ॥ ತಳವಾರ್ ಸಾಬ್ಬಣ (ನಾಮನಿರ್ದೇಶನ ಹೊಂದಿದವರು) :–**

೧೪೯೭ (೧೬೧೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿರುವ ಸ್ಲಂಗಳ ಜನರು ವಾಸಿಸಲು ಯೋಗ್ಯವಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮೂಲಭೂತ ಸೌಕರ್ಯಗಳ ಕೊರತೆಗಳಿಂದ ಸ್ಲಂಗಳಲ್ಲಿ ವಾಸಿಸುತ್ತಿರುವ ಜನರು ರೋಗ–ರುಜಿನಗಳಿಗೆ ಬಲಿಯಾಗಿ ನರಕದ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇವುಗಳ ಪರಿಹಾರಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಇ) ರಾಜ್ಯದ ಸುಮಾರು ೭೦ ಲಕ್ಷ ನಿವಾಸಿಗಳು ಮೂಲಭೂತ ಸೌಕರ್ಯಗಳಿಲ್ಲದೆ ಜೀವನ ನಡೆಸುತ್ತಿದ್ದು ಸುಸಜ್ಜಿತ ನಿವೇಶನಗಳನ್ನು ಒದಗಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ; ಸ್ಲಂಗಳಲ್ಲಿ ವಾಸಿಸುತ್ತಿರುವ ಜನರ ಸಾಮಾಜಿಕ–ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗಿದೆಯೇ ? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯ ಸಾರಿಗೆ ವಿಭಾಗದ ಅಭಿವೃದ್ಧಿ ಮತ್ತು ಬಸ್‌ಗಳ ಕಾರ್ಯಾಚರಣೆ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೪೯೮ (೧೬೪೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ಕೆ.ಕೆ.ಆರ್.ಟಿ.ಸಿ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಾದರಿಯ ಬಸ್‌ಗಳ ಒಟ್ಟು ಸಂಖ್ಯೆ ಎಷ್ಟು ; (ಘಟಕವಾರು ಮಾಹಿತಿ ನೀಡುವುದು)

(ಆ) ಜಿಲ್ಲೆಯಲ್ಲಿ ಸಂಚರಿಸುತ್ತಿರುವ ಬಸ್‌ಗಳಲ್ಲಿ ೯ ಲಕ್ಷ ಕಿ.ಮೀ ಗಿಂತ ಹೆಚ್ಚು ಸಂಚರಿಸಿದ ಅಥವಾ ೧೦ ವರ್ಷ ಹಳೆಯದಾದ ಎಷ್ಟು ಬಸ್‌ಗಳನ್ನು ಈವರೆಗೆ ನಿವೃತ್ತಿಗೊಳಿಸಲಾಗಿದೆ ಮತ್ತು ಅವುಗಳ ಬದಲಿಗೆ ಹೊಸ ಬಸ್‌ಗಳ ಸೇರ್ಪಡೆ ಯಾವ ಹಂತದಲ್ಲಿದೆ ;

(ಇ) ಕಲಬುರಗಿ ನಗರವು ವೇಗವಾಗಿ ಬೆಳೆಯುತ್ತಿರುವುದರಿಂದ ನಗರ ಸಾರಿಗೆಗಾಗಿ ಹೆಚ್ಚುವರಿ ಬಸ್‌ಗಳನ್ನು ಮಂಜೂರು ಮಾಡುವ ಹಾಗೂ ಎಲೆಕ್ಟ್ರಿಕ್ ಬಸ್‌ಗಳನ್ನು (e-Buses) ಪರಿಚಯಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಬಸ್‌ಗಳ ಕೊರತೆಯಿಂದ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಕಲಬುರಗಿ ಪ್ರಾದೇಶಿಕ ವರ್ಕ್ ಶಾಪ್‌ನಲ್ಲಿ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಹೊಸ ನೇಮಕಾತಿ ಅಥವಾ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆಯೇ ?

## ಕಲಬುರಗಿ ಜಿಲ್ಲೆಯಲ್ಲಿ ಬೆಳೆ ಹಾನಿ ಪರಿಹಾರ ವಿತರಣೆ ಮತ್ತು ಬಾಕಿ ಪ್ರಕರಣಗಳ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೪೯ (೧೬೪೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಎರಡು ವರ್ಷಗಳಲ್ಲಿ (೨೦೨೨-೨೩ ಮತ್ತು ೨೦೨೩-೨೪) ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಠಿ ಮತ್ತು ಬರಗಾಲದಿಂದ ಹಾನಿಗೊಳಗಾದ ಬೆಳೆಗಳ ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾಕು ಮಾಹಿತಿ ನೀಡುವುದು)

(ಆ) ಸದರಿ ಜಿಲ್ಲೆಯಲ್ಲಿ ಪರಿಹಾರಕ್ಕಾಗಿ ನೋಂದಾಯಿಸಿಕೊಂಡ ಒಟ್ಟು ರೈತರ ಸಂಖ್ಯೆ ಎಷ್ಟು ಮತ್ತು ಈ ಪೈಕಿ ಎಷ್ಟು ಜನರಿಗೆ ಇದುವರೆಗೆ ಪರಿಹಾರ ವಿತರಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾದ ತೊಗರಿ (Red Gram) ಬೆಳೆಗೆ ತಗುಲಿದ ನೆಟೆ ರೋಗ ಹಾಗೂ ಹವಾಮಾನ ವೈಪರೀತ್ಯದಿಂದಾದ ಹಾನಿಗೆ ಜಿಯೋ-ಟ್ಯಾಗಿಂಗ್ ಸಮೀಕ್ಷೆ ಪೂರ್ಣಗೊಂಡಿದೆಯೇ ; ಪೂರ್ಣಗೊಂಡಿದ್ದಲ್ಲಿ, ಬಿಡುಗಡೆಯಾದ ಅನುದಾನವೆಷ್ಟು ?

## ಕಲಬುರಗಿ ಜಿಲ್ಲೆಯ ಸರ್ಕಾರಿ ಕಟ್ಟಡಗಳ ದುರಸ್ತಿ, ನಿರ್ವಹಣೆ ಮತ್ತು ಸುರಕ್ಷತೆಯ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೫೦೦ (೧೬೪೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ಅತ್ಯಂತ ಜೀರ್ಣಾವಸ್ಥೆಯಲ್ಲಿರುವ ಮತ್ತು ತುರ್ತು ದುರಸ್ತಿ ಅಗತ್ಯವಿರುವ ಒಟ್ಟು ಸರ್ಕಾರಿ ಕಟ್ಟಡಗಳ ಸಂಖ್ಯೆ ಎಷ್ಟು ; (ಇಲಾಖಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ಒಂದು ವರ್ಷದಲ್ಲಿ ಜಿಲ್ಲೆಯ ಸರ್ಕಾರಿ ಕಟ್ಟಡಗಳ ವಾರ್ಷಿಕ ನಿರ್ವಹಣೆಗಾಗಿ (Anuual Mainteance) ಜಿಲ್ಲೆಯ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಮತ್ತು ಪ್ರಾಥಮಿಕ

ಆರೋಗ್ಯ ಕೇಂದ್ರಗಳ (HPC) ಕಟ್ಟಡಗಳ ಸುರಕ್ಷತಾ ಪರಿಶೀಲನೆಯನ್ನು (Safety Audit) ನಡೆಸಲಾಗಿದೆಯೇ ; ನಡೆಸಿದ್ದಲ್ಲಿ, ಎಷ್ಟು ಕಟ್ಟಡಗಳನ್ನು 'ಅಸುರಕ್ಷಿತ' ಎಂದು ಗುರುತಿಸಲಾಗಿದೆ ;

(ಇ) ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು ; ಈ ಪೈಕಿ ಎಷ್ಟು ಹಣವನ್ನು ಪ್ರಸಕ್ತ ಸಾಲಿನಲ್ಲಿ ಬಳಸಿಕೊಳ್ಳಲಾಗಿದೆ ;

(ಈ) ಜೀರ್ಣಾವಸ್ಥೆಯಲ್ಲಿರುವ ಅತ್ಯಂತ ಹಳೆಯ ಕಟ್ಟಡಗಳನ್ನು ತೆರವುಗೊಳಿಸಿ, ಅವುಗಳ ಜಾಗದಲ್ಲಿ ಹೊಸ ಕಟ್ಟಡಗಳ ಪುನರ್‌ನಿರ್ಮಾಣಕ್ಕೆ (Reconstruction) ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ ;

(ಉ) ಕಟ್ಟಡಗಳ ಕಾಮಗಾರಿ ಮತ್ತು ದುರಸ್ತಿಯ ಗುಣಮಟ್ಟವನ್ನು ಪರಿಶೀಲಿಸಲು ಜಿಲ್ಲಾಮಟ್ಟದಲ್ಲಿ ತಾಂತ್ರಿಕ ಮೇಲ್ವಿಚಾರಣೆ ತಂಡ (Technical Monitoring Team) ಕಾರ್ಯನಿರ್ವಹಿಸುತ್ತಿದೆಯೆ ; ಇಲ್ಲದಿದ್ದಲ್ಲಿ, ಕಳಪೆ ಕಾಮಗಾರಿಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಮಾರುಕಟ್ಟೆ ಅಭಿವೃದ್ಧಿ ಪಡಿಸುವ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೧ (೧೬೪೨) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಲ್ಲಿ ಒಳನಾಡು ಮೀನುಗಾರಿಕೆ ಚಟುವಟಿಕೆಗಳು ಕುಂಠಿತಗೊಳ್ಳುತ್ತಿವೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ

ಬಂದಿದೆಯೇ, ಬಂದಿದಲ್ಲಿ ಜಿಲ್ಲೆಯ ಮೀನುಗಾರಿಕೆ ನಿಗಮಕ್ಕೆ ಹೆಚ್ಚಿನ ಅನುದಾನ ಒದಗಿಸಿ ಗ್ರಾಹಕರಿಗೆ ತಾಜಾ ಮೀನುಗಳನ್ನು ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಕಲಬುರಗಿ ನಗರ ಹಾಗೂ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಹೆಚ್ಚಿನ ಮೀನುಗಾರಿಕೆ ಸ್ಟಾಲ್ (Stall) ಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆಯೇ ; ಇಲ್ಲದಿದ್ದಲ್ಲಿ ಮೀನು ಮಾರಾಟಗಾರರಿಗೆ ಪ್ರೋತ್ಸಾಹ ನೀಡಲು ಸರ್ಕಾರಕ್ಕಿರುವ ಯೋಜನೆಯೇನು ;

(ಇ) ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಮೀನು ಮಾರುಕಟ್ಟೆಗಳನ್ನು ಆಧುನೀಕರಿಸಲು ಅಥವಾ ಹೊಸ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ; (ವಿವರ ನೀಡುವುದು)

(ಈ) ಜಿಲ್ಲೆಯಲ್ಲಿ ತಾಂತ್ರಿಕ ಕಾರಣಗಳಿಂದ (ಆಧಾರ್ ಮ್ಯಾಪಿಂಗ್, ಬ್ಯಾಂಕ್ ಖಾತೆ ಸಮಸ್ಯೆ) ಬಾಕಿ ಉಳಿದಿರುವ ಪರಿಹಾರ ಪ್ರಕರಣಗಳ ಸಂಖ್ಯೆ ಎಷ್ಟು; ಇವುಗಳನ್ನು ಇತ್ಯರ್ಥಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ಪರಿಹಾರ ವಿತರಣೆಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಲು ಮತ್ತು ರೈತರಿಗೆ ಸಕಾಲದಲ್ಲಿ ಹಣ ತಲುಪಿಸಲು ಸರ್ಕಾರವು ಜಿಲ್ಲಾ ಮಟ್ಟದಲ್ಲಿ ವಿಶೇಷ ಕೋಶವನ್ನು (Special Cell) ಸ್ಥಾಪಿಸುವ ಉದ್ದೇಶ ಹೊಂದಿದೆಯೇ ?

## ರಾಜ್ಯದಲ್ಲಿ ಹೊಸ ಬಸ್‌ಗಳನ್ನು ಖರೀದಿ ಮಾಡಿರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೫೦೨ (೧೬೮೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ಇಲ್ಲಿಯವರೆಗೂ ಸಾರಿಗೆ ಇಲಾಖೆಯು ಎಷ್ಟು ಹೊಸ ಬಸ್‌ಗಳನ್ನು ಖರೀದಿ ಮಾಡಿದೆ ;

(ಆ) ಪ್ರಸ್ತುತ ೪ ಸಾರಿಗೆ ನಿಗಮಗಳಲ್ಲಿ ಇರುವ ಬಸ್‌ಗಳ ಸಂಖ್ಯೆ ಎಷ್ಟು ಹಾಗೂ ನಿಗಮಕ್ಕೆ ಎಷ್ಟು ಆದಾಯ ಬಂದಿದೆ ;

(ಇ) ಸರ್ಕಾರ ಖಾಸಗಿ ಬಸ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಸಾರ್ವಜನಿಕ ಸೇವೆಗೆ ಒದಗಿಸಲು ಆಲೋಚಿಸಿದೆಯೇ ;

(ಈ) ಪ್ರಸ್ತುತ ಇರುವ ಬಸ್ ಮಾರ್ಗಗಳಲ್ಲಿ ಶೇಕಡಾ ಎಷ್ಟು ಮಾರ್ಗಗಳು ನಷ್ಟದಲ್ಲಿದೆ ; ಎಷ್ಟು ಮಾರ್ಗಗಳಿಂದ ಆದಾಯ ಬರುತ್ತಿದೆ ;

(ಉ) ಕಳೆದ ೩ ವರ್ಷದ ಅವಧಿಯಲ್ಲಿ ೪ ಸಾರಿಗೆ ನಿಗಮ ಮತ್ತು ಬಿ.ಎಂ.ಟಿ.ಸಿ ಬಸ್‌ಗಳಲ್ಲಿ ಪ್ರಯಾಣ ಮಾಡಿರುವ ಪ್ರಯಾಣಿಕರ ಸಂಖ್ಯೆ ಎಷ್ಟು ?

## ಹೊರರಾಜ್ಯದ ವಾಹನಗಳಿಗೆ ಅರ್ಹತಾ ಪ್ರಮಾಣ ಪತ್ರ ನೀಡಿರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೫೦೩ (೧೬೨) ಮಾನ್ಯ ಸಾರಿಗೆ ಮತ್ತು ಮುಜರಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಹೊರ ರಾಜ್ಯದ ವಾಹನಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು (ಎಫ್.ಸಿ) ನೀಡಲಾಗಿದೆ ; (ಕಛೇರಿವಾರು ವಿವರ ನೀಡುವುದು)

(ಆ) ಸಾರಿಗೆ ಇಲಾಖೆಯ ಮೋಟಾರು ವಾಹನ ನಿರೀಕ್ಷಕರು ಹೊರ ರಾಜ್ಯದ ಸುಮಾರು ೧೦ ಸಾವಿರ ವಾಹನಗಳಿಗೂ ಮೇಲ್ಪಟ್ಟು ನಿಯಮಬಾಹಿರವಾಗಿ ಅರ್ಹತಾ ಪ್ರಮಾಣ ಪತ್ರಗಳನ್ನು (ಎಫ್.ಸಿ) ನವೀಕರಿಸಿಕೊಟ್ಟಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಬಂದಿದ್ದಲ್ಲಿ, ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ರಾಜ್ಯದಲ್ಲಿ ವಾಹನಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು (ಎಫ್.ಸಿ) ನೀಡಲು ಸರ್ಕಾರ ಯಾವ ಮಾನದಂಡಗಳನ್ನು ಅನುಸರಿಸುತ್ತಿದೆ ;

(ಈ) ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೂ ರಾಜ್ಯ ಮತ್ತು ಹೊರರಾಜ್ಯದ ಎಷ್ಟು ವಾಹನಗಳಿಗೆ ಅರ್ಹತಾ ಪ್ರಮಾಣ ಪತ್ರಗಳನ್ನು (ಎಫ್.ಸಿ) ನವೀಕರಿಸಲಾಗಿದೆ ?

## ವಿದ್ಯಾರ್ಥಿ ವೇತನ ವಿದ್ಯಾಸಿರಿ ಶುಲ್ಕದ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೦೪ (೧೭೦೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೩ ರಿಂದ ೨೦೨೫ರ ಜೂನ್ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿಗಳ ವೇತನ, ವಿದ್ಯಾಸಿರಿ ಶುಲ್ಕ ಮರುಪಾವತಿ ಯೋಜನೆ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸದರಿ ಸಾಲಿನಲ್ಲಿ ಈ ಯೋಜನೆ ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳಲ್ಲಿ ವಿದ್ಯಾರ್ಥಿಗಳಿಗೆ ಡಿ.ಬಿ.ಟಿ ಮೂಲಕ ಪಾವತಿ ಮಾಡಿದ ಅರ್ಜಿಗಳ ಸಂಖ್ಯೆ ಎಷ್ಟು; ಮತ್ತು ಪಾವತಿ ಮಾಡಬೇಕಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಪಾವತಿ ಮಾಡದೇ ಇರಲು ಕಾರಣವೇನು ? (ತಾಲ್ಲೂಕುವಾರು ವಿವರ ನೀಡುವುದು)

## ಖಾಸಗಿ ಬಸ್‌ಗಳ ಅವಘಡಗಳ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೦೫ (೧೭೭೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ (೨೦೨೩ ಮತ್ತು ೨೦೨೫) ರಾಜ್ಯದಲ್ಲಿ ಖಾಸಗಿ ಬಸ್‌ಗಳ ನಿರ್ಲಕ್ಷ್ಯ, ತಾಂತ್ರಿಕ ದೋಷ ಅಥವಾ ಸುರಕ್ಷತಾ ನಿಯಮ ಉಲ್ಲಂಘನೆಯಿಂದ ಸಂಭವಿಸಿದ ಅಗ್ನಿ ಅವಘಡಗಳು ಹಾಗೂ ರಸ್ತೆ ಅವಘಾತಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡವುದು) ಮೇಲ್ಕಂಡ ಅವರ್ಘಡಗಳಲ್ಲಿ ಎಷ್ಟು ಮಂದಿ ಮೃತಪಟ್ಟಿದ್ದಾರೆ ಹಾಗೂ ಎಷ್ಟು ಮಂದಿ ಗಾಯಗೊಂಡಿದ್ದಾರೆ ;

(ಅ) ರಾಜ್ಯದಲ್ಲಿ ಸಂಚರಿಸುತ್ತಿರುವ ಖಾಸಗಿ ಬಸ್‌ಗಳಿಗೆ ಅಗ್ನಿ ಸುರಕ್ಷತೆ, ತುರ್ತು ನಿರ್ಗಮನ ದ್ವಾರ, ಫಿಟ್ನೆಸ್ ಪ್ರಮಾಣಪತ್ರ ಹಾಗೂ ಚಾಲಕರ ಕರ್ತವ್ಯ ಸಮಯದ ಕುರಿತು ಸರ್ಕಾರ ಜಾರಿಗೊಳಿಸಿರುವ ಕಠಿಣ ನಿಯಮಗಳು ಯಾವುವು ಅವುಗಳ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು ;

(ಇ) ಕಳೆದ ಮೂರು ವರ್ಷಗಳಲ್ಲಿ ಖಾಸಗಿ ಬಸ್‌ಗಳ ನಿರ್ಲಕ್ಷ್ಯ ಹಾಗೂ ನಿಯಮ ಉಲ್ಲಂಘನೆ ತಡೆಗಟ್ಟಲು ಸಾರಿಗೆ ಇಲಾಖೆ ನಡೆಸಿದ ವಿಶೇಷ ತಪಾಸಣೆಗಳ ಸಂಖ್ಯೆ ಎಷ್ಟು ನಿಯಮ ಉಲ್ಲಂಘಿಸಿದ ಬಸ್ ಮಾಲೀಕರ ವಿರುದ್ಧ ಎಷ್ಟು ಪ್ರಕರಣ ದಾಖಲಾಗಿದೆ ಹಾಗೂ ವಿಧಿಸಲಾದ ದಂಡದ ವಿವರ ನೀಡುವುದು ?

## ವಸತಿ ಯೋಜನೆಯಲ್ಲಿ ಮನೆ ಹಂಚಿಕೆ ಮಾಡುವ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೬ (೧೭೧೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ ಸರ್ಕಾರದ ಆದೇಶ ಸಂಖ್ಯೆ :ವಇ ೧೭೯ ಹೆಚ್‌ಎಹೆಚ್ ೨೦೨೪, ದಿನಾಂಕ: ೩೧/೧೦/೨೦೨೪ (ಆದೇಶ ೧೫) ರಲ್ಲಿ ೧೨೦೦ ಮನೆಗಳು ಮಂಜೂರಾಗಿದ್ದು, ಪ್ರಸ್ತುತ ಯಾವ ಹಂತದಲ್ಲಿದೆ ಒಂದು ವೇಳೆ ಮಂಜೂರಾದ ಮನೆಗಳನ್ನು ರದ್ದುಗೊಳಿಸಿದ್ದರೆ, ಯಾವ ಕಾರಣಕ್ಕಾಗಿ ರದ್ದುಗೊಳಿಸಲಾಗಿದೆ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ರಾಯಚೂರು ಜಿಲ್ಲೆಯ ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ ೧೨೦೦ ಮನೆಗಳು ರದ್ದಾದ ನಂತರ ಸದರಿ ಕ್ಷೇತ್ರದ ಬಡಜನರಿಗೆ ತುಂಬ ತೊಂದರೆಯಾಗುತ್ತಿರುವುದರಿಂದ ಮತ್ತೆ ೬೦೦ ಮನೆಗಳನ್ನು ಮರು ಹಂಚಿಕೆ ಮಾಡುವ ಅಥವಾ ಹೆಚ್ಚುವರಿ ಮನೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ಮನೆಗಳನ್ನು ಹಂಚಿಕೆ ಮಾಡಿ ಏಕಾಏಕಿ ರದ್ದುಗೊಳಿಸಿರುವುದರಿಂದ ಬಡಜನರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ಬಡ ಫಲಾನುಭವಿಗಳಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ೧೨೦೦ ಮನೆಗಳನ್ನು ಮರು ಹಂಚಿಕೆ ಮಾಡಲು ಕ್ರಮವಹಿಸಲಾಗುವುದೇ ಅಥವಾ ೬೦೦ ಮನೆಗಳನ್ನು ಮರು ಹಂಚಿಕೆ ಅಥವಾ ಮಂಜೂರು ಮಾಡಲು ಕ್ರಮವಹಿಸಲಾಗುವುದೇ ; ಸಂಪೂರ್ಣ ಮಾಹಿತಿ ನೀಡುವುದು ?

## ಶಾಂತನಪುರ ಗ್ರಾಮದ ಸರ್ವೆ ನಂ.೯ ರ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.)(ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೭ (೧೬೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಶಾಂತನಪುರ ಗ್ರಾಮದ ಸರ್ವೆ ನಂ. ೯ರ ಜಮೀನಿನ ಮಂಜೂರಾತಿಯ ಅಕ್ರಮದ ಬಗ್ಗೆ ಈ ಹಿಂದಿನ ಸರ್ಕಾರ ಲೋಕಾಯುಕ್ತ ತನಿಖೆ ನಡೆಸಲು ಆದೇಶಿಸಿದ್ದು, ಸರ್ಕಾರದ ಆದೇಶವನ್ನು ಪ್ರಶ್ನಿಸಿ ಘನ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಸರ್ಕಾರದ ಆದೇಶಕ್ಕೆ ಘನ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದು ಸಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ತಡೆಯಾಜ್ಞೆ ನೀಡಿ ಮೂರುವರೆ–ನಾಲ್ಕು ವರ್ಷವಾದರೂ ಸಹ ತಡೆಯಾಜ್ಞೆ ತೆರವುಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳದೇ ಇರಲು ಕಾರಣವೇನು ;

(ಇ) ಹಾಗಿದ್ದಲ್ಲಿ, ತಡೆಯಾಜ್ಞೆ ತೆರವುಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ರಾಜ್ಯದಲ್ಲಿ ಸರ್ಕಾರಿ ಜಮೀನನ್ನು ಭೂಕಬಳಿಕೆ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.)(ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೦೮ (೧೬೧೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಜಮೀನನ್ನು ಕಬಳಿಸಿರುವ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿದೆ ; (ಪ್ರಕರಣವಾರು ಭೂಕಬಳಿಕೆದಾರರ ಸಂಪೂರ್ಣ ವಿವರ ನೀಡುವುದು)

(ಆ) ಈ ಸರ್ಕಾರಿ ಜಮೀನು ಕಬಳಿಕೆಗೆ ಸಹಕರಿಸಿದ ಸರ್ಕಾರಿ ನೌಕರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ; (ವಿವರ ನೀಡುವುದು)

(ಇ) ಭೂ ಕಬಳಿಕೆ ಆಗಿರುವ ಜಮೀನಿನ ಪೈಕಿ ಎಷ್ಟು ಜಮೀನನ್ನು ಒತ್ತವರಿ ತೆರವುಗೊಳಿಸಿ ಸ್ವಾಧೀನಕ್ಕೆ ಪಡೆಯಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಮುಜರಾಯಿ ದೇವಸ್ಥಾನಗಳ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ.)(ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೪೯ (೧೬೧೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ದೇವಸ್ಥಾನಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಈ ದೇವಸ್ಥಾನಗಳ ತಿಂಗಳವಾರು ಆದಾಯವೆಷ್ಟು; ಆ ಆದಾಯದಿಂದ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ;

(ಇ) ಕಳೆದ ಎರಡು ವರ್ಷಗಳಲ್ಲಿ ದೇವಸ್ಥಾನಗಳ ಅಭಿವೃದ್ಧಿಗಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ

**ಡಾ. ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೧೦ (೧೬೦೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ೨೦೨೨ರಿಂದ ಇಲ್ಲಿಯವರೆಗೆ ಕೊಳಚೆ ಅಭಿವೃದ್ಧಿ ಮಂಡಳಿ ವತಿಯಿಂದ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮಂಜೂರಾಗಿರುವ ಅನುದಾನ ಎಷ್ಟು;

(ಆ) ಸದರಿ ಅನುದಾನದಲ್ಲಿ ಈ ಮೇಲ್ಕಂಡ ಜಿಲ್ಲೆಗಳಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿರುವ ಬಡಾವಣೆಗಳಲ್ಲಿ ವಾಸಿಸುವ ನಿವಾಸಿಗಳ ಮೂಲ ಸೌಕರ್ಯಗಳ ಸಮಸ್ಯೆಯನ್ನು ನಿವಾರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಸದರಿ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ಅವರ ಹೆಸರುಗಳಿಗೆ ನಿವಾಸಗಳನ್ನು ಇದುವರೆಗೂ ನೋಂದಾಯಿಸದಿರಲು ಕಾರಣವೇನು ಹಾಗೂ ಯಾವಾಗ ಇವರ ಸಮಸ್ಯೆಯನ್ನು ಪರಿಹರಿಸಲಾಗುವುದು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಬಗ್ಗೆ

**ಡಾ. ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೧೧ (೧೬೦೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ಪ್ರಾಯೋಜಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವು ;

(ಆ) ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳು ಯಾವುವು ;

(ಇ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನಕ್ಕೆ ೩ ವರ್ಷಗಳಿಂದ ದೊರೆತಿರುವ ನೆರವು ಮತ್ತು ಇತರೆ ಸೌಲಭ್ಯಗಳು ಯಾವುವು ?

## ಯಾದಗಿರಿ ನಗರದ ಹೊರವಲಯದಲ್ಲಿ ನಿರ್ಮಿಸುತ್ತಿರುವ R.T.O ಕಛೇರಿಯ ಬಗ್ಗೆ.

**ಡಾ. ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೫೧೨ (೧೬೦೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯಾದಗಿರಿ ನಗರದ ಹೊರವಲಯದ ಅಬ್ಬೆತುಮಕೂರು ಬಳಿ ಆರ್.ಟಿ.ಓ ಕಛೇರಿ ನಿರ್ಮಿಸಲಾಗುತ್ತಿದೆಯೇ; ನಿರ್ಮಿಸುತ್ತಿದ್ದಲ್ಲಿ, ಸದರಿ ಕಛೇರಿ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು ಹಾಗೂ ಇದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು;

(ಆ) ಸದರಿ ಕಾಮಗಾರಿ ವಿಳಂಬವಾಗಲು ಕಾರಣವೇನು ಹಾಗೂ ಪ್ರಸ್ತುತ ಕಾಮಗಾರಿ ವಸ್ತು ಸ್ಥಿತಿ ಏನು ; (ವಿವರ ನೀಡುವುದು.)

(ಇ) ಈ ಆರ್.ಟಿ.ಓ ಕಛೇರಿಯ ಉದ್ಘಾಟನೆಯನ್ನು ಯಾವಾಗ ಮಾಡಲಾಗುವುದು ಹಾಗೂ ಸಾರ್ವಜನಿಕರ ಸೇವೆಗೆ ಎಂದಿನಿಂದ ಲಭ್ಯವಾಗುವುದು ? (ವಿವರ ನೀಡುವುದು)

## ಮೀನುಗಾರಿಕೆ ವೃತ್ತಿಯ ಫಲಾನುಭವಿಗಳಿಗೆ ನೀಡುವ ಯೋಜನೆಗಳ ಕುರಿತು

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೫೧೩ (೧೬೨೯) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ವೃತ್ತಿಯಲ್ಲಿ ಕೈಗೊಂಡಿರುವ ಫಲಾನುಭವಿಗಳಿಗೆ ಸರ್ಕಾರ ನೀಡುತ್ತಿರುವ ಯೋಜನೆಗಳು ಯಾವುವು ; ಈ ಯೋಜನೆಗಳಿಗೆ ನಿಗಧಿ ಪಡಿಸಿರುವ ವೆಚ್ಚ ಎಷ್ಟು ;

(ಆ) ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ನೀಡುತ್ತಿರುವ ರಕ್ಷಣಾ ಯೋಜನೆಗಳು ಯಾವುವು ಇದರಿಂದ ಪ್ರಯೋಜನ ಪಡೆದಿರುವ ಮೀನುಗಾರರ ಸಂಖ್ಯೆ ಎಷ್ಟು ;

(ಇ) ಸಮುದ್ರಗಳಲ್ಲಿ ಮೀನುಗಾರಿಕೆ ಮಾಡುವ ಮೀನುಗಾರರಿಗೆ ವಿಮಾ ಸೌಲಭ್ಯವನ್ನು ನೀಡುವ ಪ್ರಸ್ತಾಪ ಸರ್ಕಾರದ ಗಮನಕ್ಕೆ

ಬಂದಿದೆಯೇ ; ಬಂದಿದ್ದಲ್ಲಿ, ಯೋಜನೆಯನ್ನು ಯಾವ ರೀತಿಯಾಗಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವು ?

## ಪಶುಸಂಗೋಪನೆ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಮಾಹಿತಿ

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೫೧೪ (೧೬೩೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಭರ್ತಿ ಮಾಡಿದ ಸಂಖ್ಯೆ ಹಾಗೂ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು/ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು ; ಎಲ್ಲಾ ಪಶು ಆಸ್ಪತ್ರೆಗಳಲ್ಲಿ ವೈದ್ಯರು ಲಭ್ಯವಿದ್ದಾರೆಯೇ ಪಶು ವೈದ್ಯರು ಇಲ್ಲದೇ ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ;

(ಇ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು: ಮುಖ್ಯವಾಗಿ ಪಶು ವೈದ್ಯರು ಇಲ್ಲದೇ ಇದ್ದಲ್ಲಿ ಪ್ರಾಣಿಗಳ ಆರೋಗ್ಯ ಕ್ಷೇಮವು ಸಾಧ್ಯವೇ ;

(ಈ) ಪಶು ವೈದ್ಯರು ಖಾಲಿಯಿರುವ ತಾಲ್ಲೂಕು ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ಯಾರು ಕಾರ್ಯ ನಿರ್ವಹಿಸುತ್ತಿದಾರೆ ; ಯಾವುದೇ ಪಶು ವೈದ್ಯರು ಇಲ್ಲದೇ ಇದ್ದಲ್ಲಿ ಪ್ರಾಣಿಗಳನ್ನು ರಕ್ಷಿಸುವುದು ಹೇಗೆ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

## ಪೋಡಿ ಮುಕ್ತ ಗ್ರಾಮಗಳ ಬಗ್ಗೆ

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೫೧೫ (೧೬೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇದುವರೆಗೂ ಪೂರ್ಣಗೊಂಡಿರುವ ಪೋಡಿ ಮುಕ್ತ ಗ್ರಾಮಗಳ ಸಂಖ್ಯೆ ಎಷ್ಟು;

(ಆ) ತುಮಕೂರು, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಎಷ್ಟು ಗ್ರಾಮಗಳನ್ನು ಪೋಡಿ ಮುಕ್ತ ಗ್ರಾಮ ಎಂದು ಘೋಷಿಸಲಾಗದೆ; ಬಾಕಿಯಿರುವ ಗ್ರಾಮಗಳ ಸಂಖ್ಯೆ ಎಷ್ಟು;

(ಇ) ಬಾಕಿಯಿರುವ ಗ್ರಾಮಗಳಲ್ಲಿ ರೈತರು ಅರ್ಜಿ ಸಲ್ಲಿಸಿದ್ದರೂ ಸಹ ಪೋಡಿ ಕಾರ್ಯಗಳನ್ನು ಕೈಗೊಳ್ಳದೇ ಇರಲು ಕಾರಣಗಳೇನು ;

(ಈ) ಈ ಜಿಲ್ಲೆಗಳಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಸಮಯ ನಿಗಧಿ ಪಡಿಸಲಾಗಿದೆಯೇ ; ನಿಗಧಿತ ಸಮಯದಲ್ಲಿ ಪೋಡಿ ಕಾರ್ಯವನ್ನು ಪೂರ್ಣಗೊಳಿಸದೇ ಇರುವ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿರುವ ಸರ್ಕಾರಿ ಬಸ್‌ಗಳ ವ್ಯವಸ್ಥೆ ಕುರಿತು

**ಶ್ರೀ ಎ. ವಸಂತ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೫೧೬ (೧೬೦೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಬಸ್‌ಗಳ ಸಂಖ್ಯೆ ಎಷ್ಟು;

(ಆ) ಗ್ರಾಮೀಣ ಹಾಗೂ ಗಡಿ ಭಾಗಗಳಲ್ಲಿ ಬಸ್ ಸೇವೆಗಳ ಕೊರತೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹೊಸ ಮಾರ್ಗಗಳನ್ನು ಪ್ರಾರಂಭಿಸಲು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಈ) ರಾಯಚೂರು ಬಸ್ ನಿಲ್ದಾಣ ಮೇಲ್ದರ್ಜೆಗೇರಿಸುವಿಕೆಗಾಗಿ ಮಂಜೂರಾದ ಅನುದಾನವೆಷ್ಟು;

(ಉ) ಮಹಿಳೆಯರ ಉಚಿತ ಪ್ರಯಾಣ ಯೋಜನೆಯಿಂದ ರಾಯಚೂರು ಜಿಲ್ಲೆಯಲ್ಲಿ ಪ್ರಯಾಣೀಕರ ಸಂಖ್ಯೆ ಎಷ್ಟು ಹೆಚ್ಚಾಗಿದೆ ?

## ಮೈಸೂರು ವ್ಯಾಪ್ತಿಯ ರೇಷ್ಮೆ ಉದ್ಯಮದ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೫೧೭ (೧೭೦೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಹಾಗೂ ಸುತಮುತ್ತಲ್ಲಿನ ಪ್ರಾಂತ್ಯದಲ್ಲಿ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ರೈತರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಈ ರೈತರಿಗೆ ಸರ್ಕಾರದ ವತಿಯಿಂದ ರೇಷ್ಮೆ ಉದ್ಯಮಕ್ಕೆ ಬೇಕಾಗುವ ಯಾವ ಯಾವ ಸಾಮಾಗ್ರಿಗಳನ್ನು ಸರ್ಕಾರ ನೀಡುತ್ತಿದೆ ; (ವಿವರ ಒದಗಿಸುವುದು)

(ಇ) ರಾಜ್ಯ ಸರ್ಕಾರದ ವತಿಯಿಂದ ರೇಷ್ಮೆ ಸೀರೆಯನ್ನು ತಯಾರು ಮಾಡುವ ಘಟಕ ಹಾಗೂ ಉಪಘಟಕಗಳ ಸಂಖ್ಯೆ ಎಷ್ಟು; ಅವುಗಳ ಯಾವುವು ; (ಪೂರ್ಣ ವಿವರ ನೀಡುವುದು)

(ಈ) ಈ ರೀತಿಯ ರೇಷ್ಮೆ ಘಟಕಗಳನ್ನು ಮುಚ್ಚುವ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆಯೇ ; (ಇದ್ದಲ್ಲಿ ವಿವರ ನೀಡುವುದು)

(ಉ) ಮೈಸೂರು ಜಿಲ್ಲೆಯ ಟಿ.ನರಸೀಪುರದ ಕೆ.ಎಸ್.ಐ.ಸಿಯ ಘಟಕದ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ರೇಷ್ಮೆ ನೂಲು ತೆಗೆಯುವ ಘಟಕ) ವನ್ನು ಮುಚ್ಚಿ ಈ ಪ್ರದೇಶದಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ? (ಮಾಹಿತಿ ನೀಡುವುದು )

# ಮೈಸೂರು ಮಂಡ್ಯ ಹಾಸನ–ಚಾಮರಾಜನಗರ ಜಿಲ್ಲೆಗಳಿಗೆ ಹೆಚ್ಚು ವಸತಿ ನೀಡುವ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೫೧೮ (೧೭೦೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮಂಡ್ಯ ಹಾಸನ ಚಾಮರಾಜನಗರ ಜಿಲ್ಲೆಗಳಿಗೆ ೨೦೨೫–೨೬ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಯಡಿ ಎಷ್ಟು ವಸತಿಗಳನ್ನು ನೀಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಈ ೪ ಜಿಲ್ಲೆಗಳಲ್ಲಿ ಬಹಳ ಹಿಂದುಳಿದ ಜನಾಂಗದವರು ವಾಸಿಸುತ್ತಿರುವುದರಿಂದ ಈ ಸಾಲಿನಲ್ಲಿ ಸರ್ಕಾರ ಹೆಚ್ಚು ವಸತಿಗಳನ್ನು ಮಂಜೂರು ಮಾಡಲು ಯಾವ ಕ್ರಮಗಳನ್ನು ಕೈಗೊಂಡಿದೆ ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. 0–198 /500 ಪ್ರತಿಗಳು/03-03-2026